# ಅಧ್ಯಾಯ ೪

# ಕಾರ್ಮಿಕರ ಚಳವಳಿ ಮತ್ತು ಶಿಕ್ಷಣ[೧]

# ೧೭೯೦-೧೮೩೨

ಕಳೆದ ಎರಡು ಅಧ್ಯಾಯಗಳು ಚಾಲ್ತಿಯಲ್ಲಿದ್ದ ಸ್ಥಾಪಿತ ಶಾಲೆಗಳನ್ನು ಕುರಿತ ಮಧ್ಯಮವರ್ಗದ ಟೀಕೆಯ ಬಗ್ಗೆ ಚರ್ಚಿಸಿದ್ದವು ಮತ್ತು ಆರ್ಥಿಕ ಹಾಗೂ ರಾಜಕೀಯ ವ್ಯವಹಾರಗಳನ್ನು ನಿರ್ದೇಶಿಸುವಂಥವರಿಗೆ, ಅಂಥ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವಂಥವರಿಗೆ ಹೊಸ ರೀತಿಯ, ವೈಜ್ಞಾನಿಕತೆಯ ಮೇಲೆ ಆಧಾರವಾದ ಶಿಕ್ಷಣಕ್ಕಾಗಿ ಬಂದ ಒತ್ತಾಯವನ್ನು ಕುರಿತು ಚರ್ಚಿಸಿದ್ದವು. ಇದರೊಂದಿಗೆ ಜನಸಮುದಾಯಕ್ಕೆ ನೀಡಬೇಕಾದ ಶಿಕ್ಷಣದ ಯೋಜನೆಗಳೂ ಇದ್ದವು. ಶಾಲೆಗಳಲ್ಲಿ, ವಯಸ್ಕ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ದುಬಾರಿಯಲ್ಲದ ಸಾಹಿತ್ಯ ಪ್ರಸರಣೆಯ ಮೂಲಕ ಸಹ ವಿಜ್ಞಾನವನ್ನು ಕುರಿತಾದ ಪ್ರಾಥಮಿಕ ತಿಳಿವಳಿಕೆಯನ್ನಾದರೂ ಲೌಕಿಕ ಮಾರ್ಗದಲ್ಲಿ ನೀಡುವ ಪ್ರಯತ್ನ ಅದು. ಈ ಪ್ರಯತ್ನದ ಹಿಂದೆಯಂತೂ ಇದ್ದದ್ದು ಅಂದಿನ ಮಧ್ಯಮ ವರ್ಗದ ಧೋರಣೆ. ಅಂದಿನ ಮಧ್ಯಮ ವರ್ಗ ಎಂದರೆ ಉದಯೋನ್ಮುಖ ಬೂರ್ಶ್ವಾವರ್ಗದ, ಬಂಡವಾಳಶಾಹಿಗಳ ಹಿತಾಸಕ್ತಿಯುಳ್ಳದ್ದು. ಈ ವರ್ಗಕ್ಕೆ ದುಡಿಯುವ ಜನರ ಮೇಲೆ ಚರ್ಚ್ ಮತ್ತು ಕುಲೀನ ವರ್ಗಕ್ಕೆ ಇದ್ದಂಥ ಹಿಡಿತವನ್ನು ಸಡಿಲಗೊಳಿಸಬೇಕಾಗಿತ್ತು ಮತ್ತು ಅದೇ ಸಮಯದಲ್ಲಿ ಬಂಡವಾಳಶಾಹಿ ಪದ್ಧತಿಗೆ ತೀವ್ರವಾಗಿ ವಿರುದ್ಧವಿರುವ ಆರ್ಥಿಕ ಸಿದ್ಧಾಂತಗಳ ಅಧ್ಯಯನದಿಂದ ಮತ್ತು ಪ್ರಚೋದನಕಾರಿ ಸಾಹಿತ್ಯವನ್ನು ಓದುವುದರಿಂದ ಕಾರ್ಮಿಕರನ್ನು ದೂರಕ್ಕೆ ಸೆಳೆಯುವ ಹಿತಾಸಕ್ತಿಯೂ ಇತ್ತು. ೧೮೩೨ಕ್ಕೆ ಮುಂಚಿನ ದಶಕಗಳಲ್ಲಿ ತತ್ತ್ವಶಾಸ್ತ್ರೀಯ ತೀವ್ರಗಾಮಿಗಳು ಪ್ರಜ್ಞಾಪೂರ್ವಕವಾಗಿಯೇ ಇಂಥ ಚಟುವಟಿಕೆಗಳ ಬದಲು ಬೂರ್ಶ್ವಾ (ಬಂಡವಾಳಶಾಹಿ) ರಾಜಕೀಯ, ಅರ್ಥಶಾಸ್ತ್ರ, ಸೌಮ್ಯವಾದಂತಹ ಉಪಯುಕ್ತ ಲೇಖನಗಳು, ಮಾಲಿಕರಿಗೆ ಪ್ರಯೋಜನವಾಗುವಂತಹ ತಾಂತ್ರಿಕ ತಿಳಿವಳಿಕೆ ಇಂಥವುಗಳನ್ನು ಕೆಲಸಗಾರರಿಗೆ ನೀಡುವುದಕ್ಕೆ ಒತ್ತುನೀಡಿದರು. (ತತ್ತ್ವಶಾಸ್ತ್ರೀಯ ತೀವ್ರಗಾಮಿಗಳು ಎಂದರೆ ಜೆರೆಮಿ ಬೆಂಥಮ್ ಮತ್ತು ಜಾನ್‌ಸ್ಟುವರ್ಟ್ ಮಿಲ್ ಮುಂತಾದ ಚಿಂತಕರ ಅನುಯಾಯಿಗಳು. ಇವರು ಯಾವುದು ಅತಿ ಹೆಚ್ಚು ಸಂತೋಷವನ್ನು ನೀಡುತ್ತದೆಯೋ ಅದೇ ನೈತಿಕವಾದದ್ದು ಎಂಬಂಥ ಯುಟಿಲಿಟೇರಿಯನಿಸಂ ಅಥವಾ ಪ್ರಯೋಜನವಾದ ಎಂಬ ಸಿದ್ಧಾಂತದ ಪ್ರತಿಪಾದಕರು.)

ಆಸ್ತಿವಂತ ವರ್ಗಗಳಲ್ಲಿ ಭಯವನ್ನೂ ಸಂಶಯವನ್ನೂ ಉಂಟುಮಾಡಿದ ಅಂಥ ರಾಜಕೀಯ ಚಟುವಟಿಕೆಗಳು ಯಾವುವು ಎಂಬುದನ್ನು ಪರೀಕ್ಷಿಸುವುದು ಈ ಸಂದರ್ಭದಲ್ಲಿ ಅವಶ್ಯಕ. ಕೆಲಸಗಾರರು ತಾವಾಗಿಯೇ ಏನನ್ನು ಕಲಿಯಲು

ಇಚ್ಛಿಸುತ್ತಿದ್ದರು ಮತ್ತು ಅದನ್ನು ಹೇಗೆ ಕಲಿಯುತ್ತಿದ್ದರು ಎಂಬುದನ್ನೂ ಗಮನಿಸೋಣ. ಅವರಿಗೂ ಸಹ ಸಾರ್ವತ್ರಿಕ ಜ್ಞಾನೋದಯದಲ್ಲಿ, ಅರಿವಿನ ಪ್ರಸರಣದಲ್ಲಿ ಆಸಕ್ತಿಯಿತ್ತು. ಆದರೆ ಅದು ದುಡಿಯುವ ವರ್ಗದ ಹಿತಾಸಕ್ತಿಯನ್ನು ಅಭಿವ್ಯಕ್ತಿಸಬೇಕು ಹಾಗೂ ಅದರ ಸಾಧನೆಗೆ ಸಹಾಯಕವಾಗಬೇಕು ಎಂಬುದು ಅವರ ಆಶಯವಾಗಿತ್ತು. ಹೀಗಾಗಿ ಅವರು ಕುಲೀನರ ವಿಗ್ ಪಕ್ಷದ ಸಂಪ್ರದಾಯವಾದಿಗಳ ತೀವ್ರವಾದಿ ಶಿಕ್ಷಣ ತಜ್ಞರ ಹಾಗೂ ಕೈಗಾರಿಕೋದ್ಯಮಿಗಳ ಹುನ್ನಾರಗಳನ್ನೂ ತಪ್ಪದೆ ಗ್ರಹಿಸಿಬಿಟ್ಟರು. ಬಂಡವಾಳಗಾರರ ಕೊಡುಗೆಯಿಂದ ನಡೆಯುತ್ತಿದ್ದ ಅಂದಿನ ವಯಸ್ಕ ತರಬೇತಿ ಕೇಂದ್ರಗಳಲ್ಲಿ, ಎಸ್.ಡಿ.ಯು.ಕೆ (ಸೊಸೈಟಿ ಫಾರ್ ದ ಡೆವಲಪ್‌ಮೆಂಟ್ ಆಫ್ ಯೂಸ್‌ಫುಲ್ ನಾಲೆಡ್ಜ್)ಗಳಲ್ಲಿ, ಬಡಬಗ್ಗರ ಕಲ್ಯಾಣ ಯೋಜನೆಗಳಲ್ಲಿ, ಶಾಲಾ ನೀತಿಗಳಲ್ಲಿ ಅಡಕವಾಗಿದ್ದ ಹಿತಾಸಕ್ತಿಗಳನ್ನು ಅವರು ಹೀಗೆಯೇ ಅರಿತುಕೊಂಡಿದ್ದರು.

ಆದರೆ ಇದಕ್ಕೆ ಸಾಕಷ್ಟು ಕಾಲಾವಧಿ ಬೇಕಾಯಿತು. ಕೆಲಸಗಾರರು ಪರಾವಲಂಬನಾ ಮನೋಭಾವದಿಂದಲೂ, ತಮ್ಮ ಮೇಲೆ ಹೇರಲ್ಪಟ್ಟ ಚಿಂತನೆಗಳಿಂದಲೂ ಬಿಡಿಸಿಕೊಳ್ಳಲು ಅನೇಕ ಮಾರ್ಗಗಳ ಮೂಲಕ ರಾಜಕೀಯ ಅರಿವನ್ನು ಗಳಿಸಿಕೊಳ್ಳಬೇಕಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಇದನ್ನು ಪಡೆದುಕೊಂಡದ್ದು ೧೭೭೦ರ ಜನಸಮುದಾಯದ ಹೋರಾಟಗಳಿಂದ. ಅದೇ ರೀತಿಯಲ್ಲಿ ೧೮೧೫-೧೯ರ ಅವಧಿಯಲ್ಲಿ ಯುದ್ಧ ನಿಂತು ಅದರಿಂದಾದ ಆರ್ಥಿಕ ಬಿಕ್ಕಟ್ಟು ಮತ್ತು ಹಠಾತ್ತಾಗಿ ಉಂಟಾದ ಸಂಕಟಗಳಿಂದಲೂ ಅವರು ಕಲಿಯಬೇಕಾಯಿತು.

ಅಂಥ ಸಂದರ್ಭದಲ್ಲಿ ತೀವ್ರವಾಗಿ ಪ್ರಗತಿಶೀಲವಾಗಿದ್ದ ರಾಜಕೀಯ ಚಿಂತನೆಗಳನ್ನು ಹರಡಿದ್ದು ಥಾಮಸ್ ಪೇಯ್ನ್‌ರವರ 'ರೈಟ್ಸ್ ಆಫ್ ಮ್ಯಾನ್' (ಮಾನವನ ಹಕ್ಕುಗಳು) ಪುಸ್ತಕ. ಫ್ರೆಂಚ್ ಮಹಾಕ್ರಾಂತಿಯ ನಂತರದ ಪ್ರಕ್ಷುಬ್ಧ ಪರಿಸ್ಥಿಯಲ್ಲಿ ಅದಕ್ಕೆ ಜನಮನ್ನಣೆ ದೊರಕಿತು. ಫ್ರೆಂಚ್ ಮಹಾಕ್ರಾಂತಿಯಿಂದಲೂ, ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮದಿಂದಲೂ ಪಡೆದ ಅನುಭವಗಳನ್ನು ಭಟ್ಟಿ ಇಳಿಸಿ ಪೇಯ್ನ್ ಎಲ್ಲ ಮನುಷ್ಯರೂ ಸಮಾನರು, ಎಲ್ಲರೂ ಹುಟ್ಟಿನಿಂದಲೇ ಸ್ವತಂತ್ರರು ಮತ್ತು ಎಲ್ಲ ಅಧಿಕಾರವೂ ಜನತೆಯಿಂದಲೇ ದತ್ತವಾದದ್ದು ಎಂದು ಪ್ರತಿಪಾದಿಸಿದರು. ತನ್ಮೂಲಕ ಆತ ಒಂದು ಹೊಸದಾದ ಜನತಾಂತ್ರಿಕ ದೃಷ್ಟಿಕೋನಕ್ಕೆ ಅಸ್ತಿಭಾರ ಹಾಕಿದರು. ಅನಂತರ ಆತ ತನ್ನ ಇನ್ನೊಂದು ಪುಸ್ತಕವಾದ "ಏಜ್ ಆಫ್ ರೀಸನ್" (ವಿಚಾರ ಯುಗ) ನಲ್ಲಿ ಅಂದಿನ ದಿನಗಳಲ್ಲಿ ಪ್ರಚಲಿತವಾಗಿದ್ದ ಧಾರ್ಮಿಕ ನಂಬಿಕೆಗಳನ್ನೂ ಉಗ್ರವಾದ ಟೀಕೆಗೆ ಗುರಿಪಡಿಸಿದರು. ಚರ್ಚ್ ಮತ್ತು ಕುಲೀನವರ್ಗಗಳ ಪ್ರಭಾವದಿಂದ ದುಡಿಯುವ ಜನತೆಯನ್ನು ಬಿಡುಗಡೆಗೊಳಿಸುವಲ್ಲಿ ಮತ್ತು ಸಾಮಾಜಿಕ ಬದಲಾವಣೆಗೆ ಅಡ್ಡಗಾಲು ಹಾಕುವಂತೆ ನಡೆಯುತ್ತಿದ್ದ ರಾಜಕೀಯ ಹಾಗೂ ಧಾರ್ಮಿಕ ಪ್ರಚಾರದ ಬಗ್ಗೆ

ಅವರ ಕಣ್ಣು ತೆರೆಸುವಲ್ಲಿ ಆತನ ಪ್ರಭಾವ ಬಹಳ ದೊಡ್ಡದು. ಇದು ಅಂದಿನ ಸರ್ಕಾರಗಳಿಗೆ ಎಷ್ಟು ಚೆನ್ನಾಗಿ ಮನವರಿಕೆಯಾಗಿತ್ತೆಂದರೆ ಇಂಗ್ಲೆಂಡಿನಲ್ಲಿ ಇಪ್ಪತ್ತು ವರ್ಷಗಳ ಕಾಲ ಪೇಯ್ನ್ ಗ್ರಂಥಗಳ ಪ್ರಕಟಣೆಯನ್ನು ನಿಷೇಧಿಸಲಾಗಿತ್ತು.

ಆಮ್ಲಜನಕ ಕಂಡುಹಿಡಿದ ಪ್ರೀಸ್ಟ್ ಲೀ ಒಬ್ಬ ಉದಾರವಾದಿ ಚಿಂತಕ ಸಹ. ಪ್ರೀಸ್ಟ್ ಲೀ ಮತ್ತು ಆತನ ಸಹೋದ್ಯೋಗಿಗಳಿಗೆ ಪ್ರೇರಣೆ ನೀಡಿದ ಚಿಂತನೆಗಳು ಯಾವುವೋ, ಮತ್ತೊಬ್ಬ ಜನತಾಂತ್ರಿಕ ಹೋರಾಟಗಾರ ಥಾಮಸ್ ವಾಕರ್‌ನನ್ನು ಕಟಕಟೆಗೆ ತಂದು ನಿಲ್ಲಿಸಿತೋ ಮತ್ತು ಫ್ರೆಂಡ್ ಮತ್ತು ಬೆರ್ಡ್ಮೋಸ್ ಅವರು ವಿಶ್ವವಿದ್ಯಾನಿಲಯದ ಸ್ಥಾನವನ್ನು ಕಳೆದುಕೊಳ್ಳುವಂತೆ ಮಾಡಿತೋ ಅವೇ ಚಿಂತನೆಗಳು ಕಾರ್ಮಿಕರ ನಡುವೆ ಪ್ರವೇಶ ಮಾಡಿದ್ದವು. ಕೇವಲ ಪೇಯ್ನ್‌ನನ್ನು ಮಾತ್ರವಲ್ಲದೆ ಜ್ಞಾನೋದಯದ ಚಿಂತಕರನ್ನು ಅಧ್ಯಯನ ಮಾಡಿದ್ದ ಕಾರ್ಮಿಕರು ವಿಚಾರದ ಶಕ್ತಿಯಲ್ಲಿ ಗಾಢವಾದ ನಂಬಿಕೆ, ವಿಜ್ಞಾನದ ಮಹತ್ತ್ವ, ಆಲೋಚನೆಯ ಸ್ವಾತಂತ್ರ್ಯದ ಅವಶ್ಯಕತೆ ಇವುಗಳನ್ನು ಮೆಚ್ಚಿಕೊಂಡಿದ್ದರು. ಈ ಅವಧಿಯುದ್ದಕ್ಕೂ ಜನತೆಯ ನಡುವೆ ಇಂತಹ ಅಭಿಪ್ರಾಯಗಳನ್ನು ಪ್ರಚುರಪಡಿಸಿದ್ದು ಸಾರ್ವಜನಿಕ ಪತ್ರಿಕಾ ರಂಗವೇ. ಸತತವಾಗಿದ್ದ ದಮನಕಾರಿ ಕಿರುಕುಳದ ನಡುವೆ ಸಹ ತಮಗೆ ಅಗತ್ಯವಾಗಿದ್ದ ಜ್ಞಾನಕ್ಕೋಸ್ಕರ ಕಾರ್ಮಿಕರು ನಡೆಸಿದ ಹೋರಾಟವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಂಡದ್ದು ಮುಕ್ತ ಪತ್ರಿಕಾ ಮಾಧ್ಯಮಕ್ಕಾಗಿ ನಡೆಸಿದ ಹೋರಾಟದಲ್ಲಿಯೇ. ಸಂಘ-ಸಂಸ್ಥೆಗಳಲ್ಲಿ ಶಿಕ್ಷಣ ನೀಡಲು ಸುಸಂಘಟಿತ ಪ್ರಯತ್ನ ನಡೆಯುತ್ತಿದ್ದರೆ, ಇನ್ನೊಂದೆಡೆ ಅನೇಕ ಜನ ವೈಯಕ್ತಿಕವಾಗಿ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಲು ವ್ಯಾಪಕವಾಗಿ ಅಧ್ಯಯನ ಮಾಡುತ್ತಿದ್ದರು. ಹೀಗಾಗಿ ೧೮೨೦ಕ್ಕೆ ಮುನ್ನ ರಾಬರ್ಟ್ ಓವೆನ್‌ರವರ ಸಿದ್ಧಾಂತಗಳೂ ಬೆಳೆಯುತ್ತಿದ್ದ ಕಾರ್ಮಿಕ ವರ್ಗದ ಹೋರಾಟಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರುವ ವೇಳೆಗೆ ಸ್ವಯಂ ಅಧ್ಯಯನದ ಒಂದು ರೂಢಿ ಆಗಲೇ ಅಸ್ತಿತ್ವದಲ್ಲಿತ್ತು.

ಆ ವೇಳೆಗೆ ನಾವು ಈಗಾಗಲೇ ಗಮನಿಸಿರುವಂತೆ ಅನೇಕ ಕಾರ್ಮಿಕರು ಕೆಲಸ ಮತ್ತು ಬದುಕಿನ ರೀತಿಯನ್ನೇ ಪಲ್ಲಟಿಸಿದ್ದ ಕೈಗಾರಿಕಾ ಬೆಳವಣಿಗೆಗಳ ವಿರುದ್ಧ ಹಿಂಸಾತ್ಮಕವಾಗಿ ಪ್ರತಿಕ್ರಿಯಿಸಿದ್ದರು. ಕೈಗಾರಿಕಾ ಉತ್ಪಾದನೆ ವಿಸ್ತರಣೆಗೊಳ್ಳುತ್ತಿದ್ದಂತೆ ಅನೇಕ ಸಣ್ಣ ಉತ್ಪಾದಕರು, ಚಿಕ್ಕ ಪುಟ್ಟ ಮಾಲಿಕರ ಕೆಳಗೆ ದುಡಿಯುತ್ತಿದ್ದ ಉದ್ಯೋಗಿಗಳು ತಮ್ಮ ಸಂಪಾದನೆಯ ಮೂಲವನ್ನು ಅಥವಾ ನೌಕರಿಯನ್ನು ಕಳೆದುಕೊಂಡರು. ವ್ಯಾಪಾರಸ್ಥರು, ಕುಶಲಕರ್ಮಿಗಳು, ಕೃಷಿ ಕಾರ್ಮಿಕರು, ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆಗಳಿಂದಾಗಿ ತಮ್ಮ ಜೀವನ ನಿರ್ವಹಣೆಗೆ ಸಂಚಕಾರ ಬಂದೊದಗಿದೆ ಎಂಬುದನ್ನು ಕಂಡುಕೊಂಡರು. ಇಂಥ ಸಂದರ್ಭಗಳಲ್ಲೆಲ್ಲ, ಜನ ತಮ್ಮ ಭೂತಕಾಲವನ್ನು ಸ್ಮರಿಸಿಕೊಳ್ಳುತ್ತಾ ಅದರಲ್ಲೊಂದು ವರ್ಣಮಯ ಬದುಕಿತ್ತು ಎಂದು ಭಾವಿಸಿದರು. ಅದೇ ಸಮಯದಲ್ಲಿ ವರ್ತಮಾನದ ಎಲ್ಲ ಕೆಡುಕುಗಳಿಗೂ

ಯಂತ್ರಗಳು ಮತ್ತು ಕಾರ್ಖಾನೆಗಳೇ ಕಾರಣ ಎಂದು ಆರೋಪಿಸಿದರು. ಇದಕ್ಕೆ ಮುನ್ನ ಅವರು ತಮ್ಮ ಉತ್ಪಾದನಾ ಸಾಮಗ್ರಿಗಳಿಗೆ ತಾವೇ ಒಡೆಯರಾಗಿದ್ದರು. ಆದರೆ ಈಗ ಅಂಥವುಗಳ ಮೇಲೆ ಕಾರ್ಖಾನೆಯ ಮಾಲಿಕರು ಮತ್ತು ದೊಡ್ಡ ಭೂಮಾಲಿಕರು ಏಕಸ್ವಾಮ್ಯ ಒಡೆತನವನ್ನು ಸ್ಥಾಪಿಸಿರುವುದೇ ತಮ್ಮ ಮೇಲೆ ನಡೆಯುತ್ತಿರುವ ಪ್ರಸ್ತುತ ದಮನಕ್ಕೆ ಮೂಲ ಕಾರಣ ಎಂದು ಅವರು ಅಂದುಕೊಂಡರು. ಕಾಬೆಟ್‌ರಂಥ ಪ್ರಚಾರಕರು ಕಾರ್ಮಿಕರ ಇಂಥ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಬಲಪಡಿಸಿದರು. ಅವರು ಆಸ್ತಿಯ ಏಕಸ್ವಾಮ್ಯಕ್ಕೆ ಭ್ರಷ್ಟ ಸರ್ಕಾರಗಳು ಮತ್ತು ನೀತಿಗಳು ಕಾರಣ ಎಂದು ವಾದಿಸಿದರು ಮತ್ತು ರಾಜಕೀಯ ಸುಧಾರಣೆ ಹಾಗೂ ಜನತಾಂತ್ರಿಕ ಸರ್ಕಾರಗಳ ಮೂಲಕ ಆಸ್ತಿಯ ಮರುಹಂಚಿಕೆ ಮಾಡಿ ಮತ್ತೊಮ್ಮೆ ಸರಳವಾದ ಸಮಾಜಕ್ಕೆ ಹಿಂತಿರುಗಬಹುದು ಎಂದು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ಓವೆನ್‌ರು ಸಹಕಾರ ತತ್ತ್ವ ಆಧಾರಿತ ಸಮುದಾಯಗಳನ್ನು ಕುರಿತ ತಮ್ಮ ಯೋಜನೆಯನ್ನು ಮುಂದಿಟ್ಟರು. ಅವರ ಕಲ್ಪನೆಗಳು ಫಲವತ್ತಾದ ನೆಲದ ಮೇಲೆ ಬಿದ್ದವು. ಅವು ಕೇವಲ ಕಾರ್ಮಿಕ ವರ್ಗಕ್ಕೆ ಆಕರ್ಷಕವಾಗಿರಲಿಲ್ಲ; ಅವು ಹೆಚ್ಚು ಹೆಚ್ಚು ವಾಣಿಜ್ಯೀಕರಣಗೊಂಡ ಜಗತ್ತಿನಲ್ಲಿ, ಸಮುದಾಯಕ್ಕೆ ಸೇವೆ ಸಲ್ಲಿಸಬೇಕೆಂಬ ಹೊಸ ಪರಿಕಲ್ಪನೆಗೆ ಸ್ವಾಗತ ಕೋರಿದ ವೃತ್ತಿಪರ ವರ್ಗಗಳಿಗೆ ಸಹ ಆಕರ್ಷಕವಾಗಿ ಕಂಡುಬಂದವು.

ಆದರೆ ಕಾರ್ಮಿಕ ವರ್ಗವು ಓವೆನ್‌ರ ಯೋಜನೆಗಳನ್ನು ಜಾರಿಗೊಳಿಸಲು ಶುರುಮಾಡಿದಂತೆ, ಆತನ ಬೋಧನೆಯ ಇತರ ಅಂಶಗಳೂ ಸಹ ಮುನ್ನೆಲೆಗೆ ಬಂದವು. ಮಾನವನ ಪ್ರಗತಿಗೆ ಎಲ್ಲ ಧರ್ಮಗಳೂ ಅಡ್ಡಿಯಾಗುತ್ತವೆ ಎಂಬುದು ಅವನ ಟೀಕೆ. ತಮ್ಮ ನೇರ ಅನುಭವದಿಂದಲೇ ಕಾರ್ಮಿಕ ವರ್ಗಕ್ಕೆ ಆ ಮಾತು ಸತ್ಯ ಅನಿಸುತ್ತಿತ್ತು. ಥಾಮಸ್ ಪೇಯ್ನ್‌ನಿಂದ ಅವರು ಪಡೆದುಕೊಂಡಿದ್ದ ಪುರೋಹಿತಶಾಹಿ ವಿರೋಧಿ, ವಿಚಾರಶೀಲ ಅಭಿಪ್ರಾಯಗಳೊಂದಿಗೂ ಅದು ತಾಳೆಯಾಗುತ್ತಿತ್ತು. ಶ್ರಮವೇ ಎಲ್ಲ ಸಂಪತ್ತನ್ನೂ ಸೃಷ್ಟಿಸುತ್ತದೆ, ಆದ್ದರಿಂದ ಶ್ರಮಿಕರು ಉತ್ಪಾದಿಸುವ ಎಲ್ಲವೂ ಒಂದಲ್ಲ ಒಂದು ರೂಪದಲ್ಲಿ ಅವರಿಗೇ ಮರಳಬೇಕು ಎಂಬ ಓವೆನ್‌ರವರ ಪ್ರತಿಪಾದನೆಗಂತೂ ಎಲ್ಲಕ್ಕಿಂತ ಹೆಚ್ಚು ಬೆಂಬಲ ದೊರಕಿತ್ತು. ಈ ವಾದವನ್ನು ಜಾನ್ ಗ್ರೇ ಮತ್ತು ವಿಲಿಯಂ ಥಾಂಪ್ಸನ್ ಇನ್ನಷ್ಟು ಮುಂದಕ್ಕೆ ಒಯ್ದರು. ಅವರಂತೂ ಕಾರ್ಮಿಕರ ಶೋಷಣೆ, ಸಂಕಟ, ಅಧಃಪತನಗಳಿಗೆ ಕಾರಣ ಆಸ್ತಿಯ ಏಕಸ್ವಾಮ್ಯ ಒಡೆತನ ಅಲ್ಲ, ಖಾಸಗಿ ಆಸ್ತಿ ಇರುವಂಥ ಸಾಂಸ್ಥಿಕ ರೂಪದ ವ್ಯವಸ್ಥೆಯೇ ಅದಕ್ಕೆ ಕಾರಣ; ಆದ್ದರಿಂದಲೇ ನ್ಯಾಯಯುತ ಸಮಾಜವು ಅಸ್ತಿತ್ವಕ್ಕೆ ಬರಬೇಕೆಂದರೆ ಕಾರ್ಮಿಕರು ಮಾಲಿಕರಿಂದ ರಾಜಕೀಯ ಅಧಿಕಾರವನ್ನೇ ಕಸಿದುಕೊಳ್ಳಬೇಕು ಎಂದು ಪ್ರತಿಪಾದಿಸಿದರು.

ಹೀಗಾಗಿ, ಇದರೊಂದಿಗೆ ಭ್ರೂಣಾವಸ್ಥೆಯಲ್ಲಿದ್ದ ಸಮಾಜವಾದಿ ಚಿಂತನೆಗಳ ಪ್ರಸರಣ ಆರಂಭವಾಯಿತು. ಈ ಆಶಯಗಳು ಶಿಕ್ಷಣದ ಸಿದ್ಧಾಂತ

ಮತ್ತು ಆಚರಣೆಯ ಒಳಗೂ ಪ್ರವೇಶಿಸಿದವು. ಇಂಥ ಚಿಂತನೆಯ ಒಂದು ಎಳೆಯು ಬೆಂಥಮ್‌ರವರ ರಾಜಕೀಯ ಸಿದ್ಧಾಂತದಿಂದ ಮೂಡಿಬಂತು. ಈ ಸಿದ್ಧಾಂತದ ಬೆಳಕಿನಲ್ಲಿಯೇ ಸಾರ್ವತ್ರಿಕ ಶಿಕ್ಷಣಕ್ಕಾಗಿ ಹೊಸ ರೀತಿಯ ಬೇಡಿಕೆ ಹುಟ್ಟಿಕೊಂಡಿತು. ಈ ಬೇಡಿಕೆಯನ್ನು ಎತ್ತಿದವರು ಸ್ವತಃ ಕಾರ್ಮಿಕರಲ್ಲದಿದ್ದರೂ ಕಾರ್ಮಿಕರ ದೃಷ್ಟಿಕೋನದಿಂದ, ಅವರ ಹಕ್ಕು ಮತ್ತು ಹಿತಾಸಕ್ತಿಗಳಿಗಾಗಿ ದನಿ ಎತ್ತಿದಂಥ ಕಾರ್ಮಿಕ ವರ್ಗದ ನಾಯಕರು. ಅವರು ತಮ್ಮ ನೇರ ಅನುಭವದಿಂದಲೂ, ಬಂಡವಾಳಶಾಹಿ ವ್ಯವಸ್ಥೆಯನ್ನು ಕೇವಲ ಟೀಕಿಸುವುದಲ್ಲದೆ ಅದರ ಒಳಹೊರಗನ್ನು ಬಿಚ್ಚಿಡಬಲ್ಲ ಬರೆವಣಿಗೆಗಳನ್ನು ಅಧ್ಯಯನ ಮಾಡುವುದರಿಂದಲೂ ಬಂದ ತಿಳಿವಳಿಕೆಯಿಂದ ಸಜ್ಜಿತರಾಗಿ ಒಂದು ಸ್ವತಂತ್ರವಾದ ಸಾಮಾಜಿಕ - ರಾಜಕೀಯ ಧೋರಣೆಯನ್ನು ಮುಂದಿಡಲಾರಂಭಿಸಿದರು. ತನ್ಮೂಲಕ ಅಂದಿನ ಶಿಕ್ಷಣ ವ್ಯವಸ್ಥೆಯನ್ನು ಕುರಿತು ತಮ್ಮದೇ ಆದ ಟೀಕೆ ಟಿಪ್ಪಣಿಗಳನ್ನು ಮುಂದಿಡುತ್ತಾ ಒಂದು ಹೊಚ್ಚ ಹೊಸ ನಿಲುವನ್ನು ಪ್ರತಿಪಾದಿಸಲಾರಂಭಿಸಿದರು.

ನಾವೀಗ ೧೭೯೦ರ ಕಾಲದತ್ತ ಹಿಂದಿರುಗಿ ನೋಡಿ ಅಂದಿನ ಕಾರ್ಮಿಕರು ಹೇಗೆ ತಮ್ಮ ಶಿಕ್ಷಣವನ್ನು ತಾವೇ ರೂಪಿಸಿಕೊಂಡರು, ತಮ್ಮ ಮಕ್ಕಳಿಗೆ ಎಂಥ ಕಲಿಕೆಯ ಯೋಜನೆಯನ್ನು ಹಮ್ಮಿಕೊಂಡರು ಹಾಗೂ ೧೮೩೨ಕ್ಕೆ ಮುಂಚಿನ ದಶಕಗಳಲ್ಲಿ ಅವರು ಕಟ್ಟಿಕೊಂಡ ಶೈಕ್ಷಣಿಕ ದೃಷ್ಟಿಕೋನ ಎಂಥದು ಎಂಬುದನ್ನು ಗಮನಿಸೋಣ.

## I. ಕಾರ್ಮಿಕರ ಸ್ವಯಂ ಶಿಕ್ಷಣ, ೧೭೯೦-೧೮೨೦

### (i) ಕರೆಸ್‌ಪಾಂಡಿಂಗ್ ಸೊಸೈಟಿಗಳು: (ಫ್ರೆಂಚ್ ಮಹಾಕ್ರಾಂತಿಯಿಂದ ಪ್ರೇರಿತವಾದ ಕುಶಲಕರ್ಮಿಗಳ ಪ್ರಗತಿಶೀಲ ಸಂಘ.)

೧೭೯೦ರ ದಶಕದ ಸಾಮೂಹಿಕ ರಾಜಕೀಯ ಆಂದೋಲನಗಳ ಫಲಶ್ರುತಿಯೆಂದರೆ ಕುಶಲಕರ್ಮಿಗಳು, ಸಣ್ಣ ವ್ಯಾಪಾರಸ್ಥರು ಮತ್ತು ಕಾರ್ಮಿಕರು ಕಲಿಕೆ ಮತ್ತು ಅಧ್ಯಯನವನ್ನು ಆರಂಭಿಸಿದರು. ಅವರು ರಾಜಕೀಯ ಹೋರಾಟಗಳಲ್ಲಿ ನೇರವಾಗಿ ಭಾಗವಹಿಸುವುದರಿಂದ, ಆಗಷ್ಟೇ ಆರಂಭವಾದ ಪ್ರಗತಿಶೀಲ ವೃತ್ತಪತ್ರಿಕೆಗಳನ್ನು ಓದುವುದರಿಂದ ಮತ್ತು ಜಾನ್ ಥೆಲ್‌ವಾಲ್, ಗೇಲ್ ಜೋನ್ಸ್ ಮತ್ತು ಹಾರ್ನ್ ಟೂಕ್ ಮುಂತಾದ ಪ್ರಚಾರಕರ ಪ್ರಚೋದನಶೀಲ ಭಾಷಣಗಳನ್ನು ಕೇಳುವುದರಿಂದ ಹೊಸ ಕಾಣ್ಕೆಯನ್ನು ಪಡೆದುಕೊಂಡರು. ಆದರೆ ಅವರಲ್ಲಿ ಹೆಚ್ಚು ಗಂಭೀರವಾಗಿ ತಮ್ಮನ್ನೇ ತೊಡಗಿಸಿಕೊಂಡಂಥವರು ಅವರಿಗಾಗೇ ಸೃಷ್ಟಿಯಾಗಿದ್ದ ಸಮಾಜಗಳ, ವರ್ಗ ಸಂಘಟನೆಗಳು ನೀಡುತ್ತಿದ್ದ ಶಿಸ್ತುಬದ್ಧ ಕಲಿಕೆಯ ಉಪಯೋಗವನ್ನು ಪಡೆದುಕೊಂಡರು.

ಈ ಸಮಾಜಗಳಲ್ಲಿ ಸಂಘಟಿತರಾದ ಕಾರ್ಮಿಕರು ಜನತೆಯ ನಡುವೆ ಸಾಮಾಜಿಕ ಹಾಗೂ ರಾಜಕೀಯ ಜ್ಞಾನವನ್ನು ಪ್ರಸರಿಸಬೇಕಾದ ಅಗತ್ಯವನ್ನು ಬೇಗನೆ ಕಂಡುಕೊಂಡರು. ಹೀಗಾಗಿ ಐದಾರು ಮಂದಿ ತಾಂತ್ರಿಕ ಕುಶಲಕರ್ಮಿಗಳು ಒಂದಾಗಿ ಶೇಫೀಲ್ಡ್ ಸೊಸೈಟಿಯನ್ನು ಆರಂಭಿಸಿದರು. ಅವರಿಗೆಲ್ಲ, "ಅಗತ್ಯ ವಸ್ತುಗಳ ಬೆಲೆ ಏರಿಕೆ, ಎಲ್ಲ ಶ್ರೇಣಿಯ ಏಕಸ್ವಾಮ್ಯಾಧಿಪತಿಗಳಿಗೆ ಸಿಕ್ಕಿದ್ದ ಅಪರಿಮಿತ ಅಧಿಕಾರ, ಸಾರ್ವಜನಿಕ ಆಸ್ತಿಗಳನ್ನು ಪ್ರಭಾವಶಾಲಿ ಅಧಿಕಾರಿಗಳು ಹಾಗೂ ಪಿಂಚಣಿದಾರರು ಹಾಳುಗೆಡವುತ್ತಿದ್ದದ್ದು, ಐಶಾರಾಮಿಯಾದ ಹಾಗೂ ನೈತಿಕವಾಗಿ ಭ್ರಷ್ಟವಾಗಿದ್ದ ಜೀವನಶೈಲಿ, ಕೇವಲ ನಾಮಕಾವಸ್ತೆ ಮಟ್ಟಕ್ಕಿಳಿದಿದ್ದ ಪ್ರಜಾಪ್ರಾತಿನಿಧ್ಯ ಇವೆಲ್ಲವುಗಳಿಂದ ರೋಸಿಹೋಗಿತ್ತು. ಹಾಗೂ ಅದರಿಂದಾಗಿ ಅವರು ಪ್ರತಿಯೊಬ್ಬ ಸ್ವತಂತ್ರ ಮನುಷ್ಯನೂ ತನ್ನ ಸಹಜ ಹಕ್ಕುಗಳ ನಿರಾಕರಣೆಯನ್ನು ಸಹಿಸುವಂತಾಗಿರುವುದಕ್ಕೆ ಅಜ್ಞಾನವೇ ಕಾರಣ ಎಂದು ತೀರ್ಮಾನಿಸಿದರು."[೧]

೧೭೯೪ರಲ್ಲಿ ಇಡೀ ಪ್ರಾಂತ್ಯದಲ್ಲೇ ಬಲಿಷ್ಠವಾಗಿದ್ದ ಸಮಾಜವೊಂದರ ಸದಸ್ಯರು ರಾಜದ್ರೋಹದ ಆಪಾದನೆಯ ಮೇಲೆ ವಿಚಾರಣೆಯನ್ನು ಎದುರಿಸಬೇಕಾಗಿಬಂತು. ಆಗ ಸೊಸೈಟಿಯ ಸಭೆಗಳ ಉದ್ದೇಶವೇನು ಎಂಬ ಪ್ರಶ್ನೆಗೆ ಅವರು ನೀಡಿದ ಹೇಳಿಕೆಯನ್ನು ಗಮನಿಸೋಣ; "ಜನತೆಗೆ, ಅವರ ಎಲ್ಲ ಸಂಕಟಗಳಿಗೆ, ದೂರುಗಳಿಗೆ ಕಾರಣ ಏನು ಎಂಬುದರ ಬಗ್ಗೆ ತಿಳಿವಳಿಕೆ ನೀಡಬೇಕಿತ್ತು. ಇಡೀ ವಾರ ಪ್ರತಿಯೊಂದು ದಿನ ಸಹ ಹದಿಮೂರು, ಹದಿನಾಲ್ಕು ಘಂಟೆಗಳ ಕಾಲ ದುಡಿದರೂ, ಒಬ್ಬ ಮನುಷ್ಯನಿಗೆ ಏಕೆ ತನ್ನ ಕುಟುಂಬವನ್ನು ಸಲಹುವುದು ಸಾಧ್ಯವಾಗುತ್ತಿಲ್ಲ, ಅದನ್ನು ನಾನು ಅರ್ಥಮಾಡಿಕೊಂಡಿದ್ದು ಹೀಗೆ. ಅದರ ಮೂಲ ಎಲ್ಲಿದೆ ಎಂಬುದನ್ನು ಜನರಿಗೆ ಹೇಳಬೇಕೆನ್ನಿಸಿತು. ಅವರೇಕೆ ಅಸಮರ್ಥರಾಗಿದ್ದಾರೆ ಎಂಬುದನ್ನು ತೋರಿಸಬೇಕೆನ್ನಿಸಿತು."[೨] ಲಂಡನ್ ನಗರದ ಕರೆಸ್ಪಾಂಡಿಂಗ್ ಸೊಸೈಟಿಯ ಪ್ರಕಟಣೆಯೊಂದರಲ್ಲಿ "ಎಲ್ಲರಿಗೂ ಅಗತ್ಯವಿರುವುದು ಶಿಕ್ಷಣ" ಎಂದು ಅದೇ ವರ್ಷ ಘೋಷಿಸಲಾಗಿತ್ತು. ಮುಂದುವರಿದು "ನಮ್ಮ ಸೊಸೈಟಿಯು ಮಾನವನ ವಿಚಾರಶಕ್ತಿಯನ್ನು ಮುನ್ನಡೆಸಬೇಕು ಮತ್ತು ಪ್ರತಿಯೊಬ್ಬ ನಾಗರಿಕನಿಗೆ ಶಿಕ್ಷಣವು ಕೈಗೆಟಕುವಂತೆ ಮಾಡಬೇಕು" ಎಂದು ಆ ಪ್ರಕಟಣೆಯು ಹೇಳಿತ್ತು.[೩] ಲಂಡನ್ ನಗರದಲ್ಲೂ ಉಳಿದ ಗ್ರಾಮೀಣ ಪ್ರದೇಶಗಳಲ್ಲೂ ಇಂತಹ ಸೊಸೈಟಿಗಳು ಸಂಘಟಿಸುತ್ತಿದ್ದ ವರ್ಗಾಧಾರಿತ ಸಭೆಗಳ ಉದ್ದೇಶ ಇದ್ದದ್ದು ಹೀಗೆ.

ಸ್ವಯಂ ಶಿಕ್ಷಣದ ಈ ಪ್ರಕ್ರಿಯೆಗೆ ಅಗಾಧ ಮಹತ್ತ್ವವಿತ್ತು. ಅದು ತಳಮಟ್ಟದಿಂದ ಬಂದಿದ್ದು, ಆದರೆ ಅತ್ಯಂತ ಮುಂದುವರಿದ ರಾಜಕೀಯ ಹಾಗೂ ಸಾಮಾಜಿಕ ಚಿಂತನೆಯನ್ನು ಗ್ರಹಿಸಿ ಅದರ ಮೇಲೆ ಪ್ರಭುತ್ವವನ್ನು ಸಾಧಿಸುವ ಶಕ್ತಿಹೊಂದಿದ್ದ ಕಾರ್ಮಿಕರನ್ನು ಆಯ್ಕೆ ಮಾಡಿಕೊಂಡು, ಅವರು ತಾವು ಪಡೆದ ತಿಳಿವಳಿಕೆಯನ್ನು ಬೇರೆಯವರಿಗೆ ನೀಡುವಂತೆ ಹಾಗೂ ಅದರ ಮೇಲೆ ಕಾರ್ಯಶೀಲರಾಗುವಂತೆ ಸಜ್ಜುಗೊಳಿಸಿತು. ಮತ್ತು ಅವರು ಆಗತಾನೆ

ಸ್ಥಳೀಯ ಹಾಗೂ ರಾಷ್ಟ್ರಮಟ್ಟದಲ್ಲಿ ಉದಯಿಸುತ್ತಿದ್ದ ಕಾರ್ಮಿಕ ವರ್ಗದ ಚಳವಳಿಗೆ ನೇತೃತ್ವ ನೀಡುವಂತೆ ಅವರನ್ನು ತಯಾರುಮಾಡಿತು.

ಕುಶಲಕರ್ಮಿಗಳು ಮತ್ತು ಮೆಕಾನಿಕ್‌ಗಳೇ ಹೆಚ್ಚಾಗಿದ್ದ ಲಂಡನ್ ನಗರದ ಕರೆಸ್ಪಾಂಡಿಂಗ್ ಸೊಸೈಟಿಯ ಚಟುವಟಿಕೆಗಳು ಆರಂಭದಿಂದಲೂ ವ್ಯವಸ್ಥಿತವಾದ ಶಿಕ್ಷಣವನ್ನು ಪ್ರಚಾರಪಡಿಸುವ ಗುರಿಯನ್ನೇ ಹೊಂದಿದ್ದವು. ಸೊಸೈಟಿಗೆ ಸೇರಿದ್ದ ಕೊವೆಂಟ್ ಗಾರ್ಡನ್ ಘಟಕವು ೧೭೯೪ರಲ್ಲಿ ಅನುಸರಿಸುತ್ತಿದ್ದ ವಿಧಾನಗಳ ಬಗ್ಗೆ ಆಗ ಫ್ರಾನ್ಸಿಸ್ ಪ್ಲೇಸ್ ಎಂಬ ಒಬ್ಬ ಪರಿಣತ ದರ್ಜಿಯಾಗಿದ್ದವರು ಕೊಟ್ಟಿರುವ ಸವಿವರ ಚಿತ್ರಣವನ್ನು ಗಮನಿಸೋಣ; “ನಾನು ಅನೇಕ ಪ್ರಾಮಾಣಿಕ ಜ್ಞಾನತೃಷೆಯುಳ್ಳ ಜನರನ್ನು ಭೇಟಿಯಾಗಿ ಅವರೊಂದಿಗೆ ನನ್ನ ಸ್ನೇಹವನ್ನು ಬೆಳೆಸಿಕೊಂಡೆ. ನಾನು ಇದುವರೆಗೂ ಭೇಟಿಯಾದ ಯಾವುದೇ ವ್ಯಕ್ತಿಗಿಂತ ಎಲ್ಲ ವಿಷಯಗಳಲ್ಲಿ ಅಲ್ಲದಿದ್ದರೂ ಬಹುತೇಕ ವಿಷಯಗಳಲ್ಲಿ ಅವರು ಮೇಲ್ದರ್ಜೆಯವರಾಗಿದ್ದರು. ನಾವು ಪುಸ್ತಕಗಳಿಗೆ ಚಂದಾದಾರರಾಗಿದ್ದೆವು. ಯಾರಾದರೂ ಒಬ್ಬರು ಪುಸ್ತಕವೊಂದಕ್ಕೆ ಚಂದಾದಾರರಾದರೆ, ಓದಲು ಬಯಸಿದ ಉಳಿದವರೆಲ್ಲ ಒಬ್ಬರ ಅನಂತರ ಇನ್ನೊಬ್ಬರು ಓದಿ ಮುಗಿಸಿದ ಮೇಲೆಯೇ ಅದನ್ನು ಮೂಲ ಚಂದಾದಾರರಿಗೆ ತಲಪಿಸುತ್ತಿದ್ದದ್ದು. ಯಾರ ಮನೆ ಹೆಚ್ಚು ಜನರು ಕೂಡುವಷ್ಟು ವಿಶಾಲವಾಗಿದೆಯೋ ಅಲ್ಲಿ ನಾವೆಲ್ಲರೂ ಭಾನುವಾರ ಸಂಜೆ ಒಟ್ಟಾಗಿ ಸೇರುತ್ತಿದ್ದೆವು. ಅಲ್ಲಿ ಒಟ್ಟಿಗೆ ಓದುವುದು, ಮಾತುಕತೆ, ಚರ್ಚೆ ಎಲ್ಲವೂ ನಡೆಯುತ್ತಿದ್ದವು.”

ಇಂಥ ಅನೌಪಚಾರಿಕ ಸಂತೋಷಕೂಟಗಳಲ್ಲದೆ, ಸಾಪ್ತಾಹಿಕ ಸಭೆಗಳೂ ನಡೆಯುತ್ತಿದ್ದವು. ಆ ಸಭೆಗಳು ನಿಯಮಾವಳಿಗನುಗುಣವಾಗಿ ನಡೆಯುತ್ತಿದ್ದು, ಪ್ರತಿಯೊಬ್ಬ ಸದಸ್ಯರೂ ಸರತಿಯ ಮೇಲೆ ಸಭಾಧ್ಯಕ್ಷರಾಗುತ್ತಿದ್ದರು.

“ಸಭಾಧ್ಯಕ್ಷರು ಯಾವುದಾದರೊಂದು ಪುಸ್ತಕದಿಂದ ಒಂದು ಅಧ್ಯಾಯವನ್ನೋ ಅಥವಾ ಅಧ್ಯಾಯದ ಭಾಗವನ್ನೋ ಸಭೆಯಲ್ಲಿ ಓದುತ್ತಿದ್ದರು. ಅನಂತರ ಉಳಿದ ಸದಸ್ಯರು ಒಬ್ಬರನಂತರ ಒಬ್ಬರು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಓದಿ ತರುತ್ತಿದ್ದರು. ಮುಂದಿನ ಸಭೆಯಲ್ಲಿ ಅಧ್ಯಾಯದ ಭಾಗವನ್ನು ಮತ್ತೆ ಓದಲಾಗುತ್ತಿತ್ತು. ಹಾಜರಿದ್ದ ಸದಸ್ಯರನ್ನು ಅದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಆಹ್ವಾನಿಸಲಾಗುತ್ತಿತ್ತು. ಅನೇಕರು ಕುಳಿತುಕೊಂಡೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಅನಂತರ ಇನ್ನೊಂದು ಭಾಗವನ್ನು ಓದಿ ಹಾಜರಿದ್ದವರಿಗೆ ಮಾತನಾಡಲು ಆಹ್ವಾನಿಸಲಾಗುತ್ತಿತ್ತು. ಅದೇ ರೀತಿ ಉಳಿದದ್ದನ್ನೂ ಓದಿ ಮುಗಿಸಿ ಅಲ್ಲಿಯವರೆಗೂ ಮಾತನಾಡದೇ ಇದ್ದವರಿಗೆ ಮಾತನಾಡಲು ಅವಕಾಶ ನೀಡಲಾಗುತ್ತಿತ್ತು. ಅನಂತರ ಇನ್ನೊಂದು ಸಾಮಾನ್ಯ ಚರ್ಚೆಯನ್ನು ಆರಂಭಿಸಲಾಗುತ್ತಿತ್ತು. ಈ ರೀತಿಯ ಓದುವಿಕೆಯಲ್ಲಿ ಯಾರೇ ಆಗಲಿ ಒಂದು ಬಾರಿಗಿಂತ ಹೆಚ್ಚಿಗೆ ಮತ್ತೆ ಮತ್ತೆ ಮಾತನಾಡುವಂತಿರಲಿಲ್ಲ. ಇದೇ ರೀತಿಯ

ನಿಯಮವನ್ನು ಸಾಮಾನ್ಯ ಓದಿನ ಸಂದರ್ಭದಲ್ಲಿಯೂ ಅನುಸರಿಸಲಾಗುತ್ತಿತ್ತು. ಹಾಜರಿದ್ದವರೆಲ್ಲರೂ ಒಮ್ಮೆಯಾದರೂ ಮಾತನಾಡುವವರೆಗೂ ಉಳಿದವರು ಎರಡನೆಯ ಬಾರಿ ಮಾತನಾಡುವಂತಿರಲಿಲ್ಲ. ಹೀಗೆ ಎಲ್ಲರಿಗೂ ಅವಕಾಶ ದೊರೆತ ಮೇಲೆ ಒಮ್ಮೆ ಮಾತನಾಡಿದವರು ಮತ್ತೆ ಮಾತನಾಡಬಹುದಾಗಿತ್ತು. ಹೀಗೆ ಒಂದು ವಿಷಯವನ್ನು ಸಂಪೂರ್ಣವಾಗಿ ಚರ್ಚಿಸಲಾಗುತ್ತಿತ್ತು."[೪]

ಕಾರ್ಮಿಕರ ಸೊಸೈಟಿಯಲ್ಲಿ ಈ ರೀತಿ ಆತ್ಮವಿಶ್ವಾಸ, ಸ್ಫುಟವಾದ ಚಿಂತನೆ, ತಮ್ಮನ್ನೇ ಅಭಿವ್ಯಕ್ತಿಪಡಿಸಿಕೊಳ್ಳುವಂಥ ಶಕ್ತಿ ಇವುಗಳನ್ನು ಹುರಿದುಂಬಿಸುವಂಥ ಅಧ್ಯಯನ ಮತ್ತು ಚರ್ಚೆಯ ವಿಧಾನಗಳನ್ನು ರೂಪಿಸಲಾಗಿತ್ತು. ಬಹುತೇಕ ಎಲ್ಲ ಕರೆಸ್ಪಾಂಡಿಂಗ್ ಸೊಸೈಟಿಗಳಲ್ಲೂ ಹೆಚ್ಚು ಕಡಮೆ ಇಂಥದೇ ವಿಧಾನಗಳನ್ನು ರೂಪಿಸಲಾಗಿತ್ತು. ಹಳ್ಳಿಗಾಡಿನಲ್ಲೂ ಇಂಥ ಚಟುವಟಿಕೆಗಳು ನಡೆಯುತ್ತಿದ್ದವು ಎಂಬುದಕ್ಕೆ ಲ್ಯಾಂಕಾಶೈರ್ ಪ್ರಾಂತ್ಯದ ಸ್ಯಾಮ್ಯುಯಲ್ ಬ್ಯಾಮ್‌ಫೋರ್ಡ್ ಎಂಬ ನೇಕಾರರು ಮಾಹಿತಿ ನೀಡುತ್ತಾರೆ. ಮಿಡಲ್‌ಟನ್ ಎಂಬಲ್ಲಿ ಆತನ ತಂದೆ ಮತ್ತು ಚಿಕ್ಕಪ್ಪ ಸೇರಿದಂತೆ "ಓದುಗರು ಮತ್ತು ಸತ್ಯದ ಅನ್ವೇಷಕರ ಕೂಟವೊಂದು" ನಡೆಸುತ್ತಿದ್ದ ಚಟುವಟಿಕೆಗಳನ್ನು ಅವರು ವಿವರಿಸಿದ್ದಾರೆ. ಆ ಗುಂಪಿನಲ್ಲಿ ನೇಕಾರರು, ಚಮ್ಮಾರರು, ಔಷಧಿ ಮಾರುವವರು, ಥಾಮಸ್ ಪೇಯ್ನ್‌ನ ಅನುಯಾಯಿಗಳು ಇದ್ದರು. "ಅವರೆಲ್ಲರೂ ತಮ್ಮ ಸದಸ್ಯರಲ್ಲಿ ಯಾರಾದರೂ ಒಬ್ಬರ ಮನೆಯಲ್ಲಿ ಸೇರುತ್ತಿದ್ದರು. ತಮ್ಮ ಕೈಯಲ್ಲಿ ಕೊಳ್ಳಲು ಸಾಧ್ಯವಾದಂತಹ ಪುಸ್ತಕಗಳನ್ನು ಓದುತ್ತಿದ್ದರು. ದೇಶದ ಆಗುಹೋಗುಗಳು ಮತ್ತಿತರ ರಾಜಕೀಯ ವಿಷಯಗಳನ್ನು ಕುರಿತು ಅವರು ಚರ್ಚಿಸುತ್ತಿದ್ದರು." ಈ ಚಟುವಟಿಕೆಗಳಿಂದಾಗಿ ಅವರು ಅನೇಕ ಬಾರಿ ಲಾಠಿ, ದೊಣ್ಣೆ ಹಿಡಿದ ಪುಂಡರಿಂದ ದಾಳಿಗೆ ಒಳಗಾಗಬೇಕಾಗುತ್ತಿತ್ತು. ಈ ಗೂಂಡಾಗಳು ಸಭೆ ನಡೆಯುವ ಬಳಿ ಓಡಾಡುತ್ತ, "ಪೇಯ್ನ್‌ನ ಶಿಷ್ಯರಿಗೆ ಮರಳುವಾಗ ಏನು ಮಾಡುತ್ತೇವೆ ನೋಡುತ್ತಿರಿ" ಎಂದು ಬೆದರಿಸುತ್ತಿದ್ದರು. ಅವರು ಮಾಡುವ ಗಲಭೆಗಳಿಂದಾಗಿ ಕಾರ್ಮಿಕರೇ ಎಷ್ಟೋ ಬಾರಿ ಗಲಾಟೆ ಮಾಡುತ್ತಾರೆ ಎಂಬ ಆಪಾದನೆಗೆ ಒಳಗಾಗಿ ವಿಚಾರಣೆಗೆ ಹಾಜರಾಗಬೇಕಾಗುತ್ತಿತ್ತು.[೫]

ಇಂಥದೇ ಸಂಘಟನೆಗಳು ಬರ್ಮಿಂಗ್‌ಹ್ಯಾಮ್, ಮ್ಯಾಂಚೆಸ್ಟರ್, ಲೀಡ್ಸ್, ಶೇಫೀಲ್ಡ್, ನಾರ್‌ವಿಚ್ ಇನ್ನೂ ಮುಂತಾದ ಕಡೆ ಇದ್ದವು. ಅಲ್ಲಿಯೂ ಸಹ ಪುಸ್ತಕಗಳನ್ನು ಕೊಂಡು ಓದುತ್ತಿದ್ದರು. ಸುಮಾರು ೨೦೦೦ಜನ "ಸದ್ವರ್ತನೆಯುಳ್ಳ, ಬಹುತೇಕ ಕೆಳಮಟ್ಟದ ದುಡಿಯುವ ಜನ ಸದಸ್ಯರಾಗಿದ್ದ ಶೆಫೀಲ್ಡ್ ಕಾನ್‌ಸ್ಟಿಟ್ಯೂಶನಲ್ ಸೊಸೈಟಿ ಎಂಬ ಸಂಘಟನೆಯು ನಿಯತವಾಗಿ ಸೇರಿ ವರ್ಗ ಚರ್ಚೆಗಳನ್ನು ನಡೆಸುತ್ತಿತ್ತು. ಅದು ಥಾಮಸ್ ಪೇಯ್ನ್‌ರವರ `ರೈಟ್ಸ್ ಆಫ್ ಮ್ಯಾನ್' (ಮಾನವನ ಹಕ್ಕುಗಳು) ಪುಸ್ತಕವನ್ನು ಪುನರ್ ಪ್ರಕಟಿಸಿ ಒಂದು ಪ್ರತಿಗೆ ಆರು ಪೆನ್ನಿಗಳಷ್ಟು ಕಡಮೆ ದರದಲ್ಲಿ ಮಾರುತ್ತಿತ್ತು." ಅಷ್ಟೇ ಅಲ್ಲದೆ "ಹಳ್ಳಿಗಳಿಂದ ಪಟ್ಟಣಗಳಿಗೂ, ಪಟ್ಟಣಗಳಿಂದ ಹಳ್ಳಿಗಳಿಗೂ ಉಪಯುಕ್ತ ಜ್ಞಾನವನ್ನು ಪಸರಿಸಲು ಮತ್ತು ತನ್ಮೂಲಕ ಇಡಿಯ ದೇಶದಲ್ಲೇ ಸಾಕಷ್ಟು

ಜ್ಞಾನ ಪ್ರಸರಣ ಮಾಡಲು" ಅವರು "ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ತಮ್ಮ ಶಾಖೆಗಳನ್ನು ತೆರೆದರು."[೬] ಮ್ಯಾಂಚೆಸ್ಟರ್‌ನ ಥಾಮಸ್ ವಾಕರ್ ಎಂಬುವರು ಬಹುತೇಕ ಕುಶಲಕರ್ಮಿಗಳಿಂದಲೇ ತುಂಬಿದ್ದ ರಿಫಾರ್ಮೇಶನ್ ಸೊಸೈಟಿಯ ಸದಸ್ಯರಿಗೆ ತಮ್ಮ ಬಾಗಿಲುಗಳನ್ನು ತೆರೆದಿಟ್ಟರು. ೧೭೯೪ರಲ್ಲಿ ನಡೆದ 'ರಾಜದ್ರೋಹಕ್ಕಾಗಿ ವಾಕರ್‌ರವರ ವಿಚಾರಣೆ' ಎಂಬ ಪ್ರಕರಣದಲ್ಲಿ, ಸರ್ಕಾರದ ಪರವಾದ ವಕೀಲರು ಆಳುವವರ್ಗದ ದೃಷ್ಟಿಕೋನದಲ್ಲಿ ಸೊಸೈಟಿಯ ಚಟುವಟಿಕೆಗಳನ್ನು ಹೇಗೆ ಕಾಣಲಾಗುತ್ತಿತ್ತು ಎಂಬುದನ್ನು ಸಂಗ್ರಹ ರೂಪದಲ್ಲಿ ಕೆಳಕಂಡಂತೆ ಮಂಡಿಸಿದರು:

"ಅವರು ಪ್ರತಿರಾತ್ರಿಯೂ ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅದು ಎಷ್ಟು ಎಂಬುದನ್ನು ಮುಂದೆ ಸಾಕ್ಷಿಗಳು ಹೇಳಲಿದ್ದಾರೆ. ಕೆಲವೊಮ್ಮೆ ಸಭೆ ದೊಡ್ಡದಾದಾಗ ಭಾಗವಹಿಸಿದವರ ಸಂಖ್ಯೆ ನೂರನ್ನು ದಾಟಿತ್ತು ಎಂದು ಕೇಳಿದ್ದೇನೆ. ಮೂರು ಸಾಕಷ್ಟು ದೊಡ್ಡದಾದ ಕೋಣೆಗಳಲ್ಲಿ ಅವರು ಸೇರುತ್ತಿದ್ದರು. ಮನೆಯ ಕೆಳಗಿನ ಅಂತಸ್ತಿನಲ್ಲಿ ಅವರನ್ನು ಮೊದಲಿಗೆ ಬರಮಾಡಿಕೊಳ್ಳಲಾಗುತ್ತಿತ್ತು. ಅಲ್ಲಿ ಅವರು ಕಡಿಮೆ ಸಂಖ್ಯೆಯಲ್ಲಿ ತುಸು ಹೊತ್ತು ಮಾತ್ರ ಸೇರುತ್ತಿದ್ದರು. ಮೇಲಿನ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದರು ಮತ್ತು ಶಾಲೆಗಳಲ್ಲಿ ಓದುವಂತೆ ಓದುತ್ತಿದ್ದರು. ಅವರು ಓದುತ್ತಿದ್ದದ್ದು ಬಹುತೇಕ ರಾಜದ್ರೋಹದ ಮತ್ತು ತಂಟೆಕೋರ ವಿಷಯಗಳನ್ನು; ಇಂಥದೇ ನ್ಯಾಯಾಲಯಗಳಲ್ಲಿ, ಬೇರೆ ನ್ಯಾಯಾಲಯಗಳಲ್ಲಿ ಹಾಗೂ ಸಂಸತ್ತಿನ ಎರಡೂ ಸದನಗಳಲ್ಲಿ ಒಮ್ಮತದಿಂದ ಯಾವ ವಿಷಯಗಳನ್ನು ನಿಷೇಧಿಸಲಾಗಿದೆಯೋ ಅಂಥವನ್ನೇ ಅವರು ಚರ್ಚಿಸುತ್ತಿದ್ದರು. ಅವರು ಓದುತ್ತಿದ್ದ ಗ್ರಂಥಗಳಲ್ಲಿ ವಿಶಿಷ್ಟವಾಗಿ ಮುಖ್ಯವಾದದ್ದೆಂದರೆ, ಯಾರ ಹೆಸರು ಈ ದೇಶದ ಎಲ್ಲರ ಬಾಯಲ್ಲೂ ಇದೆಯೋ ಆ ಥಾಮಸ್ ಪೇಯ್ನ್‌ನದ್ದು."[೭]

ಎಂದರೆ ೧೭೯೦ರ ದಶಕದ ಆರಂಭಕಾಲದಲ್ಲೇ ದುಡಿಯುವ ವರ್ಗದ ಒಂದು ವಿಭಾಗದಲ್ಲಿ ವ್ಯವಸ್ಥಿತವಾದ ಶಿಕ್ಷಣವನ್ನೂ, ಸಾಮೂಹಿಕ ರಾಜಕೀಯ ಶಿಕ್ಷಣವನ್ನೂ ಒಂದುಗೂಡಿಸಬೇಕಾದ ಅಗತ್ಯವು ಮನವರಿಕೆಯಾಗಿತ್ತು. ಅಂದಿನ ಸರ್ಕಾರಗಳಿಗೂ ಹೀಗೆ ಎರಡೂ ರೀತಿಯ ಶಿಕ್ಷಣಗಳು ಒಟ್ಟೊಟ್ಟಿಗೆ ಸಾಗುವುದರ ಪರಿಣಾಮ, ಪ್ರಾಮುಖ್ಯ ಹೊಳೆಯದೇ ಇರಲಿಲ್ಲ. ಆದ್ದರಿಂದಲೇ ಇಂಥ ಶಿಕ್ಷಣವನ್ನು ಪ್ರತಿಬಂಧಿಸಲೋಸುಗ "ರಾಜದ್ರೋಹದ ಗುರಿಯನ್ನು ಹೊಂದಿರುವ ಸೊಸೈಟಿಗಳನ್ನು (ಸಂಘಟನೆಗಳನ್ನು) ಪರಿಣಾಮಕಾರಿಯಾಗಿ ದಮನ ಮಾಡಲು" ೧೭೯೯ರ ಅಧಿನಿಯಮದ ೧೫ನೇ ಪ್ರಕರಣವನ್ನು ಇದಕ್ಕಾಗಿಯೇ ರೂಪಿಸಲಾಗಿತ್ತು.[೮] ಈ ಅಧಿನಿಯಮದ ಅಡಿಯಲ್ಲಿ ಕರೆಸ್ಪಾಂಡಿಂಗ್ ಸೊಸೈಟಿಗಳನ್ನು ನಿಷೇಧಿಸಲಾಯಿತು.

## ii. ವೈಯಕ್ತಿಕ ಅಧ್ಯಯನ

೧೮೧೫ರ ಅನಂತರ ತಲೆ ಎತ್ತಿದ ಕ್ಲಬ್ಬುಗಳು, ಸಂಘಗಳನ್ನು ಮತ್ತು ಅದರಲ್ಲಿ ಸಂಘಟಿತ ಶಿಕ್ಷಣಕ್ಕಾಗಿ ಮೇಲೆ ಹೇಳಿದಂಥ ಚಟುವಟಿಕೆ, ಯೋಜನೆಗಳನ್ನೇ ಅನುಸರಿಸಿದ್ದನ್ನು ಗಮನಿಸಿದರೆ ಈ ಕಾರ್ಯಕ್ರಮಗಳ ಮೂಲಕ ಕಲಿತ ಪಾಠಗಳನ್ನು ಮರೆಯಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಏತನ್ಮಧ್ಯೆ ಮುಂದಿನ ವರ್ಷಗಳಲ್ಲಿ ಈ ಸಮೂಹ ಚಳವಳಿಗಳಿಗೆ ನೇತಾರರಾದವರು ಹೇಗೆ ರಾಜಕೀಯ ಚಟುವಟಿಕೆಗಳಿಗೆ ಅಗತ್ಯವಾದ ಶೈಕ್ಷಣಿಕ ಹಿನ್ನೆಲೆಯನ್ನು ಪಡೆದುಕೊಂಡರು, ಈ ಬುನಾದಿಯ ಮೇಲೆ ಮುಂದೆ ಏನೆಲ್ಲ ಸಾಧಿಸಿದರು ಹಾಗೂ ಕಾರ್ಮಿಕವರ್ಗಕ್ಕೆ ಅಂದು ಅಸ್ತಿತ್ವದಲ್ಲಿದ್ದ ಶಾಲೆಗಳು ಏನನ್ನು ಒದಗಿಸಬಹುದೆಂದು ಕಂಡುಕೊಂಡರು ಎಂಬುದನ್ನು ಅಧ್ಯಯನ ಮಾಡಬಹುದು.

ಭಾನುವಾರದ ಶಾಲೆಗಳನ್ನು ೧೭೮೦ರ ದಶಕದ ಕೊನೆಯಲ್ಲಿ ಆರಂಭಿಸಲಾಯಿತು. ಮೊದಲಿಗೆ ಅದರ ಉದ್ದೇಶವಿದ್ದದ್ದು ಬಡಜನರಿಗೆ ಧಾರ್ಮಿಕ ತತ್ತ್ವಗಳನ್ನು ಕುರಿತು ತಿಳಿವಳಿಕೆ ನೀಡುವುದು ಮತ್ತು ಮತ್ತೊಬ್ಬರ ಕೆಳಗೆ ದೈನ್ಯಾವಸ್ಥೆಯಲ್ಲಿರುವ ಅವರಿಗೆ ತಮ್ಮ ಕರ್ತವ್ಯಗಳನ್ನು ಕುರಿತು ಅರಿವು ಮೂಡಿಸುವುದು. ಆದರೆ ಕೆಲವೊಮ್ಮೆ ಉದ್ದೇಶಕ್ಕೆ ತದ್ವಿರುದ್ಧವಾದ ಪರಿಣಾಮಗಳಾದದ್ದೂ ಉಂಟು. ೧೮೧೬-೧೭ರಲ್ಲಿ ಹ್ಯಾಂಪ್‌ಡೆನ್ ಕ್ಲಬ್ಬುಗಳಲ್ಲಿ ನಡೆಯುತ್ತಿದ್ದ ಕಾರ್ಮಿಕರ ಸಭೆಗಳನ್ನು ಕುರಿತು ಬ್ಯಾಮ್‌ಫರ್ಡ್‌ವರು ಹೀಗೆನ್ನುತ್ತಾರೆ; "ಹೊಸದಾಗಿ ಬದಲಾವಣೆಗೆ ಸಜ್ಜಾಗುತ್ತಿದ್ದ ಜನಸಾಮಾನ್ಯರಿಗೆ ಸೂಕ್ತ ತಿಳಿವಳಿಕೆ ನೀಡಲು ಅವರದೇ ವರ್ಗದಿಂದ ಬಂದ ಮುಖಂಡರ ಕೊರತೆ ಏನೂ ಇರಲಿಲ್ಲ. ಹಿಂದಿನ ಮೂವತ್ತು ವರ್ಷಗಳ ಅವಧಿಯಲ್ಲಿ, ಭಾನುವಾರದ ಶಾಲೆಗಳಿಂದ ಹೊರಬಂದಂಥ ಪ್ರತಿಭಾಶಾಲಿಗಳಾದ ಲೇಖಕರು, ಭಾಷಣಕಾರರು, ಓದುಗರು ಸಂಸದೀಯ ಸುಧಾರಣೆಗಳನ್ನು ಕುರಿತ ಗ್ರಾಮಸಭೆಗಳಲ್ಲಿ ಭಾಗವಹಿಸುತ್ತಿದ್ದರು."[೯] ಅದೇ ರೀತಿಯಲ್ಲಿ ಮ್ಯಾಂಚೆಸ್ಟರ್ ನಗರದಿಂದ ಬಂದ ಚರಿತ್ರಕಾರರೊಬ್ಬರು ಭಾನುವಾರದ ಶಾಲೆಯ ಶಿಕ್ಷಕರ ಬಗ್ಗೆ ಹೀಗೆನ್ನುತ್ತಾರೆ, "ಅವರು ತಮ್ಮ ಶಿಷ್ಯರ ಶಾಶ್ವತ ಕಲ್ಯಾಣವನ್ನೇ ಧ್ಯೇಯವಾಗಿರಿಸಿಕೊಂಡು ಸಾಮಾಜಿಕ ಹಾಗೂ ಸಾರ್ವಜನಿಕ ಕರ್ತವ್ಯಗಳನ್ನು ಸಮರ್ಥವಾಗಿ ನಿಭಾಯಿಸುವಂತೆ ತಮ್ಮ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದ್ದರು. ಅಲ್ಲಿಯವರೆಗೂ ಆಲೋಚನೆಯನ್ನೇ ಮಾಡದಿದ್ದ ಜನಸಮುದಾಯಗಳನ್ನು ಅವರು ಚಿಂತನೆಗೆ ಹಚ್ಚುತ್ತಿದ್ದರು.[೧೦]

ಭಾನುವಾರದ ಶಾಲೆಗಳನ್ನು ಬಿಟ್ಟರೆ ಕೆಲವೊಂದು ಸ್ಥಳೀಯ ವನಿತಾ ಶಾಲೆಗಳೂ ನಡೆಯುತ್ತಿದ್ದುದುಂಟು. ಸಣ್ಣ ಪ್ರಮಾಣದ ಶುಲ್ಕವನ್ನು ಪಡೆದುಕೊಂಡು ಇಂಥ ಶಾಲೆಗಳನ್ನು ನಡೆಸುತ್ತಿದ್ದ ವಯಸ್ಸಾದ ಹೆಂಗಸರು ವಾಸ್ತವದಲ್ಲಿ ಮಕ್ಕಳಿಗೆ ಏನನ್ನೂ ಸರಿಯಾಗಿ ಹೇಳಿಕೊಡುತ್ತಿರಲಿಲ್ಲ. ಪರೋಪಕಾರಿಗಳ ದಾನದಿಂದ ನಡೆಯುತ್ತಿದ್ದ 'ಉಚಿತ' ಶಾಲೆಗಳು, ಸಣ್ಣ

ಶುಲ್ಕವನ್ನು ವಿಧಿಸುತ್ತಿದ್ದ ಖಾಸಗಿ ಶಾಲೆಗಳು - ಇಷ್ಟೇ, ಒಟ್ಟಾರೆಯಾಗಿ ಬಡಬಗ್ಗರಿಗೆ ಸಿಗುತ್ತಿದ್ದ ಶೈಕ್ಷಣಿಕ ಸೌಲಭ್ಯಗಳು. ಇದೆಲ್ಲ ಸೇರಿಯೂ ಸಹ ಒಂದು ಮಗುವಿಗೆ ಸೂಕ್ತವಾದ ವಿದ್ಯಾಭ್ಯಾಸವೇನೂ ದೊರಕುತ್ತಿರಲಿಲ್ಲ. ಆದರೆ ಮಕ್ಕಳು ಕಡೆಯಪಕ್ಷ ಓದಲು, ಬರೆಯಲು ಕಲಿಯುತ್ತಾರೆ ಎಂಬುದೇ ಸಮಾಧಾನದ ಸಂಗತಿಯಾಗಿತ್ತು.

ಚಾರ್ಟಿಸ್ಟ್ ಚಳವಳಿಯ ಲಂಡನ್ ಕುಶಲಕರ್ಮಿಗಳ ಶಾಖೆಗೆ ಅನಂತರದ ದಿನಗಳಲ್ಲಿ ನಾಯಕರಾದ ವಿಲಿಯಮ್ ಲವೆಟ್‌ರವರು ತಾವೇ ಒಂದು ಶಾಲೆಯಿಂದ ಇನ್ನೊಂದಕ್ಕೆ ಪ್ರಗತಿ ಹೊಂದುತ್ತಾ ಸಾಗಿದ್ದರ ಬಗ್ಗೆ ವಿವರಿಸಿದ್ದಾರೆ. ತಂದೆಯ ಮರಣದ ನಂತರ ಕಾರ್ನ್ವಾಲ್ ಪ್ರಾಂತ್ಯದ ನ್ಯೂಲಿನ್ ಎಂಬ ಬೆಸ್ತರ ಹಳ್ಳಿಯೊಂದರಲ್ಲಿ ಜನಿಸಿದ ಈತನನ್ನು "ಊರಿನ ಎಲ್ಲ ವನಿತಾ ಶಾಲೆಗಳಿಗೂ ಒಂದರನಂತರ ಇನ್ನೊಂದರಂತೆ ಸೇರಿಸಿದ" ಮೇಲೆಯೇ ಲವೆಟ್ ಅಕ್ಷರ ಕಲಿತದ್ದು. ಮತ್ತು ನಿಜಕ್ಕೂ ಓದಲು ಕಲಿತದ್ದು ತನ್ನ ಮುತ್ತಜ್ಜಿಯ ಅಡಿಯಲ್ಲಿ. ಆತ ಹೇಳುತ್ತಾನೆ, "ಅನಂತರ ನನ್ನನ್ನು ಬಾಲಕರ ಶಾಲೆಗೆ ಸೇರಿಸಲಾಯಿತು. ಬಡಜನರಿಗೆ ಇಷ್ಟೇ ಸಾಕು ಎನ್ನುತ್ತಿದ್ದ ಬರೆವಣಿಗೆ ಮತ್ತು ಲೆಕ್ಕವನ್ನು ಅಲ್ಲಿ ಕಲಿಯಬೇಕಾಗಿತ್ತು. ಆದರೆ ಅಲ್ಲಿ ನನ್ನ ಸಾಧನೆ ಹೇಳಿಕೊಳ್ಳುವಂತಿರಲಿಲ್ಲ. ಹೀಗಾಗಿ ಇನ್ನೊಂದು ಶಾಲೆಗೆ ಸೇರಿಸಿದರು. ಇಲ್ಲಿ ನಾನು ಪರವಾಗಿಲ್ಲ ಎನ್ನುವಷ್ಟು ಬರವಣಿಗೆಯನ್ನು ಕೊಂಚ ಅಂಕಗಣಿತವನ್ನು ಮತ್ತು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡೆ. ನನ್ನ ಶೈಕ್ಷಣಿಕ ಸಾಧನೆ ಎಂದರೆ ಇಷ್ಟೇನೆ."೧೧ ಲವೆಟ್‌ರನ್ನು ತೀರ ಚಿಕ್ಕವಯಸ್ಸಿನಲ್ಲಿಯೇ ಹಗ್ಗ ಮಾಡುವವನ ಹತ್ತಿರ ತರಬೇತುದಾರನಾಗಿ ಸೇರಿಸಲಾಯಿತು.

ಲೀಸೆಸ್ಟರ್ ಚಾರ್ಟಿಸ್ಟ್ಸ್ ಪ್ರಾಂತ್ಯದಲ್ಲಿ ಮುಂದೊಮ್ಮೆ ವರ್ಣರಂಜಿತ ನಾಯಕನಾಗಿ ಹೊರಹೊಮ್ಮಿದ ಗೇನ್ಸ್‌ಬರೋದ ಥಾಮಸ್ ಕೂಪರ್ ಎಂಬಾತನ ತಂದೆ ವೃತ್ತಿಯಲ್ಲಿ ಬಟ್ಟೆಗೆ ಬಣ್ಣ ಹಾಕುವವರಾಗಿದ್ದರು. ನಾಲ್ಕನೆಯ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಹುಡುಗ ಸ್ವಲ್ಪಮಟ್ಟಿಗೆ ನಿಯಮಿತವಾದ ಶಿಕ್ಷಣವನ್ನು ಪಡೆದುಕೊಂಡ. ೧೮೦೫ರಲ್ಲಿ ಜನಿಸಿದ ಈತ ``ಓಲ್ಡ್ ಗ್ಯಾಟಿ" ಎಂಬಾಕೆ ನಡೆಸುತ್ತಿದ್ದ ಆಕೆಯದ್ದೇ ಎರಡಂತಸ್ತಿನ ಮನೆಯಲ್ಲಿನ ಕೆಳಗಿನ ಭಾಗದಲ್ಲಿ ನಡೆದ ವನಿತಾ ಶಾಲೆಯಲ್ಲಿ ಓದಲಿಕ್ಕೆ ಕಲಿತ. ಅನಂತರ ಅವನು ಧರ್ಮಾರ್ಥ ನಡೆಯುತ್ತಿದ್ದ ಶಾಲೆಯಲ್ಲಿ ನೀಲಿಕೋಟ್ ವಿದ್ಯಾರ್ಥಿ (ಬಡ ಹುಡುಗರ ಸಮವಸ್ತ್ರ) ಯಾಗಿ ಅಧ್ಯಯನ ಮಾಡಿದ. ಅಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದದ್ದು ಮಾನಿಟೊರಿಯಲ್ ವ್ಯವಸ್ಥೆಯ ಮೇಲೆ (ಎಂದರೆ ಕಡಿಮೆ ಹಣದಲ್ಲಿ ಶಾಲೆ ನಡೆಸಲೋಸುಗ ಮುಂದುವರಿದ ಜಾಣ ವಿದ್ಯಾರ್ಥಿಗಳು ಉಳಿದವರಿಗೆ ಕಲಿಸಲು ಶಿಕ್ಷಕರಿಗೆ ಸಹಾಯ ನೀಡುತ್ತಿದ್ದಂಥ ವ್ಯವಸ್ಥೆ). ಅನಂತರ ಆತ "ವ್ಯಾಪರಸ್ಥರು ಮತ್ತು ಸ್ವಲ್ಪ ಅನುಕೂಲಸ್ಥರಾಗಿದ್ದ ಕಾರ್ಮಿಕರು ನೆರವು ನೀಡುತ್ತಿದ್ದ" ಶಾಲೆಯಲ್ಲಿ ಕಲಿತ. ಅಲ್ಲಿಯೂ ಅವನು ಬೇರೆ ವಿದ್ಯಾರ್ಥಿಗಳಿಗೆ

ಕಲಿಸಬೇಕಾಗಿತ್ತು. ಹದಿನೈದನೆಯ ವಯಸ್ಸಿನವರೆವಿಗೂ ಅವನು ಅಲ್ಲಿಯೇ ಕಲಿತ.[೧೨]

ಹೀಗೆಯೇ ಕಲಿತಂಥವರಲ್ಲಿ ಇನ್ನೊಬ್ಬನೆಂದರೆ ರಿಚರ್ಡ್ ಕಾರ್ಲೈಲ್. ಆತನ ತಂದೆ ಮೂಲತಃ ಮೋಚಿಯಾಗಿದ್ದವನು. ಅನಂತರ ಆತ ತೆರಿಗೆ ಸಂಗ್ರಹಕಾರನಾದ, ಶಾಲಾ ಶಿಕ್ಷಕನಾದ, ಸೈನಿಕನಾದ. ಮಗನಿಗೆ ನಾಲ್ಕು ವರ್ಷ ವಯಸ್ಸಾಗಿದ್ದಾಗ ತಂದೆ ಕಾಲವಾದ. ಸ್ಥಳೀಯ ಶಾಲಾ ಶಿಕ್ಷಕಿಯಿಂದ ಕಾರ್ಲೈಲ್ ಅಕ್ಷರಾಭ್ಯಾಸ ಕಲಿತ. ಅನಂತರ ಆತ ಆಶ್‌ಬರ್ಟನ್‌ನ ಉಚಿತ ಶಾಲೆಯಲ್ಲಿ ಓದಿ ಬರೆವಣಿಗೆ, ಅಂಕಗಣಿತ, ಒಂದಿಷ್ಟು ಲ್ಯಾಟಿನ್ ಭಾಷೆಯನ್ನು ಕಲಿತು ಹನ್ನೆರಡನೆಯ ವಯಸ್ಸಿಗೆ ಶಾಲೆಯಿಂದ ಹೊರಬಿದ್ದು ಕಲಾಯಿಗಾರನ (ತವರ ಲೋಹದ ಕೆಲಸಗಾರ) ಬಳಿ ಸೇರಿಕೊಂಡು ಏಳು ವರ್ಷ ಕೆಲಸ ಕಲಿತ. ಅಲ್ಲಿ ಅವನು ಪ್ರತಿದಿನ ಹದಿನೈದು-ಹದಿನಾರು ತಾಸು ದುಡಿಯಬೇಕಾಗುತ್ತಿತ್ತು.೧೩

೧೮೧೭ರಲ್ಲಿ ಜನಿಸಿದ ಜಾರ್ಜ್ ಜೂಲಿಯನ್ ಹಾರ್ನೆಗೆ ದೊರಕಿದ್ದು ಕೇವಲ ವನಿತಾ ಶಾಲೆಯ ವಿದ್ಯಾಭ್ಯಾಸ.೧೪ ಎಬೆನೆಜೆರ್ ಎಲಿಯಟ್ ಎಂಬಾತ ದುಡಿಯುವ ವರ್ಗದ ಪ್ರಖ್ಯಾತ ಕವಿ. ಆ ಕಾಲದಲ್ಲಿ ಸರ್ಕಾರ ತಂದ 'ಧಾನ್ಯದ ಕಾನೂನು'ಗಳಿಂದ ಬಡವರು ನೊಂದಿದ್ದಾಗ ಆತ ಅದರ ಬಗ್ಗೆಯೇ ಬಂಡಾಯದ ಕವನಗಳನ್ನು ರಚಿಸಿ 'ಕಾರ್ನ್ ಲಾ ರೈಮರ್' ಎಂಬ ಹೆಸರನ್ನು ಸಂಪಾದಿಸಿದವನು. ಆತ ರಾದರ್‌ಹಾಮ್ ಎಂಬಲ್ಲಿದ್ದ ಪ್ರೆಸ್‌ಬಿಟೇರಿಯನ್ ಮತಸ್ಥರ ಶಾಲೆಯಲ್ಲಿ ಒಂದಿಷ್ಟು ಕಲಿತವನು. ಲ್ಯಾಂಕಾಶೈರ್ ಪ್ರಾಂತ್ಯದ ದುಡಿಯುವ ಜನರ ಶಿಕ್ಷಕನಾದ ರೌಲಂಡ್ ಡೆಟ್ರಾಸಿಯರ್ ಎಂಬುವನು ಭಾನುವಾರದ ಶಾಲೆಯಲ್ಲಿ 'ಓದಲು, ಬರೆಯಲು' ಕಲಿತ.[೧೫] "ಬಡವಳಾದರೂ ಜಾಣೆಯಾಗಿದ್ದು" ಭಾನುವಾರದ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ತಾಯಿಯಿಂದ ಜೇಮ್ಸ್ ವ್ಯಾಟ್ಸನ್ ಎಂಬಾತನು ಓದುವ ಶ್ರದ್ಧೆಯನ್ನು ಬೆಳೆಸಿಕೊಂಡ ಮತ್ತು ಕೊಂಚವಾದರೂ ವಿದ್ಯೆಯನ್ನು ಕಲಿತ. ಅನಂತರ ಅವನನ್ನು ಹನ್ನೆರಡನೆಯ ವಯಸ್ಸಿಗೇ ಧರ್ಮಗುರುವಿನೊಬ್ಬನ ಬಳಿ ಸಾಧಾರಣ ಕೆಲಸಗಾರನಾಗಿ ತರಬೇತಿ ಪಡೆಯಲು ಸೇರಿಸಲಾಯಿತು. ಅವನೇ ಹೇಳಿಕೊಂಡಂತೆ "ಆ ಕೆಲಸ ಮಾನಸಿಕ ಬೆಳವಣಿಗೆಗೆ ಅನುಕೂಲಕರವಾಗಿರಲಿಲ್ಲ" ಅದೇನೇ ಆದರೂ ಆ ಹೊತ್ತಿಗೆ "ಓದಲು, ಅಸ್ಫುಟವಾಗಿಯಾದರೂ ಬರೆಯಲು, ಅಸಮರ್ಪಕವಾಗಿ ಲೆಕ್ಕ ಮಾಡಲು" ಅವನಿಗೆ ಬರುತ್ತಿತ್ತು.[೧೬]

ಹೀಗಾಗಿ ಕೆಲವು ಕಾರ್ಮಿಕರು ದುಡಿಯುವ ಜೀವನದ ಹಂತಕ್ಕೆ ಪ್ರವೇಶಿಸುವ ಮುನ್ನ ಹೇಗೋ ಮಾಡಿ ಒಂದಿಷ್ಟು ಸಾಕ್ಷರತೆಯನ್ನು ಗಳಿಸಿಕೊಂಡಿದ್ದರು. ಆದರೆ ಆಡಂ ಸ್ಮಿತ್‌ರವರು ಹೇಳುವಂತೆ ಆ ದುಡಿಯುವ ಬದುಕು ಮಾತ್ರ ಮಾನಸಿಕ ಚಟುವಟಿಕೆಗೆ ಎಳ್ಳಷ್ಟೂ ಪೂರಕವಾಗಿರಲಿಲ್ಲ. ಅದೇನೇ ಇರಲಿ ಮನುಷ್ಯನು ಕಲಿಯುವುದಾಗಲೀ, ಇನ್ನಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳುವುದಾಗಲೀ ಕೇವಲ ಶಿಕ್ಷಣದಿಂದಲ್ಲ. ತರುಣರಾದ ಲವೆಟ್,

ಕೂಪರ್ ಮೊದಲಾದವರು ದುಡಿಯಲಾರಂಭಿಸಿದಾಗ ದೇಶದಲ್ಲಿ ಎಲ್ಲೆಡೆ ಆರ್ಥಿಕ ಅಲ್ಲೋಲಕಲ್ಲೋಲ ಮತ್ತು ರಾಜಕೀಯ ಆಂದೋಲನಗಳು ಕಾಣಿಸಿಕೊಂಡಿದ್ದವು. ಅನಂತರದ ದಿನಗಳಲ್ಲಿ ಕಾರ್ಲೈಲ್ ಹೀಗೆಂದು ಬರೆದರು:

“೧೮೧೬ರ ಸಾರ್ವತ್ರಿಕ ಬಿಕ್ಕಟ್ಟು ಮತ್ತು ಸಂಕಟವನ್ನು ನಾನೂ ಅನುಭವಿಸಿದೆ. ಅದು ನನ್ನ ಕಣ್ಣು ತೆರೆಸಿತು. ರಾಜಕೀಯವನ್ನು ಕುರಿತು ನನ್ನ ಆಸಕ್ತಿಯನ್ನು ಕೆರಳಿಸಿತು ಮತ್ತು ಆ ವಿಷಯದ ಬಗ್ಗೆ ಯಾವುದೇ ಪ್ರಕಟಣೆ ಸಿಕ್ಕಿದರೂ ನಾನು ಆಸಕ್ತಿಯಿಂದ ಓದಲಾರಂಭಿಸಿದೆ ಮತ್ತು ನನಗೆ ಸ್ವತಂತ್ರವಾದ ಪತ್ರಿಕೆಯ ಅಗತ್ಯ ಏನೆಂಬುದು ಅರಿವಾಯಿತು......... ಕಾರ್ಖಾನೆಗಳಲ್ಲಿ ಕ್ರಾಂತಿಯನ್ನು ಬಿಟ್ಟು ಇನ್ನ್ಯಾವುದರ ಬಗ್ಗೆಯೂ ಚರ್ಚೆ ಆಗುತ್ತಿರಲಿಲ್ಲ; ಇದರಿಂದ ನಾನೆಷ್ಟು ಉತ್ತೇಜಿತನಾದೆನೆಂದರೆ ನಾನು ಮನಸ್ಸಿನಲ್ಲೇ ಗಾಳಿಗೋಪುರಗಳನ್ನು ಕಟ್ಟಲಾರಂಭಿಸಿದೆ.”[೧೭]

ಹೀಗೆ ರಾಜಕೀಯ ಕಾರ್ಯಚಟುವಟಿಕೆಗಳಿಗೆ ಆಕರ್ಷಿತನಾದ ಕಾರ್ಲೈಲ್ ಲೇಖಕನಾಗಿ ಬರೆಯಲಾರಂಭಿಸಿದ. ಈ ಕಾಲಾವಧಿಯಲ್ಲೇ ಅವನು ಲಂಡನ್ ನಗರದಲ್ಲಿ ಒಂದು ಪುಸ್ತಕದ ಅಂಗಡಿಯನ್ನು ಆರಂಭಿಸಿದ ಮತ್ತು ಅನಂತರದ ದಿನಗಳಲ್ಲಿ ಸಕ್ರಿಯ ರಾಜಕೀಯ ಚಟುವಟಿಕೆಗೆ ಸೆಳೆಯಲ್ಪಟ್ಟಿದ್ದ ಜೇಮ್ಸ್ ವ್ಯಾಟ್ಸನ್‌ನು ಸಹ ಕಾರ್ಲೈಲ್‌ಗೆ ಈ ಕೆಲಸದಲ್ಲಿ ನೆರವಾದ. ವ್ಯಾಟ್ಸನ್‌ನು ಲೀಡ್ಸ್ ನಗರಕ್ಕೆ ೧೮೧೭ರಲ್ಲಿ ಬಂದಿದ್ದವನು ಉಗ್ರಾಣವೊಂದರಲ್ಲಿ ಕೆಲಸ ಮಾಡುತ್ತಿದ್ದ. ಇಲ್ಲಿ ಆತ ಕೆಲವು ತೀವ್ರಗಾಮಿ ಸುಧಾರಣಾವಾದಿಗಳ ಸಂಪರ್ಕಕ್ಕೆ ಬಂದ. ಅವರಾದರೋ ಆಗಲೇ ವೂಲರ್‌ನ ‘ಬ್ಲಾಕ್ ಡ್ವಾರ್ಫ್’, ಕಾಬೆಟ್‌ನ ‘ರಿಜಿಸ್ಟರ್’, ಕಾರ್ಲೈಲ್‌ನ ‘ರಿಪಬ್ಲಿಕನ್’ಗಳನ್ನು ಓದಿ ಈ ಪತ್ರಿಕೆಗಳಲ್ಲಿ ‘ಅನೇಕ ಒಳ್ಳೆಯ ವಿಷಯಗಳಿವೆ' ಎಂದು ಕಂಡುಕೊಂಡಿದ್ದರು. ವ್ಯಾಟ್ಸನ್‌ನು ನಾಲ್ಕು ವರ್ಷಗಳ ಕಾಲ ಚಟುವಟಿಕೆ ನಡೆಸಿ “ಉದಾರವಾದಿಯಾದ ಮುಕ್ತ ಚಿಂತನೆಯ ಸಾಹಿತ್ಯವನ್ನು ಪ್ರಸಾರ ಮಾಡಿದ. ಸಭೆ-ಚರ್ಚೆಗಳ ಮೂಲಕ ಮುಕ್ತವಾದ ಚರ್ಚೆಯನ್ನು ನಡೆಸುವ ಹಕ್ಕನ್ನು ಪಡೆದುಕೊಳ್ಳಲು ಪ್ರಯತ್ನಿಸಿ”೧೮ ಕಾರ್ಲೈಲ್‌ನ ಪುಸ್ತಕದಂಗಡಿಯಲ್ಲಿ ಅವನ ಪರವಾಗಿ ಕುಳಿತುಕೊಳ್ಳಲು ತಾನಾಗಿಯೇ ಸಮ್ಮತಿಸಿ ೧೮೨೨ರಲ್ಲಿ ಲಂಡನ್ ನಗರಕ್ಕೆ ಬಂದನು. ವಿಲಿಯಮ್ ಲವೆಟ್ ಸಹ ಜ್ಞಾನಾರ್ಜನೆಗೆ ಹಿಡಿದ ದಾರಿ ಇಂಥದ್ದೇ. ೧೮೨೩ರಲ್ಲಿ ಲಂಡನ್‌ಗೆ ಬಂದ ಮೇಲೆ ಆತನಿಗೆ “ಉದಾರವಾದಿಗಳು” ಎಂದು ಹೆಸರುವಾಸಿಯಾಗಿದ್ದ ಸಂಘದೊಂದಿಗೆ ಆಕಸ್ಮಿಕವಾಗಿ ಪರಿಚಯವಾಯಿತು. ಆ ಸಂಘದಲ್ಲಿದ್ದವರು ‘ಮುಖ್ಯವಾಗಿ ಕಾರ್ಮಿಕರು’. ಅವರು ಪ್ರತಿವಾರ ಎರಡು ಬಾರಿ ಸಂಜೆ “ಸಾಹಿತ್ಯಕ, ರಾಜಕೀಯ ಅಥವಾ ತತ್ತ್ವಶಾಸ್ತ್ರೀಯ ವಿಷಯಗಳನ್ನು ಕುರಿತಾದ ಚರ್ಚೆಗಳಿಗಾಗಿ” ಒಟ್ಟಾಗಿ ಸೇರುತ್ತಿದ್ದರು. ಈ ಬೌದ್ಧಿಕ ಪ್ರಚೋದನೆ ಮತ್ತು ರಾಜಕೀಯ ಕ್ರಿಯಾಶೀಲತೆಯ ಪ್ರಭಾವದಿಂದ “ನನ್ನ ಮನಸ್ಸು ಒಂದು ರೀತಿಯ ಹೊಸ ಮಾನಸಿಕ ಅಸ್ತಿತ್ವಕ್ಕೆ, ಹೊಸ ಭಾವನೆಗಳಿಗೆ, ಭರವಸೆಗಳಿಗೆ, ಆಶಯಗಳಿಗೆ ಜಾಗೃತವಾಯಿತು ಮತ್ತು ಬಿಡುವಿನ ಪ್ರತಿಯೊಂದು ಕ್ಷಣದಲ್ಲಿಯೂ ಒಂದಲ್ಲ

ಒಂದು ರೀತಿಯ ಉಪಯುಕ್ತ ಜ್ಞಾನವನ್ನು ಗಳಿಸಿಕೊಳ್ಳುವತ್ತ ಗಮನ ಹರಿಸುವಂತಾಯಿತು" ಎಂದು ಆತ ಅನಂತರ ಬರೆದುಕೊಂಡ.[೧೯]

ಶಿಕ್ಷಣವನ್ನು ಕುರಿತು ಈ ಜನಗಳಿಗೆ ಅದೆಂಥ ಆಸಕ್ತಿ ಇತ್ತೆಂದರೆ ಅದು ಅವರನ್ನು ಅಸಾಧಾರಣ ಪ್ರಯತ್ನಗಳಿಗೆ ಪ್ರೇರೇಪಿಸಿತು. ಥಾಮಸ್ ಕೂಪರ್‌ನು ಬೇಸಿಗೆಯಲ್ಲಾಗಲೀ, ಕೊರೆಯುವ ಚಳಿಗಾಲದಲ್ಲಾಗಲಿ ಬೆಳಗಿನ ಝಾವ ೩-೪ ಘಂಟೆಗೆ ಎದ್ದು ಅಧ್ಯಯನಕ್ಕೆ ತೊಡಗಿದರೆ ಕೆಲಸಕ್ಕೆ ಹೋಗುವವರೆಗೂ ಓದುತ್ತಿದ್ದ. ಸಾಧ್ಯವಾದರೆ ಕೆಲಸದ ನಡುವೆಯೂ ಬಿಡುವು ಮಾಡಿಕೊಂಡು ಓದುತ್ತಿದ್ದ. ಮತ್ತೆ ಸಂಜೆಯೂ ಓದುತ್ತಿದ್ದ. ಚರಿತ್ರೆ, ಸಾಹಿತ್ಯ, ತತ್ತ್ವಶಾಸ್ತ್ರ, ಹೀಗೆ ಅವನ ಓದು ವಿಸ್ತಾರವಾದದ್ದು. ಅವನು ಲ್ಯಾಟಿನ್, ಗ್ರೀಕ್, ಹೀಬ್ರೂ ಭಾಷೆಗಳನ್ನೂ ಕಲಿತ. ಶೇಕ್ಸ್ಪಿಯರ್‌ನ ನಾಟಕಗಳನ್ನು ಕಂಠಪಾಠ ಮಾಡಿಬಿಟ್ಟಿದ್ದ.[೨೦] ಇನ್ನೊಂದು ಕಡೆ ಕಾರ್ಲೈಲ್‌ನು ತಾನು ಡೊರ್‌ಚೆಸ್ಟರ್ ಜೈಲಿನಲ್ಲಿದ್ದಾಗ "ವ್ಯಾಕರಣವನ್ನು, ಅಂದವಾಗಿ ಬರೆಯುವುದನ್ನು" ಚೆನ್ನಾಗಿ ಕರತಲಾಮಲಕ ಮಾಡಿಕೊಂಡ. ಅದಕ್ಕಾಗಿಯೇ ಉಪಾಧ್ಯಾಯರನ್ನು ಪಡೆದುಕೊಂಡಿದ್ದ. ಇದಲ್ಲದೆ ಅವನು ಧರ್ಮಶಾಸ್ತ್ರ, ರಾಜಕೀಯ ಅರ್ಥಶಾಸ್ತ್ರ, ಚರಿತ್ರೆ, ಸಾಹಿತ್ಯ, ಮೆದುಳಿನ ಅಧ್ಯಯನ ಇವುಗಳನ್ನು ಕುರಿತೂ ಸಹ ಅಭ್ಯಾಸ ಮಾಡಿದ.[೨೧] ಅದೇ ರೀತಿಯಲ್ಲಿ, ಜೇಮ್ಸ್ ವ್ಯಾಟ್ಸನ್‌ನೂ ಸಹ ಬಂಧನಕ್ಕೊಳಗಾದಾಗ ಗಿಬ್ಬನ್ (ಚರಿತ್ರಕಾರ), ಹ್ಯೂಮ್(ಚಿಂತಕ) ಮೊದಲಾದವರನ್ನು ಅಧ್ಯಯನ ಮಾಡಿದ. ಆತ ಅನಂತರ ಬರೆದುಕೊಂಡ, "ನಾನು ಈ ಪರಿಸ್ಥಿತಿಯನ್ನು (ಬಂಧನವನ್ನು) ಆದಷ್ಟೂ ಅಧ್ಯಯನ ಮತ್ತು ಸಂಶೋಧನೆಗೆ ಚೆನ್ನಾಗಿ ಉಪಯೋಗಿಸಿಕೊಳ್ಳಬೇಕೆಂದು ನಿರ್ಧರಿಸಿದೆ ಮತ್ತು ನಾನು ಹೆಚ್ಚು ಹೆಚ್ಚು ಓದಿದಷ್ಟೂ ನನ್ನ ತಿಳಿವಳಿಕೆಯ ಕೊರತೆ ನನಗೆ ಸ್ಪಷ್ಟವಾಗುತ್ತಾಹೋಯಿತು.''[೨೨]

ಕಾರ್ಮಿಕವರ್ಗದ ಸ್ವಯಂಶಿಕ್ಷಣದ ಸಂಪ್ರದಾಯವು ೧೭೯೦ರ ದಶಕದ ಫ್ರಾನ್ಸಿಸ್ ಪ್ಲೇಸ್ ಮತ್ತು ವಿಲಿಯಮ್ ಕಾಬೆಟ್ ಅವರ ಧೀರೋದಾತ್ತ ಪ್ರಯತ್ನಗಳಿಂದ ಶುರುವಾಯಿತು ಎನ್ನಬಹುದು.[೨೩] ಇದು ಅವಿರತವಾಗಿ ಮುಂದುವರಿಯಿತು. ತತ್ಫಲವಾಗಿ ಅನೇಕ ಕಾರ್ಮಿಕರು ಸಮಕಾಲೀನ ಕ್ರಾಂತಿಕಾರಿ ಸಾಹಿತ್ಯ ಮಾತ್ರವಲ್ಲದೆ ೧೮ನೇ ಶತಮಾನದ ಜ್ಞಾನೋದಯ ಕಾಲದ ರಾಜಕೀಯ ಮತ್ತು ಸಾಮಾಜಿಕ ಸಾಹಿತ್ಯವನ್ನು ಸಹ ವಿಶದವಾಗಿ ಅಭ್ಯಾಸಮಾಡಿಕೊಂಡಿದ್ದರು. ಸಾಮಾಜಿಕ ಮತ್ತು ರಾಜಕೀಯ ಹೋರಾಟದ ಹಿನ್ನೆಲೆಯಲ್ಲಿ ಈ ಅಧ್ಯಯನ ನಡೆದಿತ್ತಾದ್ದರಿಂದ ಈ ಗ್ರಂಥಗಳು ಅವರಲ್ಲಿ ಪ್ರಾಥಮಿಕ ರಾಜಕೀಯ ಹಕ್ಕುಗಳನ್ನು ಗಳಿಸಿಕೊಳ್ಳಬೇಕೆಂಬ ಹೊಸ ಪ್ರಯತ್ನಗಳಿಗೆ ಪ್ರೇರಣೆ ನೀಡಿದವು ಮತ್ತು ಜ್ಞಾನವನ್ನು ಪಡೆದುಕೊಳ್ಳುವ ಹಕ್ಕಿಗಾಗಿಯೂ ಹೋರಾಡುವಂತೆ ಮಾಡಿದವು.

## iii. ಹ್ಯಾಂಪ್‌ಡೆನ್ ಕ್ಲಬ್‌ಗಳು ಮತ್ತು ಭಾನುವಾರದ ಲೌಕಿಕ ಶಾಲೆಗಳು

೧೮೧೫ರ ಅನಂತರ ಲಂಡನ್‌ನಲ್ಲೂ ಗ್ರಾಮಾಂತರ ಪ್ರದೇಶಗಳಲ್ಲೂ ಹೊಸ ಕ್ಲಬ್‌ಗಳು ತಲೆ ಎತ್ತಿದವು. ವಿಶಿಷ್ಟವಾಗಿ ಉತ್ತರದಲ್ಲಂತೂ ಸಂಸದೀಯ ಸುಧಾರಣೆಗಾಗಿ ೧೮೧೬-೧೭ರಲ್ಲಿ ನಡೆದ ಹೋರಾಟಗಳಿಂದ ಹ್ಯಾಂಪ್‌ಡೆನ್ ಕ್ಲಬ್ಬುಗಳು ಆರಂಭವಾದವು. ಇವು ಮೇಜರ್ ಕಾರ್ಟ್ರೈಟ್‌ರಿಂದ ನೇರವಾಗಿ ಸ್ಫೂರ್ತಿ ಹೊಂದಿದ್ದು, ಕರೆಸ್‌ಪಾಂಡಿಂಗ್ ಎಂದು ಹೇಳಲಾದ ಕ್ಲಬ್‌ಗಳಂತೆಯೇ ರಾಜಕೀಯ ಚಟುವಟಿಕೆಗಳ ಜೊತೆಯಲ್ಲಿಯೇ ಸಂಘಟಿತ ತರಗತಿಗಳಲ್ಲಿ ಚರ್ಚೆಗಳನ್ನು ಹಮ್ಮಿಕೊಂಡವು. ಬ್ಯಾಮ್‌ಫರ್ಡ್ರ್ ಲ್ಯಾಂಕಾಶೈರ್ ಪ್ರಾಂತ್ಯದ ಗ್ರಾಮಗಳಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಕುರಿತು ಹೀಗೆನ್ನುತ್ತಾರೆ; "ಕಾಬೆಟ್‌ರ ಪುಸ್ತಕಗಳ ಅಗ್ಗದ ಆವೃತ್ತಿಗಳನ್ನು ಮುದ್ರಿಸಲಾಯಿತು. ಹ್ಯಾಂಪ್‌ಡೆನ್ ಕ್ಲಬ್ಬುಗಳ ಪ್ರತಿವಾರದ ಚರ್ಚೆ ಮತ್ತು ಅಧ್ಯಯನಕ್ಕಾಗಿ, ಕಾರ್ಮಿಕರು ಇವುಗಳನ್ನು ಓದಿಕೊಂಡು ಅದರಿಂದಾಗಿ ವ್ಯವಸ್ಥಿತವಾಗಿ, ಚೆನ್ನಾಗಿ ವಾಗ್ವಾದ ನಡೆಸಲು ಕಲಿತುಕೊಂಡರು."[೨೪] ಇಂಥ ವಿವರವನ್ನು ಕುರಿತು ಇನ್ನೊಂದು ರೀತಿಯ ಸಾಕ್ಷಿ ಸಹ ಲಭ್ಯವಿದೆ. ಆ ಸಾಕ್ಷಿ ಎಂದರೆ ಈ ಗ್ರಾಮಗಳನ್ನು ಕುರಿತು ವರದಿ ಮಾಡಲು ನಿಯೋಜಿತನಾಗಿದ್ದ ಸರ್ಕಾರಿ ಗುಪ್ತಚಾರ. ಅವನ ವರದಿ ಹೀಗೆನ್ನುತ್ತದೆ "ಧಾರ್ಮಿಕ ಸಭೆ, ಪ್ರಾರ್ಥನೆಗಳಿಗೆ ಹಾಜರಾಗುವುದನ್ನು ಬಿಟ್ಟು, ಈ ಜನ ಭಾನುವಾರವನ್ನು ತಮ್ಮ ಮಧ್ಯೆ ಚೆನ್ನಾಗಿ ವಿತರಿಸಲ್ಪಟ್ಟಿದ್ದ ಕಾಬೆಟ್ ಮತ್ತು ಪೇಯ್ನ್ ಮುಂತಾದವರ ಪುಸ್ತಕಗಳನ್ನು ಓದಿ ಚರ್ಚಿಸಲು ವಿನಿಮಯ ಮಾಡಿಕೊಳ್ಳುತ್ತಿದ್ದರು." ಮುಂದುವರಿದು ಈ ಗುಪ್ತಚಾರ ವರದಿ ಹೇಳುತ್ತದೆ: "ಸಮಾಜದ ಕೆಳಸ್ತರದ ಜನರ ಮನೆಗಳಲ್ಲಿ ವಿಪರೀತ ರಾಜಕೀಯ ಕರಪತ್ರಗಳ ವಿತರಣೆಯಾಗಿ ಸಂಸದೀಯ ಸುಧಾರಣೆಯು ಅವರ ಮನಸ್ಸುಗಳನ್ನು ಆವರಿಸಿಕೊಂಡುಬಿಟ್ಟಿತ್ತು ಮತ್ತು ಆಶ್ಚರ್ಯಕರ ವೇಗದಲ್ಲಿ ಅದು ಅವರ ನಡುವೆ ಹರಡಿಕೊಂಡಿತ್ತು."[೨೫]

ಶಿಕ್ಷಣ ಮತ್ತು ರಾಜಕೀಯ ಕಾರ್ಯಾಚರಣೆಯ ನಡುವಿನ ನಿಕಟ ಸಂಬಂಧವು ಲ್ಯಾಂಕಾಶೈರ್ ಪ್ರಾಂತ್ಯದ ಜನತಾಂತ್ರಿಕ ಆಂದೋಲನದ ಮೇಲಿನ ಆ ಬೆಳವಣಿಗೆಯಲ್ಲಿ ವಿಶಿಷ್ಟವಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಲ್ಯಾಂಕಾಶೈರಿನ ನೇಕಾರರು, ನಡೆಸಿದ ಒಂದು ಐತಿಹಾಸಿಕ ಹೋರಾಟವನ್ನು 'ಮಾರ್ಚ್ ಆಫ್ ದಿ ಬ್ಲಾಂಕೆಟಿಯರ್ಸ್' ಎಂದು ಕರೆಯುತ್ತಾರೆ. ಅನೇಕ ಯೋಜನೆಗಳು ವಿಫಲವಾದ ಮೇಲೆ ನಡೆದ ಈ ಹೋರಾಟದ ತರುವಾಯ ಅಲ್ಲಿನ ನಾಯಕರು ಭಾನುವಾರದ ರಾಜಕೀಯ ಶಾಲೆಗಳನ್ನು ಆರಂಭಿಸಲು ಕೂಡಲೇ ಗಮನ ಹರಿಸಿದರು. ಇದರ ಬಗ್ಗೆ ಸಹ ಸರ್ಕಾರಿ ಗೂಢಚಾರನು ಹೀಗೆನ್ನುತ್ತಾನೆ: "ಚಳವಳಿಯ ನಾಯಕರು ಇಡಿಯ ಪ್ರಾಂತ್ಯದಾದ್ಯಂತ ಓಡಾಡುತ್ತಾ, ತಮ್ಮ ಶಿಕ್ಷಣ ಪ್ರಸಾರದ ಯೋಜನೆಯು, ಮೆಥಾಡಿಸ್ಟ್ ಪಂಥದವರು ತಮ್ಮ ತತ್ತ್ವಗಳನ್ನು ಪ್ರಚುರಪಡಿಸಲು ಮಾಡಿಕೊಂಡ ವಿಧಾನಗಳನ್ನೇ ಹೋಲುತ್ತದೆ ಎಂದು ವಿವರಿಸಿದರು." ಅವರು ಭಾನುವಾರದ

ಶಾಲೆಗಳನ್ನು ಎಲ್ಲೆಡೆಯೂ ಆರಂಭಿಸುವಲ್ಲಿ ಯಶಸ್ವಿಯಾದರು. "ಪ್ರತಿಯೊಂದು ಸ್ಥಳವು ತಾನೇ ಮೊದಲು ಶಾಲೆ ಆರಂಭಿಸಬೇಕೆಂಬ ಉತ್ಸುಕತೆಯನ್ನು ಪ್ರದರ್ಶಿಸುತ್ತಿತ್ತು."

ಅಂದಿನ ಕಾರ್ಮಿಕ ವರ್ಗದ ನಾಯಕರು ಮತ್ತು ಜನತಾಂತ್ರಿಕ ಚಳವಳಿಗಳ ನೇತಾರರು ರಾಜಕೀಯ ಸುಧಾರಣೆಗೆ ಚರ್ಚ್ ದೊಡ್ಡ ಅಡೆತಡೆ ಎಂದು ಭಾವಿಸಿದ್ದರು, ಅದರ ವೈಚಾರಿಕ ಪ್ರಭಾವದಿಂದಲೇ ಜನರನ್ನು ರಾಜಕೀಯ ಕ್ರಿಯಾಶೀಲತೆಯಿಂದ ಹಿಂದಕ್ಕೆ ಸೆಳೆಯಲಾಗಿದೆ ಎಂದು ಪರಿಗಣಿಸಿದ್ದರು ಎಂಬುದನ್ನು ನಾವು ಮನವರಿಕೆ ಮಾಡಿಕೊಂಡಾಗ ಅವರ ಪ್ರಯತ್ನಗಳು, ಉದ್ದೇಶಗಳು ಎಷ್ಟು ಗಮನಾರ್ಹ, ಮುಖ್ಯ ಎಂಬುದು ನಮಗೆ ಅರಿವಾಗುತ್ತದೆ. ಆದ್ದರಿಂದಲೇ ಮ್ಯಾಜಿಸ್ಟ್ರೇಟ್‌ನ ಪರವಾಗಿ ಕೆಲಸಮಾಡುತ್ತಿದ್ದ ಗುಪ್ತಚಾರನು ರಾಯ್‌ಟನ್ ಪ್ರದೇಶದ ಗುಂಪೊಂದು ಹ್ಯಾಂಪ್‌ಡೆನ್ ಕ್ಲಬ್ ಒಂದನ್ನು ರಚಿಸಲು ಮುಂದಾದಾಗ ಹೀಗೆಂದು ವರದಿ ಮಾಡುತ್ತಾನೆ: "ಅವರು ಯಾವಾಗಲೂ ಮತ್ತೆ ಮತ್ತೆ ಹೇಳುತ್ತಿದ್ದುದೆಂದರೆ ಒಂದು ದೇಶದಿಂದ ಭ್ರಷ್ಟತೆ, ಅಸಮಾನತೆಗಳನ್ನು ಕಿತ್ತೊಗೆಯಬೇಕೆಂದರೆ ಮೊದಲು ವಿಚಾರಿಸಿಕೊಳ್ಳಬೇಕಾದದ್ದು ಪುರೋಹಿತಶಾಹಿಯನ್ನು. ಏಕೆಂದರೆ ಜನತೆಯ ಮೇಲೆ ಅತಿ ಹೆಚ್ಚು ಪ್ರಭಾವವಿರುವುದು ಅವರಿಗೆ. ಅಲ್ಲದೆ ಪರಲೋಕದಲ್ಲಿ ನಿಮಗೆ ಶಾಶ್ವತವಾದ ಶಿಕ್ಷೆ ಕಾದಿದೆ ಎಂದು ಪುರೋಹಿತರು ಬೆದರಿಸುತ್ತಿರುವವರೆಗೆ ಹೆಚ್ಚು ಉದಾರವಾದ ಸರ್ಕಾರವೊಂದನ್ನು ರಚಿಸುವುದರ ಬಗ್ಗೆ ಭರವಸೆ ಇಟ್ಟುಕೊಳ್ಳುವುದು ಸಾಧ್ಯವಿಲ್ಲ."

ಲ್ಯಾಂಕಾಶೈರಿನ ಉದ್ದಗಲಕ್ಕೂ ಹ್ಯಾಂಪ್‌ಡೆನ್ ಕ್ಲಬ್ಬುಗಳನ್ನು ಸ್ಥಾಪಿಸಲು ಮತಧರ್ಮವನ್ನು ವಿರೋಧಿಸುವ ಪ್ರಚಾರವನ್ನು ಕೈಗೊಳ್ಳುತ್ತಲೇ ಅವರು ಜೊತೆಗೆ ಭಾನುವಾರದ ಶಾಲೆಗಳಲ್ಲಿ ಮಕ್ಕಳಿಗೆ ಮತಧರ್ಮದ ಗೊಡ್ಡು ಕಲಿಕೆಯನ್ನು ನೀಡುವ ಬದಲು ವಿಚಾರವಾದಿ ಶಿಕ್ಷಣವನ್ನು ನೀಡಲು ಮುಂದಾದರು. ಅದು ೧೮೧೭ರ ಅನಂತರದ ಸಂಸದೀಯ ಸುಧಾರಣೆಯ ರಾಷ್ಟ್ರವ್ಯಾಪಿ ಆಂದೋಲನದ ಭಾಗವಾಗಿತ್ತು. ಅನುಭವವು ಸಾರಿ ಹೇಳುವಂತೆ ಶಿಕ್ಷಣವು ಅಭಿಪ್ರಾಯಗಳನ್ನು ರೂಪಿಸುವಲ್ಲಿ ಅತ್ಯಂತ ಶಕ್ತಿಶಾಲಿಯಾದದ್ದು ಎಂದು ಸುಧಾರಣಾವಾದಿಗಳು ಜ್ಞಾನೋದಯ ಚಳವಳಿಯ ತತ್ತ್ವಶಾಸ್ತ್ರಜ್ಞರಂತೆಯೇ ವಾದಿಸಿದರು. ಇದಲ್ಲದೆ ಇನ್ನೂ ಒಂದು ಅಂಶವನ್ನು ಹೇಳಿದರು:

"ಯುರೋಪಿನ ರಾಷ್ಟ್ರಗಳು ಒಂದು ಬಹುದೊಡ್ಡ ಕೆಡುಕನ್ನು ಅನುಭವಿಸುತ್ತಾ ಬಂದಿದ್ದವು. ಅದೆಂದರೆ ಮತಧರ್ಮದ ಯಾತನಾಮಯ ಕಲಿಕೆಗೆ ಮತ್ತು ತರಬೇತಿಗೆ ಮಕ್ಕಳನ್ನು ಗುರಿಯಾಗಿಸುವುದು. ಆ ಕಲಿಕೆಯೋ ಅತ್ಯಂತ ಅಸ್ಪಷ್ಟವಾಗಿ, ಸಂದೇಹಾಸ್ಪದವಾಗಿ ಇದ್ದು ಸ್ವಯಂ ವಿರೋಧಗಳಿಂದ ತುಂಬಿರುವಂಥದ್ದಾಗಿರುತ್ತಿತ್ತು. ಇದರ ಬದಲು ಅವರಿಗೆ ರಾಜ್ಯ ವ್ಯವಹಾರದ ತತ್ತ್ವಗಳನ್ನು ಕಲಿಸಿದರೆ, ವೈಚಾರಿಕ ಶಕ್ತಿಯನ್ನು ಸರಿಯಾಗಿ

ಉಪಯೋಗಿಸುವುದನ್ನು ಕಲಿಸಿದರೆ ಅವರು ಸಮಾಜದಲ್ಲಿ ತಮ್ಮ ಬೆಲೆ ಏನೆಂಬುದನ್ನು ತಾವೇ ಅರಿಯಲಾರಂಭಿಸುತ್ತಿದ್ದರು. ಅಲ್ಲದೆ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಗುರುತಿಸುವುದು, ಆರಾಧನೆಯ ನಿಜವಾದ ಗುರಿ ಏನೆಂಬುದನ್ನು ಅರಿಯುವುದು, ಕ್ರಿಶ್ಚಿಯನ್ನರು ಅನುಸರಿಸುವ ಶಾಸ್ತ್ರೋಕ್ತ ಆಚರಣೆಗಳು, ವಿಗ್ರಹಾರಾಧನೆಗಳು ಇವುಗಳಿಗೆ ಹೇಗೆ ಬೆಲೆಕಟ್ಟಬೇಕು ಎಂಬುದನ್ನು ತೀರ್ಮಾನಿಸುವುದು ಇದೆಲ್ಲವೂ ಅವರಿಗೆ ಸಾಧ್ಯವಾಗುತ್ತದೆ. ಈ ಮಾದರಿಯಲ್ಲಿ ಶಿಕ್ಷಿತರಾದ ಜನತೆಯ ಮೇಲೆ ದಬ್ಬಾಳಿಕೆ ನಡೆಸಲು ಯಾವುದೇ ರಾಜನಿಗೆ ಅಥವಾ ಸರ್ಕಾರಕ್ಕೆ ಅಸಾಧ್ಯವಾಗುತ್ತದೆ. ಪ್ರಭುತ್ವವನ್ನು ಸುಧಾರಿಸಲು, ಮೂಢನಂಬಿಕೆಗಳನ್ನು ಹೋಗಲಾಡಿಸಲು ನಾವು ನಡೆಸುವ ಎಲ್ಲ ಪ್ರಯತ್ನಗಳು ವಿಫಲವಾದರೂ, ಇಂಥ ಶಿಕ್ಷಣವಂತೂ ಆ ದಿಶೆಯಲ್ಲಿ ಸಫಲವಾಗುತ್ತದೆ. ಇಂಥ ಶಾಲೆಗಳನ್ನು ನಾವೇನಾದರೂ, ಮೆಥಾಡಿಸ್ಟರು ತಮ್ಮ ಸಂಸ್ಥೆಗಳನ್ನು ಹರಡಿದ ರೀತಿಯಲ್ಲೇ ಸ್ಥಾಪಿಸಿದರೆ ಫಲಿತಾಂಶ ಏನಾದೀತು ಎಂಬುದನ್ನು ಊಹಿಸಿನೋಡಿ. ದೇಶದ ಸೈನಿಕರು, ನಾವಿಕರು, ಎಲ್ಲ ಪೊಲೀಸರು, ಕೆಳಗಿನ ಅಧಿಕಾರಿಗಳು ಇಂಥ ವಿದ್ಯಾಭ್ಯಾಸವನ್ನು ಪಡೆದುಕೊಂಡರೆ ಆಗ ಯಾವುದೇ ಸರ್ಕಾರವಾಗಲೀ ಪುರೋಹಿತಶಾಹಿಯಾಗಲೀ ಅವರ ಮೇಲೆ ಸವಾರಿ ಮಾಡುವುದು ಅಸಾಧ್ಯವಾಗುತ್ತದೆ. ಲಂಚಗುಳಿತನವನ್ನೂ ಅದರೊಂದಿಗೆ ಬರುವ ಎಲ್ಲ ಅನಿಷ್ಟಗಳನ್ನೂ ದೇಶದಿಂದ ಹೊರಗಟ್ಟುವುದು ಸಾಧ್ಯವಾಗುತ್ತದೆ. ಎಳೆಯ ಮನಸ್ಸುಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾದದ್ದು ಪ್ರತಿಯೊಬ್ಬ ಸತ್ಪುರುಷನ ಕರ್ತವ್ಯ. ಮುಂದಿನ ತಲೆಮಾರಿನ ಕಲ್ಯಾಣವು ಅದರ ಮೇಲೆಯೇ ಅವಲಂಬಿತವಾಗಿರುತ್ತದೆ." ಎಂದರೆ, ಜೇಮ್ಸ್ ಮಿಲ್ಲರ್ ಅವರು "ಎನ್‌ಸೈಕ್ಲೊಪಿಡಿಯಾ ಬ್ರಿಟಾನಿಕ" ಗ್ರಂಥದಲ್ಲಿ ಒಂದು ವರ್ಷದ ಮೊದಲೇ ಶಿಕ್ಷಣವನ್ನು ಕುರಿತು ವಿವರವಾಗಿ ತಮ್ಮ ಸಮರ್ಥನೆಯನ್ನು ಮಂಡಿಸುವ ಮುನ್ನವೇ ಉತ್ತಮ ಆಳ್ವಿಕೆಯ ಬುನಾದಿಯಾಗಿ, ತೀವ್ರಗಾಮಿ ಸುಧಾರಣೆಗಳಿಗಾಗಿ ನಡೆಯುವ ಹೋರಾಟದ ಅವಶ್ಯ ಭಾಗವಾಗಿ ವೈಚಾರಿಕವಾದ, ಧರ್ಮನಿರಪೇಕ್ಷವಾದ ಶಿಕ್ಷಣ ಬೇಕೇಬೇಕು ಎಂಬ ಬೇಡಿಕೆ ಇಲ್ಲಿ ಧ್ವನಿತವಾಗಿದೆ.

ಹೀಗೆ ಸ್ಥಾಪಿತವಾದ ಅನೇಕ ಶಾಲೆಗಳು ರಾತ್ರಿಯೂ, ಭಾನುವಾರವೂ ನಡೆಯುತ್ತಿದ್ದು, ಮಕ್ಕಳನ್ನೂ ದೊಡ್ಡವರನ್ನೂ ಸೇರಿಸಿಕೊಳ್ಳುತ್ತಿದ್ದವು. ದೊಡ್ಡವರು ಚಂದಾ ಹಣದ ಮೇಲೆ ತರಲಾಗುತ್ತಿದ್ದ ವಿರೋಧ ಪಕ್ಷದ ಕರಪತ್ರಗಳು ಮತ್ತು ವೃತ್ತಪತ್ರಿಕೆಗಳನ್ನು ಓದಲು ಅಥವಾ ಬೇರೆಯವರು ಓದಿದ್ದನ್ನು ಕೇಳಿಸಿಕೊಳ್ಳಲು ಬರುತ್ತಿದ್ದರು. ಅಥವಾ ರಾಜಕೀಯ, ಧಾರ್ಮಿಕ ಚರ್ಚೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಮ್ಯಾಂಚೆಸ್ಟರ್‌ನಂಥ ದೊಡ್ಡ ಊರುಗಳಲ್ಲಿ "ಬೇಗದಲ್ಲೇ ಶಾಲಾ ಕೊಠಡಿಗಳು ಕಿಕ್ಕಿರಿದು ತುಂಬಿಹೋದವು". ಇದರಿಂದಾಗಿ ದೊಡ್ಡವರನ್ನು ಮತ್ತು ಮಕ್ಕಳನ್ನು ಪ್ರತ್ಯೇಕಿಸಬೇಕಾಯಿತು. ಒಂದು ಗುಂಪನ್ನು ಕೇವಲ ಸುದ್ದಿಯನ್ನು ಓದಲಿಕ್ಕೆ ಬರುವವರೆಂದೂ, ಇನ್ನೊಂದು ಗುಂಪನ್ನು ವಿದ್ಯಾರ್ಥಿಗಳೆಂದೂ ಕರೆದರು. ರಾಜದ್ರೋಹದ

ರಾಜಕೀಯ ಚಟುವಟಿಕೆಗಳನ್ನು ಬಯಲಿಗೆಳೆಯುವುದೇ ಮುಖ್ಯ ಉದ್ದೋಗವಾಗಿದ್ದ ಗುಪ್ತಚಾರನ ವರದಿಯನ್ನು ಮತ್ತೊಮ್ಮೆ ಗಮನಿಸೋಣ. ಅವನು ಹೇಳುವಂತೆ ಶಾಲಾ ಕೊಠಡಿಗಳಲ್ಲಿ, "ಎಲ್ಲ ರೀತಿಯ ಗುಪ್ತ ಪತ್ರಗಳನ್ನು ಬರೆಯಲಾಗುತ್ತಿತ್ತು. ಸಾರ್ವಜನಿಕ ಸಭೆಯ ಗೊತ್ತುವಳಿಗಳನ್ನು ಅಂತಿಮಗೊಳಿಸಲಾಗುತ್ತಿತ್ತು. ಯೂನಿಯನ್‌ಗಳನ್ನು ವರ್ಗೀಕರಿಸಲಾಗುತ್ತಿತ್ತು. ಬೇರೆ ಬೇರೆ ವಿಭಾಗಗಳಿಗೆ ನಾಯಕರನ್ನು ನೇಮಿಸಲಾಗುತ್ತಿತ್ತು. ಒಟ್ಟಿನಲ್ಲಿ ಆ ಜಿಲ್ಲೆಯ ಕೆಳಗಡೆ ಬರುವ ಎಲ್ಲ ಸಂಘಟನಾ ಕಾರ್ಯಗಳನ್ನೂ ನಿರ್ವಹಿಸಲಾಗುತ್ತಿತ್ತು." ಈ ಮಟ್ಟಿಗೆ ಶಿಕ್ಷಣವು ರಾಜಕೀಯದೊಂದಿಗೆ ಬೆಸೆದುಕೊಳ್ಳುವುದು ಅಪರೂಪ.

### iv. ರಾಜಕೀಯ ಪ್ರಾಟೆಸ್ಟಂಟರು ಮತ್ತು "ಬ್ಲಾಕ್ ಡ್ವಾರ್ಫ್" ಪತ್ರಿಕೆ

ಈ ಚಳವಳಿಯು ಕೇವಲ ಲ್ಯಾಂಕಾಶೈರ್‌ಗೆ ಸೀಮಿತವಾಗಿರದೆ, ಈಶಾನ್ಯ ಪ್ರಾಂತ್ಯಗಳಿಗೆ, ಯಾರ್ಕ್ಶೈರ್‌ಗೆ, ಕೇಂದ್ರ ಪ್ರದೇಶಗಳಿಗೆ ಹರಡಿಕೊಂಡಿತ್ತು. ೧೮೧೮ರಲ್ಲಿ ಈಶಾನ್ಯ ಪ್ರದೇಶಗಳಲ್ಲಿ "ಪೊಲಿಟಿಕಲ್ ಪ್ರಾಟೆಸ್ಟಂಟ್ಸ್ ಯೂನಿಯನ್ ಫಾರ್ ಪಾರ್ಲಿಮೆಂಟರಿ ರಿಫಾರ್ಮ್" ಎಂಬ ತೀವ್ರಗಾಮಿ ಸಂಘಟನೆ ಕೆಲಸಮಾಡಿಕೊಂಡಿತ್ತು. ಆ ಸಂಘಟನೆಯು ಇಪ್ಪತ್ತು ಜನ ಕಾರ್ಮಿಕರಿಗೆ ಒಂದು ತರಗತಿಯಂತೆ ಸಂಘಟಿಸಿತ್ತು. ಆ ತರಗತಿಗಳು ವಾರಕ್ಕೊಮ್ಮೆ ಸೇರುತ್ತಿದ್ದವು. ಅದರಲ್ಲಿನ ಪ್ರತಿ ಸದಸ್ಯನೂ ಒಂದು ಪೆನ್ನಿ ಚಂದಾ ನೀಡಿ "ಅವಶ್ಯವಿದ್ದ ವಿದ್ಯಾಭ್ಯಾಸದ ಪ್ರಕಟಣೆಗಳನ್ನು" ಓದುತ್ತಿದ್ದ. "ನಮ್ಮ ಎಲ್ಲ ರಾಷ್ಟ್ರೀಯ ಸಂಕಟಗಳಿಗೆ, ಅಧಃಪತನಕ್ಕೆ ರಾಜಕೀಯ ಅಜ್ಞಾನವೇ ಕಾರಣ" ಎಂದು ಆ ಸಂಘಟನೆ ಘೋಷಿಸಿತ್ತು. ಯಾರ್ಕ್ ಪ್ರದೇಶದ ಪೊಲಿಟಿಕಲ್ ಪ್ರಾಟೆಸ್ಟಂಟ್ ಸಮಾಜಕ್ಕೆ ಪ್ರತಿಕ್ರಯಿಸುತ್ತಾ ಟಿ.ಜೆ. ವೂಲರ್ ಅವರು 'ಬ್ಲಾಕ್ ಡ್ವಾರ್ಫ್' ಎಂಬ ಸುಧಾರಣಾವಾದಿ ವಿಡಂಬನಾತ್ಮಕ ಪತ್ರಿಕೆಯಲ್ಲಿ ಹೀಗೆಂದು ಬರೆದರು. "ರಾಜಕೀಯ ತಿಳಿವಳಿಕೆಯನ್ನು ಹಬ್ಬಿಸುವ ಆಶಯಕ್ಕಾಗಿ..... ನೀವು ಕೈಗೊಂಡಿರುವ ಕೆಲವೊಂದು ಕ್ರಮಗಳು ಅತ್ಯಂತ ಸಮರ್ಥವಾದಂಥವು. ಒಗ್ಗಟ್ಟಿಲ್ಲದೆ ಏನನ್ನೂ ಸಾಧಿಸುವುದು ಸಾಧ್ಯವಿಲ್ಲ.....ಜನರು ಒಬ್ಬರನ್ನೊಬ್ಬರು ಭೇಟಿಯಾಗಬೇಕು, ತಮ್ಮ ಜ್ಞಾನ ಮತ್ತು ಶಕ್ತಿಯನ್ನು ಒಂದೆಡೆ ಸೇರಿಸಬೇಕು, ತಮ್ಮ ಭಾವನೆಗಳು ಒಂದೇ ರೀತಿಯವೇ ಎಂಬುದನ್ನು ತಾಳೆ ಹಾಕಿಕೊಳ್ಳಬೇಕು. ಎದುರಾಳಿಗಳ ಅಭಿಪ್ರಾಯಗಳನ್ನು ತೂಕ ಹಾಕಬೇಕು ಮತ್ತು ಸಾಮಾನ್ಯವಾಗಿ ಕಳಪೆ ಅದಿರಿನೊಂದಿಗೆ ಸೇರಿದ ಸತ್ಯದ ಚಿನ್ನವನ್ನು ಬೇರ್ಪಡಿಸಿಕೊಳ್ಳಬೇಕು."[೨೬]

ಇಂತಹ ಸಮನ್ವಯ ಹಾಗೂ ಮಾರ್ಗದರ್ಶನದಿಂದಾಗಿ ಚಳವಳಿಯು ವೇಗವಾಗಿ ಹಬ್ಬಿತು. 'ಹುಲ್ ಪೊಲಿಟಿಕಲ್ ಪ್ರಾಟೆಸ್ಟಂಟ್ಸ್ ಯೂನಿಯನ್' ಎಂಬ ಪತ್ರಿಕೆಯೊಂದು ಹೀಗೆ ವರದಿ ಮಾಡುತ್ತದೆ. "ನಾವು ಒಂದು ಪೊಲಿಟಿಕಲ್ ಪ್ರಾಟೆಸ್ಟಂಟ್ ಯೂನಿಯನ್‌ನನ್ನು ಸ್ಥಾಪಿಸಿಕೊಂಡಿದ್ದೇವೆ. ಇಂಥ ಸಂಸ್ಥೆ ದೇಶದ ಪ್ರತಿಯೊಂದು ಪಟ್ಟಣದಲ್ಲಿ, ಹಳ್ಳಿಯಲ್ಲಿ ಆರಂಭವಾಗಲಿ ಎಂದು

ಹೃದಯಾಂತರಾಳದಿಂದ ಆಗ್ರಹಿಸುತ್ತೇವೆ. ನಾವು ಇಪ್ಪತ್ತು ಸದಸ್ಯರ ತರಗತಿಗಳನ್ನು ಶುರು ಮಾಡುತ್ತೇವೆ. ಈ ತರಗತಿಯು ಪ್ರತಿ ವಾರವೂ ಸೇರಿ ರಾಜಕೀಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಕಾಬೆಟ್‌ನನ್ನು, ಶೆರ್‌ವಿನ್ ಅವರ 'ರಿಜಿಸ್ಟರ್' ಪತ್ರಿಕೆಯನ್ನು, ವೂಲರ್ ಅವರ 'ಬ್ಲಾಕ್ ಡ್ವಾರ್ಫ್' ಪತ್ರಿಕೆಯನ್ನು ಇತರ ಪುಸ್ತಕಗಳನ್ನು ಅಭ್ಯಾಸ ಮಾಡುತ್ತದೆ. ಪ್ರತಿಯೊಂದು ತರಗತಿಯ ಶಿಕ್ಷಕರೂ ತಿಂಗಳ ಮೊದಲ ಸೋಮವಾರದಂದು ಸಭೆ ಸೇರಿ ಅಧ್ಯಕ್ಷರಿಗೆ ತಮ್ಮ ಸಂಸ್ಥೆಯ ಪ್ರಗತಿ ಹೇಗಿದೆ ಎಂಬುದರ ಬಗ್ಗೆ ವರದಿ ತಯಾರಿಸುತ್ತಾರೆ.[೨೭] ಟೈನೆಸೈಡ್ ಪಟ್ಟಣಗಳ ಸಮುಚ್ಚಯದಲ್ಲಿ ೧೮೧೯ರಲ್ಲಿ "ಎರಡೂ ನದಿಗಳ ದಂಡೆಯಲ್ಲಿನ ಕಲ್ಲಿದ್ದಲು ಗಣಿಗಳ ಬಹುಪಾಲು ಕಾರ್ಮಿಕರು ಇಪ್ಪತ್ತು ಸದಸ್ಯರ ತರಗತಿಗಳಿಗೆ ಸೇರಿದ್ದರು ಮತ್ತು ಪ್ರತಿ ತರಗತಿಯಲ್ಲಿ ಒಬ್ಬ ನಾಯಕನಿರುತ್ತಿದ್ದ."[೨೮]

ನ್ಯೂ ಕ್ಯಾಸಲ್‌ನ ಪೊಲಿಟಿಕಲ್ ಪ್ರಾಟೆಸ್ಟಂಟರು ಅಂಗೀಕರಿಸಿದ್ದ ನಿಯಮಾವಳಿಗಳನ್ನು ಗಮನಿಸಿದರೆ ಈ ಸಭೆಗಳ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳಬಹುದು. ಪ್ರತಿ ವಾರವೂ ತರಗತಿಯ ನಾಯಕರು "ವೃತ್ತ ಪತ್ರಿಕೆಗಳಿಂದ ಅಥವಾ ರಾಜಕೀಯ ಪ್ರಕಟಣೆಗಳಿಂದ ಆಸಕ್ತಿದಾಯಕ ಭಾಗಗಳನ್ನು ಓದಬೇಕಿತ್ತು ಅಥವಾ ಓದಿಸಬೇಕಿತ್ತು" ಮತ್ತು "ಸದಸ್ಯರು ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವಂತೆ ನೋಡಿಕೊಂಡು ಸೂಕ್ತವಲ್ಲದ, ಪ್ರಚೋದನಾಕಾರಿಯಾದ ಚರ್ಚಾ ಶೈಲಿಯನ್ನು ಹತ್ತಿಕ್ಕಬೇಕಾಗಿತ್ತು" ಮತ್ತು "ತರಗತಿಯ ನಾಯಕನು ಯಾವ ಪತ್ರಿಕೆ ಅಥವಾ ಪುಸ್ತಕಗಳನ್ನು ಕೊಳ್ಳಬೇಕಾಗುತ್ತದೆ ಎಂಬುದನ್ನು ನಿರ್ಧರಿಸಬೇಕು......ಓದಲು ನಾವು ಶಿಫಾರಸು ಮಾಡುವ ಪುಸ್ತಕಗಳೆಂದರೆ ಕಾರ್ಟ್ರೈಟ್ ಅವರ "ಬಿಲ್ ಆಫ್ ರೈಟ್ಸ್" ಇದನ್ನು ಎಲ್ಲ ತರಗತಿಗಳಿಗೂ ಶಿಫಾರಸು ಮಾಡಲಾಗಿದೆ; 'ಬ್ಲಾಕ್ ಡ್ವಾರ್ಫ್' ಪತ್ರಿಕೆ, ಬೆಂಥಮ್ ಅವರ 'ರಿಫಾರ್ಮ್ ಕ್ಯಾಟೆಕಿಸ್ಮ್' ಮತ್ತು ಇತರ ಪುಸ್ತಕಗಳು, ಎನ್ಸರ್ ಅವರ ಗ್ರಂಥಗಳು, ಕಾಬೆಟ್ ಅವರ "ಪೇಪರ್ಸ್ ಎಗೆನ್‌ಸ್ಟ್ ಗೋಲ್ಡ್" ಅವರದ್ದೇ 'ರಿಜಿಸ್ಟರ್' ಪತ್ರಿಕೆ, ವೂಲರ್ ಮತ್ತು ಶೆರ್‌ವಿನ್ ಅವರ ಪ್ರಕಟಣೆಗಳು.[೨೯]

ಹ್ಯಾಂಪ್‌ಡೆನ್ ಕ್ಲಬ್‌ಗಳ ಅವನತಿಯ ಅನಂತರ ಸ್ಟಾಕ್‌ಪೋರ್ಟ್ನಲ್ಲಿ ಆರಂಭವಾದ ಲ್ಯಾಂಕಾಶೈರ್ ಯೂನಿಯನ್ ಸೊಸೈಟಿಗಳಲ್ಲಿ ಪ್ರತಿವಾರ ಒಂದು ಸಭೆ ಸೇರುತ್ತಿತ್ತು. "ಅಲ್ಲಿ ಯಾವುದಾದರೂ ರಾಜಕೀಯ ಪುಸ್ತಕವನ್ನಾಗಲಿ, ಪತ್ರಿಕೆಯನ್ನಾಗಲೀ, ಇನ್ನಾವುದೇ ತರಹದ ಬರಹಗಳನ್ನಾಗಲೀ" ಓದಲಾಗುತ್ತಿತ್ತು.

ಸೊಸೈಟಿಯು ಬಾಡಿಗೆಗೆ ತೆಗೆದುಕೊಂಡಿದ್ದ ಕೋಣೆಗಳನ್ನು ಬುಧವಾರದಂದು ಯಾವುದಾದರೂ ಪುಸ್ತಕ ಓದುವ ಅಭ್ಯಾಸವೊಂದಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಉಳಿದ ದಿನಗಳಲ್ಲಿ ಅಲ್ಲಿ "ಓದುವುದು, ಬರೆಯುವುದು, ವ್ಯಾಕರಣ, ಗಣಿತಗಳನ್ನು ಕಲಿಸಲಾಗುತ್ತಿತ್ತು". ಶನಿವಾರ ಮಾತ್ರ ಎಳೆಯ ವಯಸ್ಸಿನ ಸದಸ್ಯರು ಯಾವುದಾದರೂ ತಾವು ಕಲಿತ ರಾಜಕೀಯ ಬರಹವನ್ನು

ಓದಿ ಹೇಳುತ್ತಿದ್ದರು. ಭಾನುವಾರ ಬೆಳಗ್ಗೆ ಗಂಡಸರಿಗೆ ಮತ್ತು ಹೆಂಗಸರಿಗೆ ಸಹ ಓದುವುದು, ಬರೆಯುವುದು, ಅಂಕಗಣಿತ, ವ್ಯಾಕರಣಗಳನ್ನು ಕಲಿಸಲಾಗುತ್ತಿತ್ತು.[೨೦] ಸೊಸೈಟಿಯ ನಿಯಮಗಳೇ ಹೇಳಿಕೊಂಡಂತೆ ಈ ಕಲಿಕೆಯ ಗುರಿ ಏನೆಂದರೆ, ಪ್ರತಿಯೊಬ್ಬ ಸದಸ್ಯನಿಗೂ ಸೂಕ್ತ ತರಬೇತಿ ನೀಡಿ, ಪ್ರತಿಯೊಬ್ಬರೂ ತಮ್ಮ ಕೈಲಿರುವ ಎಲ್ಲ ನ್ಯಾಯಯುತ ಶಕ್ತಿಯೊಂದಿಗೆ ಸಂಸತ್ತನ್ನು ಆಮೂಲಾಗ್ರವಾಗಿ ಸುಧಾರಿಸಲು, ಎಲ್ಲ ಆರೋಗ್ಯವಂತ, ಪ್ರೌಢ, ಗಂಡಸರಿಗೆ ಮತದಾನದ ಹಕ್ಕನ್ನು ದೊರಕಿಸಿಕೊಡಲು, ಸಂಸತ್ತಿಗೆ ಒಂದು ವರ್ಷದ ಕಾಲಮಿತಿ ಹೇರಲು, ಮತ್ತು ಗುಪ್ತ ಮತದಾನವನ್ನು ಖಾತ್ರಿಪಡಿಸಲು "ಪ್ರಯತ್ನಿಸುವಂತೆ ತರಬೇತಿ ನೀಡುವುದು."[೨೧]

ಈ ರೀತಿಯ ಜನತಾ ಶಿಕ್ಷಣಕ್ಕೂ ರಾಜಕೀಯ ಕ್ರಿಯೆಗೂ ಮಧ್ಯೆ ಇರುವ ಕೊಂಡಿಯ ಬಗ್ಗೆ ಆ ದಿನಗಳಲ್ಲಿ ಬಂದ ಅಭಿಪ್ರಾಯಗಳನ್ನು ಗಮನಿಸೋಣ. ಮ್ಯಾಂಚೆಸ್ಟರ್ ನಗರದ ಒಬ್ಬ ವರದಿಗಾರನು 'ಬ್ಲಾಕ್ ಡ್ವಾರ್ಫ್' ಪತ್ರಿಕೆಯಲ್ಲಿ 'ಮ್ಯಾಂಚೆಸ್ಟರ್ ಯೂನಿಯನ್ ಭಾನುವಾರದ ಶಾಲೆ'ಯ ಬಗ್ಗೆ ಬರೆಯುತ್ತಾ, ಕೆಳಗಿನ ವರ್ಗಗಳ ಜನರಲ್ಲಿ ಕಂಡುಬಂದ ಜ್ಞಾನದಾಹದ ಬಗ್ಗೆ ಮತ್ತು ಆ ಶಾಲೆಗಳ ಯಶಸ್ಸಿನ ಬಗ್ಗೆ ಹೀಗೆನ್ನುತ್ತಾನೆ: "ಜನರ ಮನಸ್ಸಿನಲ್ಲಿ ಈಗಾಗಲೇ ಒಂದು ಸಂಪೂರ್ಣ ಕ್ರಾಂತಿ ಘಟಿಸಿಹೋಗಿದೆ. ನಮ್ಮ ನಿರೀಕ್ಷೆಗೂ ಮೀರಿ ಸುಧಾರಣೆಯ ಪರವಾದ ಜನರ ಸಂಖ್ಯೆ ಹೆಚ್ಚಿದೆ. ದಾರಿದ್ರ್ಯದಿಂದ ಒಂದು ಒಳ್ಳೆಯ ಪರಿಣಾಮವಂತೂ ಆಗಿದೆ. ಅದೆಂದರೆ ಸಂಕಟಕ್ಕೆ ಕಾರಣವೇನೆಂದು ಹುಡುಕುವ ಪ್ರವೃತ್ತಿ ಹೆಚ್ಚಾಗಿದೆ. `ಮ್ಯಾಂಚೆಸ್ಟರ್ ಭಾನುವಾರದ ಶಾಲೆಯು' ಒಂದಲ್ಲ ಒಂದು ದಿನ ಅತ್ಯಂತ ಪರಿಣಾಮಕಾರಿ ಸನ್ನೆಗೋಲಾಗಿ ಕೆಲಸಮಾಡಲಿದೆ. ಅದರ ಆವಶ್ಯಕತೆ ಮತ್ತು ಉಪಯುಕ್ತತೆಗೆ ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವ ಜನರೇ ಸಾಕ್ಷಿ."[೨೨]

ಅದೇ ವರ್ಷ ಓಲ್ಡ್ ಹ್ಯಾಂನ ಇನ್ನೊಬ್ಬ ಪತ್ರಕರ್ತ ಹೀಗೆನ್ನುತ್ತಾನೆ: "ನಾವು ನಮ್ಮ ಮಿತಿಯೊಳಗಿನ ಎಲ್ಲ ಶಕ್ತಿಯನ್ನೂ ಉಪಯೋಗಿಸಿ ಜ್ಞಾನವನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ತನ್ಮೂಲಕ ಸಂದರ್ಭ ಒದಗಿ ಬಂದಾಗ ನಾವು ನಮ್ಮ ದೇಶದ ಮತ್ತು ಮನುಕುಲದ ಅಭಿಮಾನಿಗಳಾಗಿ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಶಕ್ತರಾಗಬೇಕು. ವ್ಯಾಪಾರದಲ್ಲಿ ಈಗ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ನಮ್ಮ ಸಂಸಾರಗಳು ಸಂಕಷ್ಟಕ್ಕೆ ಸಿಲುಕಿವೆ ಎಂಬುದು ನಿಜವಾದರೂ ಅದು ನಮಗೆ ಆಲೋಚಿಸಲು ವ್ಯವಧಾನವನ್ನು ನೀಡಿದೆ, ನಾವು ಎಲ್ಲ ವಿಷಯಗಳ ಬಗ್ಗೆ ಗಮನ ನೀಡಲು ಒತ್ತಾಯಿಸಿದೆ. ನಮ್ಮ ಕಷ್ಟಗಳೇ ನಮ್ಮನ್ನು ಕಷ್ಟಗಳ ಕಾರಣದ ಬಗ್ಗೆ ಆಲೋಚಿಸುವಂತೆ ಮಾಡಿವೆ." ಆ ಪ್ರದೇಶದಲ್ಲಿ ಇಂಥ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದವರು ಮೊದಲು ಅದಕ್ಕಾಗಿ ಸಾರ್ವಜನಿಕ ಸಭಾಂಗಣಗಳನ್ನೇ ಆಯ್ದುಕೊಂಡಿದ್ದರು. ಆದರೆ ಅನಂತರ ಸಭಾಂಗಣದ ಪರವಾನಗಿಯೇ ರದ್ದಾಗುತ್ತದೆ ಎಂಬ ಕಾರಣದಿಂದ, ಅವರನ್ನು ಬೆದರಿಸಿ ಹೊರಹಾಕಿದ ಮೇಲೆ ಅವರು ತಮ್ಮ ಸಭೆಗಳಿಗಾಗಿ ಪ್ರತ್ಯೇಕ

ಜಾಗವನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಅವರು ಇನ್ನೂರು ವಿದ್ಯಾರ್ಥಿಗಳಿಗಾಗಿ ಶಾಲೆಯೊಂದನ್ನು ಸಹ ಆರಂಭಿಸಿದ್ದರು.[೨೨] ಲ್ಯಾಂಕಾಶೈರ್ ಪ್ರಾಂತ್ಯದಲ್ಲಿ ಹೆಣ್ಣುಮಕ್ಕಳಿಗಾಗಿಯೂ ಸಮಾಜಗಳನ್ನು ಆರಂಭಿಸಲಾಯಿತು. ಬ್ಲಾಕ್‌ಬರ್ನ್ ಪ್ರದೇಶದ ಮಹಿಳಾ ಯೂನಿಯನ್‌ನ ನಿಯಮಗಳ ಪ್ರಕಾರ ಅದರ ಉದ್ದೇಶವು, ``ನಮ್ಮ ಭ್ರಷ್ಟ ಹಾಗೂ ದಮನಕಾರಿ ಆಳುವವರ ವಿರುದ್ಧ ಮಕ್ಕಳ ಮನಸ್ಸಿನಲ್ಲಿ ಆಳವಾದ ವಿದ್ವೇಷವನ್ನು ಹುಟ್ಟುಹಾಕುವುದು."[೨೪]

ಹೀಗಾಗಿ ಅಂದಿನ ಕಾರ್ಮಿಕವರ್ಗದ ಸಭೆಗಳು, "ವಿವಿಧ ವ್ಯವಹಾರಗಳಿಗೆ - ಎಂದರೆ ಸಂಘಟನೆ, ಶಿಕ್ಷಣ, ಹಣಕಾಸು ಇಂಥ ಯಾವುದೇ ಒಂದು ವ್ಯವಹಾರಕ್ಕೆ ಅಥವಾ ಎಲ್ಲ ಮೂರೂ ವ್ಯವಹಾರಗಳಿಗೆ ಸಂಬಂಧಿಸಿದಂತೆ ಶಿಕ್ಷಣ ನೀಡುವ ಶಾಲೆಗಳಾಗಿದ್ದವು. ಎಲ್ಲ ಕೌಶಲಾಭಿವೃದ್ಧಿ, ಅಭಿವ್ಯಕ್ತಿ, ದಿಗ್ದರ್ಶನಗಳನ್ನು ನೀಡುವಲ್ಲಿ ವಾರದ ತರಗತಿಯ ಸಭೆಗಳು ಅತ್ಯಂತ ಪ್ರಾಮುಖ್ಯವನ್ನು ಪಡೆದುಕೊಂಡಿದ್ದವು."[೨೫] ಕಾರ್ಮಿಕವರ್ಗವು ಒಮ್ಮೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಮಾಜವು ಹೇಗೆ ಕೆಲಸಮಾಡುತ್ತದೆ ಎಂಬುದರ ಬಗ್ಗೆ, ಪೂರ್ಣ ತಿಳಿವಳಿಕೆಯನ್ನು ಪಡೆದುಕೊಂಡರೆ, ತನ್ನ ಹಕ್ಕು ಮತ್ತು ಕರ್ತವ್ಯಗಳನ್ನು ಕುರಿತು ಜಾಗೃತವಾದರೆ, ಅದಕ್ಕೆ ತನ್ನ ಬೇಡಿಕೆಗಳನ್ನು ಗೆದ್ದುಕೊಳ್ಳಲು ಶಕ್ತಿ ಬರುತ್ತದೆ.

ಈ ಜ್ಞಾನವು ಎಲ್ಲರಿಗೂ ತಲಪಲಿ ಎಂಬ ಕಾರಣದಿಂದಲೇ ಕಾಬೆಟ್‌ರವರು ಮತ್ತು ವಿಶಿಷ್ಟವಾಗಿ ವೂಲರ್, ಹೊನೆ, ಕಾರ್ಲೈಲ್, ವ್ಯಾಟ್ಸನ್ ಮತ್ತು ಇನ್ನೂ ಅನೇಕರು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಸಮರಶೀಲ ಹೋರಾಟವನ್ನು ಮುನ್ನಡೆಸಿದರು. ಈಗಾಗಲೇ ಹೇಳಿದಂತೆ ತೀವ್ರಗಾಮಿ ಪತ್ರಿಕೆಗಳು ಮತ್ತು ಅಗ್ಗವಾದ ದರದಲ್ಲಿ ಮುದ್ರಿತವಾಗುತ್ತಿದ್ದ ಅನೇಕ ಪ್ರಕಟಣೆಗಳು ಕಾರ್ಮಿಕರ ಕಲಿಕೆಯ ಮುಖ್ಯಭಾಗವಾಗಿದ್ದವು. ಕಾಬೆಟರು ತಮ್ಮ 'ಪೊಲಿಟಿಕಲ್ ರಿಜಿಸ್ಟರ್' ಪತ್ರಿಕೆಯ ದರವನ್ನು ಒಂದು ಶಿಲಿಂಗ್ ಅರ್ಧ ಪೆನ್ನಿಯಿಂದ ಒಂದೂವರೆ ಪೆನ್ನಿಗೆ ಇಳಿಸಿ, ಸ್ಟ್ಯಾಂಪ್ ತೆರಿಗೆಯಿಂದ ವಿನಾಯಿತಿ ಪಡೆಯಲೂ ಯತ್ನಿಸಿದರು. ಪಾರ್ಲಿಮೆಂಟ್‌ನಲ್ಲಿ "ಒಂದೂವರೆ ಪೆನ್ನಿಯ ಹೊಲಸು" ಎಂಬ ದೂಷಣೆಯ ಗೌರವಕ್ಕೆ ಪಾತ್ರವಾದ ಈ ಪತ್ರಿಕೆಯ ಮೊದಲ ಸಂಚಿಕೆಯು ಒಂದು ತಿಂಗಳಲ್ಲಿ ೪೪,೦೦೦ ಪ್ರತಿಗಳಷ್ಟು ಮಾರಾಟವಾಯಿತು.[೨೬]

``ಸಿಡ್‌ಮೌತ್‌ರು ಅತ್ಯಂತ ಕೆಟ್ಟ ಸ್ವರೂಪದ ವಿಷ''[೨೭] ಎಂದು ಕರೆದ ಇಂಥ ಜನಪ್ರಿಯ ಪತ್ರಿಕೆಗಳನ್ನು ಸುಮ್ಮನಾಗಿಸಬೇಕೆಂಬ ಕಾರಣದಿಂದಲೇ ಅಂದಿನ ಸರ್ಕಾರವು ಅನೇಕ ಕಾನೂನುಗಳನ್ನು ತಂದಿತು. ೧೮೧೯ರಲ್ಲಿ ಅಸ್ತಿತ್ವಕ್ಕೆ ಬಂದ ಆರು ಕುಖ್ಯಾತ ಕಾನೂನುಗಳಲ್ಲಿ ಒಂದಂತೂ, "ನಮ್ಮ ಪವಿತ್ರ ಮತಧರ್ಮಕ್ಕೆ ಮಸಿ ಬಳಿಯಲೆತ್ನಿಸುವ ಹಾಗೂ ಕಾನೂನಿನ ಮೂಲಕ ಈ ದೇಶದಲ್ಲಿ ಸ್ಥಾಪಿತವಾಗಿರುವ ಸಂವಿಧಾನ ಹಾಗೂ ಸರ್ಕಾರವನ್ನು ಕುರಿತು ತೀವ್ರ ತಿರಸ್ಕಾರವನ್ನು, ದ್ವೇಷವನ್ನು ಉಂಟುಮಾಡಲೆತ್ನಿಸುವಂತೆ ಸಾರ್ವಜನಿಕ ಆಗುಹೋಗುಗಳ ಬಗ್ಗೆ, ವ್ಯವಹಾರಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಕಿರು

ಪುಸ್ತಕ, ಕರಪತ್ರಗಳ ವಿರುದ್ಧ" ಕಾರ್ಯಾಚರಣೆ ನಡೆಸುವ ಉದ್ದೇಶವನ್ನೇ ಹೊಂದಿತ್ತು.[೩೮] ಇದಕ್ಕೆ ಮುನ್ನ ಕಾನೂನು ಬಾಹಿರ ಬಂಧನಕ್ಕೆ ತಡೆಯಾಗಿದ್ದಂಥ 'ಹೇಬಿಯಸ್ ಕಾರ್ಪಸ್' ಕಾನೂನನ್ನು ಅಮಾನತ್ತಿನಲ್ಲಿಡಲಾಗಿತ್ತಾದ್ದರಿಂದ, ೧೮೧೭ರ ವಸಂತದಲ್ಲಿ ಕಾಬೆಟ್‌ರವರು "ಸರ್ಕಾರ ಮತ್ತು ಸಾಲಗಾರರ ಭಯದಿಂದಾಗಿ" ಅಮೆರಿಕಕ್ಕೆ ಪಲಾಯನ ಮಾಡಬೇಕಾಯಿತು. ಇಷ್ಟಾಗಿಯೂ ಸ್ವದೇಶಗಳಲ್ಲಿ ಇನ್ನಷ್ಟು ಜನ ಧೀರರು ತಮ್ಮ ಕೆಲಸವನ್ನು ಮುಂದುವರಿಸಿದ್ದರು. ಆದರೂ ಸಹ ಒಂದೇ ವರ್ಷದಲ್ಲಿ ಹೊನೆ ಮತ್ತು ವೂಲರ್ ಇಬ್ಬರನ್ನೂ ಧರ್ಮನಿಂದನೆ ಹಾಗೂ ತೇಜೋವಧೆಯ ಅಪಪ್ರಚಾರ ಮಾಡಿದರೆಂಬ ಆಪಾದನೆಯ ಮೇಲೆ ವಿಚಾರಣೆಗೆ ಒಳಪಡಿಸಲಾಯಿತು[೩೯] ಮತ್ತು ಹೊನೆಯವರ "ಪ್ಯಾರೋಡೀಸ್ ಆನ್ ದ ಬುಕ್ ಆಫ್ ಕಾಮನ್ ಪ್ರೇಯರ್" ಗ್ರಂಥವನ್ನು ಮಾರಿದ್ದಕ್ಕಾಗಿ ಕಾರ್ಲೈಲ್‌ರನ್ನು ಜೈಲಿಗೆ ಹಾಕಲಾಯಿತು.[೪೦]

ಥಾಮಸ್ ಪೇಯ್ನ್ರ 'ಏಜ್ ಆಫ್ ರೀಸನ್' ಮತ್ತು ಎಲಿಹು ಪಾಮರ್‌ರವರ 'ಪ್ರಿನ್ಸಿಪಲ್ಸ್ ಆಫ್ ನೇಚರ್' ಪುಸ್ತಕಗಳನ್ನು ಮಾರಿದ್ದಕ್ಕಾಗಿ ೧೮೧೯ರಲ್ಲಿ ಕಾರ್ಲೈಲ್‌ರವರ ಮೇಲೆ ಮತ್ತೊಮ್ಮೆ ಆರು ವರ್ಷಗಳ ಜೈಲು ಶಿಕ್ಷೆಯನ್ನು ಘೋಷಿಸಲಾಯಿತು. ಈ ಹೋರಾಟದ ಗತಿಯಲ್ಲಿ ಸಂಪಾದಕರು, ಮುದ್ರಕರು, ಪ್ರಕಟಣಕಾರರು ಹಾಗೂ ಮುದ್ರೆ ರಹಿತ ಆವೃತ್ತಿಗಳ ನೂರಾರು ಮಾರಾಟಗಾರರನ್ನು ಜೈಲಿಗೆ ದಬ್ಬಲಾಯಿತು. ಆದರೂ ಕರಪತ್ರಗಳು ಮತ್ತು ಪುಸ್ತಕಗಳು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಲೇ ಹೋದವು. ಇದರಿಂದ ಉಂಟಾದ ದಿಗ್ಭ್ರಮೆಯನ್ನು ವ್ಯಕ್ತಪಡಿಸುತ್ತಾ ಹೊನೆ ಅವರು, ಸಂಸತ್ತು ಆರಂಭವಾಗುವಾಗ ರಾಜನು ಮಾಡುವ ಭಾಷಣವನ್ನು ವಿಡಂಬಿಸುತ್ತಾ ಬರೆದರು:

ಓ ನನ್ನ ಮಹ-ಯರೇ,
ಮ-ಳೆಯರೇ ಕೈ ಬಿಡಬೇಡಿ
ನಿಮ್ಮ ಎಲ್ಲ ಕೌಶಲವನ್ನು
ಉಪಯೋಗಿಸಬೇಕಾದ ಜವಾಬ್ದಾರಿಯನ್ನು
ಈಗ ಈಗಿಂದೀಗಲೇ ತಡೆಯಿರಿ
ಪತ್ರಿಕಾ ಪ್ರಸಾರವನ್ನು!

[ಒಂದು ಮಹಿಳೆಯ ರೂಪದಲ್ಲಿರುವ ಮುದ್ರಣಾಲಯವನ್ನು ಕೊಲ್ಲಲು ಮೂರು ಜನ ಸರಪಳಿ, ಹಗ್ಗ, ಕೊಡಲಿ, ಕತ್ತಿ ಹಿಡಿದು ಬರುತ್ತಾರೆ]

ಈ ಪುಟ್ಟ ಪುಸ್ತಕಗಳು
ಎರಡು ಪೆನ್ನಿ ಹೊಲಸಿನ ಮುದ್ದೆಗಳು,
ಧರ್ಮನಿಂದೆ, ತೇಜೋವಧೆಯ ಮೂಟೆಗಳು
ಅಯ್ಯೋ ಇದನ್ನು ಬೈಬಲ್‌ಗಿಂತ

ಹೆಚ್ಚು ಓದುತ್ತಾರಲ್ಲ ಜನಗಳು![೪೧]

೧೮೧೬ರಿಂದ ೧೮೩೪ರ ಅವಧಿಯಲ್ಲಿ, ಅಗ್ಗವಾದ ಪುಸ್ತಕ ಮತ್ತು ಪತ್ರಿಕೆಗಳನ್ನು ಮುದ್ರಿಸಿ ಮಾರುವುದು, ಕಾರ್ಮಿಕ ವರ್ಗದ ಸಭೆಗಳಲ್ಲಿ ಸುಸಂಘಟಿತ ಅಧ್ಯಯನ ಮತ್ತು ಇದರೊಂದಿಗೆ ಸಕ್ರಿಯವಾದ ರಾಜಕೀಯ ಪ್ರಚಾರಾಂದೋಲನ ಇವು ಶಿಕ್ಷಣ ಪ್ರಸರಣದ ಮುಖ್ಯ ಭಾಗವಾಗಿದ್ದವು. ಸ್ವಯಂಶಿಕ್ಷಣವು ಕಾರ್ಮಿಕ ವರ್ಗದ ರಾಜಕೀಯ ಚಟುವಟಿಕೆಯ ಅವಿಭಾಜ್ಯ ಅಂಗವಾಗಿತ್ತಲ್ಲದೆ, ಕಾರ್ಮಿಕರ ಮಧ್ಯದಿಂದ ಸ್ಥಳೀಯ ನಾಯಕರು ಹೊರಹೊಮ್ಮಲು ಮುಖ್ಯ ಮಾರ್ಗವೂ ಆಗಿತ್ತು ಎಂಬುದು ನಿಜ. ಆದರೆ ಇದರೊಂದಿಗೆ ಇನ್ನೊಂದು ಮುಖ್ಯ ಬೆಳವಣಿಗೆಯೂ ಆಗಿತ್ತು. ಅದೆಂದರೆ ಹೊಸ ಸಮಾಜದ ಹರಿಕಾರರಾಗಿ ಹೊಸ ನೈತಿಕ ಮೌಲ್ಯಗಳೊಂದಿಗೆ ಮುಂದಿನ ತಲೆಮಾರನ್ನು ಬೆಳಸುವ ಸ್ಪಷ್ಟ ಉದ್ದೇಶದೊಂದಿಗೆ ಮಕ್ಕಳಿಗೆ ಶಿಕ್ಷಣ ನೀಡುವ ಪ್ರಯತ್ನಗಳು ನಡೆದವು. ಎಂದರೆ ಶಿಕ್ಷಣ ಮತ್ತು ಜ್ಞಾನಕ್ಕಾಗಿ ನಡೆದ ಆಂದೋಲನದಲ್ಲಿ ಒಂದಕ್ಕೊಂದು ನಿಕಟವಾಗಿ ಬೆಸೆದುಕೊಂಡ ಎರಡು ಅಂಶಗಳಿದ್ದವು.

ರಾಬರ್ಟ್ ಓವೆನ್‌ರವರ 'ನ್ಯೂ ವ್ಯೂ ಆಫ್ ಸೊಸೈಟಿ' (ಸಮಾಜವನ್ನು ಕುರಿತ ಹೊಸ ದೃಷ್ಟಿಕೋನ)ಯ ಪ್ರಸರಣದೊಂದಿಗೆ ಈ ಬೆಳವಣಿಗೆಗೆ ಹೊಸ ವೇಗ ಸಿಕ್ಕಿತು. ಇನ್ನು ಮುಂದೆ ಈ ಆಂದೋಲನಕ್ಕೆ ಅರಿವು ನೀಡಿದ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ನಾವು ಓವೆನ್ ಮತ್ತು ಅವರ ಬಳಗದ ಬೋಧನೆಗಳು ಏನಿದ್ದವು ಎಂಬುದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ ಸಾಮಾಜಿಕ ಪುನರುಜ್ಜೀವನಕ್ಕಾಗಿ ಅವರು ಮುಂದಿಟ್ಟ ಯೋಜನೆಗಳಲ್ಲಿ ಕಿರಿಯರ ಮತ್ತು ವಯಸ್ಕರ ಶಿಕ್ಷಣವು ಕೇಂದ್ರ ಬಿಂದುವಾಗಿತ್ತು.

## ೨. ಶಿಕ್ಷಣ ಮತ್ತು ಹೊಸ ಸಮಾಜ

### (i) ರಾಬರ್ಟ್ ಓವೆನ್ ಮತ್ತು ನ್ಯೂ ಲ್ಯಾನಾರ್ಕ್ ಸ್ಕೂಲ್‌ಗಳು

ಕುದುರೆಯ ಜೀನು ಮಾಡುವಾತನ ಮಗನಾಗಿ ಹುಟ್ಟಿದ ರಾಬರ್ಟ್ ಓವೆನ್ ಹತ್ತನೆಯ ವಯಸ್ಸಿನಲ್ಲಿಯೇ ಕೆಲಸ ಮಾಡಲು ಪ್ರಾರಂಭಿಸಿದವನು. ಪ್ರೌಢ ವಯಸ್ಸಿಗೆ ಬರುವ ವೇಳೆಗೆ ಶ್ರೀಮಂತ ಒಡೆಯನಾಗಿಬಿಟ್ಟ. ೧೭೯೦ರ ಹೊತ್ತಿಗೆ ನಾವು ಈಗಾಗಲೇ ಗಮನಿಸಿದಂತೆ ಅವನು ಮ್ಯಾಂಚೆಸ್ಟರ್ ನಗರದ ಸಾಹಿತ್ಯ ಮತ್ತು ತತ್ತ್ವಶಾಸ್ತ್ರ ಸಂಘದ ಸಕ್ರಿಯ ಸದಸ್ಯನಾದ. ಆ ಸಮಯದಲ್ಲಿ ಅಲ್ಲೇ ಕೆಲಸ ಮಾಡುತ್ತಿದ್ದ ಅವನು ಸಹಜವಾಗಿಯೇ ಶೈಕ್ಷಣಿಕ ವಿಷಯದಲ್ಲಿ ಆಸಕ್ತರಾಗಿದ್ದ ವಿಜ್ಞಾನಿಗಳು ಮತ್ತು ಕೈಗಾರಿಕೋದ್ಯಮಿಗಳೊಂದಿಗೆ ಸಂಪರ್ಕಕ್ಕೆ ಬಂದ. ೧೮೦೦ನೇ ಇಸವಿಯ ವೇಳೆಗೆ ಅವನು 'ನ್ಯೂ ಲ್ಯಾನಾರ್ಕ್ ಮಿಲ್ಸ್' ಎಂಬ ಸ್ಕಾಟ್‌ಲೆಂಡಿನ ಜವಳಿ ಉದ್ಯಮದ ಮ್ಯಾನೇಜರ್ ಆದನು. ಅಲ್ಲಿ ಅವನು

ಒಬ್ಬಂಟಿಯಾಗೇ ತನ್ನ ತೀವ್ರಗಾಮಿ ಶೈಕ್ಷಣಿಕ ವಿಚಾರಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದನು.

೧೮೧೩ ರಲ್ಲಿ ಓವೆನ್ ಅವರು ಜೇಮ್ಸ್ ಮಿಲ್ ಮತ್ತು ಫ್ರಾನ್ಸಿಸ್ ಪ್ಲೇಸ್ ಅವರ ಸಕ್ರಿಯ ನೆರವಿನೊಂದಿಗೆ ತಮ್ಮ 'ನ್ಯೂ ವ್ಯೂ ಆಫ್ ಸೊಸೈಟಿ' ಎಂಬ ಬರಹವನ್ನು ಪ್ರಕಟಿಸಿದರು. ವಿಗ್ ಪಕ್ಷದ ಶ್ರೀಮಂತರು, ಅನುಕೂಲಸ್ಥ ಭಿನ್ನಮತೀಯರು, ತೀವ್ರಗಾಮಿ ತತ್ತ್ವಶಾಸ್ತ್ರಜ್ಞರು ಇವರೆಲ್ಲರೂ 'ಬ್ರಿಟಿಷ್ ಅಂಡ್ ಫ್ರಾನ್ಸಿಸ್ ಸ್ಕೂಲ್ಸ್ ಸೊಸೈಟಿ' (ಉಚಿತ ಶಾಲೆಗಳು ಮತ್ತು ಶಿಕ್ಷಕ ತರಬೇತಿಗಳನ್ನು ಬೆಂಬಲಿಸಿದ ಸಂಸ್ಥೆ-ಬಿ.ಎಫ್.ಎಸ್.ಎಸ್.) ಮುಂತಾದ ಜನಸೇವಾ ಉದ್ದೇಶಗಳನ್ನು ಬೆಂಬಲಿಸುತ್ತಿದ್ದ ಕಾಲ ಅದು. ಸ್ವತಃ ಓವೆನ್ ಅವರೇ ೧೮೦೭ರಲ್ಲಿ ಬಡವರ ಶಿಕ್ಷಣಕ್ಕಾಗಿ ಸಂಸದ ವಿಟ್‌ಬ್ರೆಡ್ ಮಂಡಿಸಿದ್ದ ಮಸೂದೆಯನ್ನು ಬೆಂಬಲಿಸಿದ್ದರು ಮತ್ತು ಎಲ್ಲರಿಗೂ ಜ್ಞಾನ ಪ್ರಸರಣ ಮಾಡಬೇಕೆಂಬ ಲ್ಯಾಂಕಾಸ್ಟರ್ ಯೋಜನೆಗೆ ಕಾಣಿಕೆ ನೀಡಿದ್ದರು. ಇಂಥ ವಲಯಗಳಲ್ಲಿ ಮತ್ತು ಸಂಸತ್‌ನ್ನು ಉದ್ದೇಶಿಸಿ ಅವರು ತಮ್ಮ ಶಿಫಾರಸುಗಳನ್ನು ಮೊದಲು ಮಂಡಿಸಿದರು. ಅದಕ್ಕೆ ಕೆಲಮಟ್ಟಿಗೆ ಸಹನೆಯಿಂದ ಕೂಡಿದ ಪ್ರತಿಕ್ರಿಯೆ ಲಭ್ಯವಾಯಿತು.

ತತ್ತ್ವಶಾಸ್ತ್ರೀಯ ತೀವ್ರಗಾಮಿಗಳಂತೆಯೇ ಓವೆನ್ ಅವರ ಮುಖ್ಯ ಕಾಳಜಿ ಇದ್ದದ್ದು ದಿವಾಳಿಯಾದವರ ಸಮಸ್ಯೆಗಳನ್ನು ಕುರಿತು. ಆದರೆ ಬೆಂಥಾಮ್ ಮತ್ತು ಮಿಲ್ ಅವರಿಗೆ ಹೋಲಿಸಿದರೆ ಓವೆನ್ ಅವರ ಧೋರಣೆ ಕೇವಲ ವೈಚಾರಿಕವಾಗಿರಲಿಲ್ಲ. ಅದು ರಾಜಕೀಯ ಅರ್ಥಶಾಸ್ತ್ರದ ಉಕ್ಕಿನ ಚೌಕಟ್ಟಿಗೆ ಸೀಮಿತವಾಗಿರಲಿಲ್ಲ. ಬದಲಿಗೆ ಅದು ವಿಶಾಲವಾದ ಮಾನವೀಯ ದೃಷ್ಟಿಕೋನವನ್ನು ಹೊಂದಿತ್ತು. ಕಾರ್ಮಿಕರನ್ನು ಮಾನವೀಯವಾಗಿ ನಡೆಸಿಕೊಂಡರೆ, ಅವರ ಎಲ್ಲ ಅಂತಃಶಕ್ತಿಯನ್ನು ಹೊರಗೆ ತೆಗೆಯಲಾಗುವಂತೆ ಅವರಿಗೆ ಶಿಕ್ಷಣ ನೀಡಿದರೆ ಕಾರ್ಖಾನೆಗಳಲ್ಲಿ ದಕ್ಷತೆಯೂ, ಲಾಭವೂ ಹೆಚ್ಚುತ್ತದೆ ಎಂದು ಅವರು ವಾದಿಸುತ್ತಿದ್ದರು. ನ್ಯೂ ಲ್ಯಾನಾರ್ಕ್‌ನಲ್ಲಿ ಅವರು ತಮ್ಮ ಸಿದ್ಧಾಂತಕ್ಕೆ ರುಜುವಾತು ಒದಗಿಸಿದ್ದರಿಂದ ಅವರ ಮಾತುಗಳಿಗೆ ಹೆಚ್ಚಿನ ಶಕ್ತಿ ಬಂದಿತ್ತು. ಅವರು ಅಲ್ಲಿ ಸ್ಥಾಪಿಸಿದ ಶಾಲೆಗೂ ಕಾರ್ಖಾನೆಗೂ ದೇಶದೊಳಗಿನಿಂದಲೂ, ವಿದೇಶಗಳಿಂದಲೂ ಅಪಾರ ಸಂಖ್ಯೆಯಲ್ಲಿ ಗಣ್ಯವ್ಯಕ್ತಿಗಳು ಭೇಟಿ ನೀಡಲು ಕೊನೆಯೇ ಇಲ್ಲದ ಮೆರವಣಿಗೆಯಲ್ಲಿ ಎಡತಾಕುತ್ತಿದ್ದರು. ಬೇಗನೇ ಓವೆನ್ ಅವರು ಪ್ರಸಿದ್ಧಿಗೆ ಬಂದರು.

ಓವೆನ್ ಅವರ ಶೈಕ್ಷಣಿಕ ಧೋರಣೆಗೆ ಮೂಲಾಧಾರವಾದ ಗಾಢ ನಂಬಿಕೆ ಎಂದರೆ "ಮನುಷ್ಯನ ಗುಣವನ್ನು ಅವನು ಸ್ವತಃ ಕಟ್ಟಿಕೊಳ್ಳುವುದಿಲ್ಲ, ಅದನ್ನು ಕಟ್ಟಿಕೊಡುವುದು ಪರಿಸರ" ಎಂಬುದು. ಹಿಂದಿನ ಕಾಲದಲ್ಲಿ ಈ ಸರಳ ಸತ್ಯವನ್ನು ಗುರುತಿಸಲಿಲ್ಲ ಎಂದು ಅವರು ಹೇಳಿದರು. ಅವರ ವ್ಯಕ್ತಿತ್ವದ ಗುಣಗಳಿಗೆ ಅವರೇ ಕಾರಣರೇನೋ ಎಂಬಂತೆ ಜನರನ್ನು ನಡೆಸಿಕೊಳ್ಳಲಾಗಿದೆ. ತತ್ಪರಿಣಾಮವಾಗಿ ಅವರನ್ನು 'ದೂಷಿಸಲಾಗಿದೆ, ಬರ್ಬರವಾಗಿ

ನಡೆಸಿಕೊಳ್ಳಲಾಗಿದೆ', ಇದರಿಂದ ಕೆಡಕು ಹೆಚ್ಚಾಗಿದೆ. "ಆದರೆ ಮನುಷ್ಯನು ಪರಿಸ್ಥಿತಿಯ ಕೂಸು", ಅವನ ಚಾರಿತ್ರ್ಯವನ್ನು ಅವನಿರುವ ಪರಿಸರವು ನಿರ್ಮಿಸುತ್ತದೆ, ವಿಶೇಷವಾಗಿ ಬಾಲ್ಯ. "ಅತ್ಯುನ್ನತ ಗುಣದಿಂದ ಹಿಡಿದು ಅಧಮಾಧಮ ಗುಣದವರೆಗೂ, ಜ್ಞಾನಿಯಿಂದ ಹಿಡಿದು ಅಜ್ಞಾನಿಯವರೆಗೂ ಯಾರನ್ನೂ ಬೇಕಾದರೂ ಸೃಷ್ಟಿಸಲು ವಿಧಾನಗಳಿವೆ"೪೨ ಎಂದ ಓವೆನ್ ಅವರು ಅದನ್ನು ನಾವು ಅರಿತುಕೊಳ್ಳಬಹುದು ಹಾಗೂ ನಿಯಂತ್ರಿಸಬಹುದು ಎಂದು ಪ್ರತಿಪಾದಿಸಿದರು.

ಇದರ ತೀರ್ಮಾನವೇನಾಗುತ್ತದೆ ಎಂದರೆ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಆಗುವ ದೋಷಕ್ಕೆ ಹೊಣೆ ಆ ವ್ಯಕ್ತಿಯಲ್ಲ, ಆತನ ಪರಿಸರ, ಆತನ ಶಿಕ್ಷಣ ಇತ್ಯಾದಿ. ಈ ಪರಿಸ್ಥಿತಿಗಳನ್ನು ಬದಲಾಯಿಸುವುದರಿಂದ, ಸೂಕ್ತ ಶಿಕ್ಷಣವನ್ನು ನೀಡುವುದರಿಂದ ಇಡಿಯ ಜನಸಮುದಾಯದ ಚಾರಿತ್ರ್ಯವನ್ನೇ ಭವಿಷ್ಯದಲ್ಲಿ ಬದಲಾಯಿಸಬಹುದು. ಓವೆನ್ ಅವರ ಅಭಿಮತದಲ್ಲಿ ಸರಿಯಾದ ಶಿಕ್ಷಣ ಎಂದರೆ ಸುತ್ತಲಿನ ಜಗತ್ತನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಶಿಕ್ಷಣ. ತಪ್ಪುಗಳು- ಮೌಢ್ಯಗಳನ್ನು ನಿವಾರಿಸಬಲ್ಲ, ತಾರ್ಕಿಕ ಶಕ್ತಿಯನ್ನು ವೈಚಾರಿಕತೆಯನ್ನು ಬೆಳೆಸುವ ಶಿಕ್ಷಣ. ಸುತ್ತಲಿನ ಪರಿಸ್ಥಿತಿಯನ್ನು ಬದಲಾಯಿಸುವ ವಿಧಾನವೆಂದರೆ ಸಹಕಾರಿ ಸಮುದಾಯಗಳನ್ನು ಸ್ಥಾಪಿಸುವುದು ಎಂಬುದು ಅವರ ವಾದ. ಇಂಥ ಸಮುದಾಯಗಳಲ್ಲಿ ಅನೇಕ ಋಣಾತ್ಮಕ ಪರಿಣಾಮಗಳಿಗೆ ಕಾರಣವಾಗಿದ್ದ ಸೂಕ್ಷ್ಮವಾದ ಶ್ರಮವಿಭಜನೆಯನ್ನು ನಿವಾರಿಸಿಕೊಳ್ಳಬಹುದು ಮತ್ತು ವಿಜ್ಞಾನವು ಬಡತನ ಮತ್ತು ನಿರುದ್ಯೋಗಕ್ಕೆ ಕಾರಣವಾಗುವ ಶತ್ರುಶಕ್ತಿಯಾಗುವ ಬದಲು ಮಾನವ ಪ್ರಗತಿಗೆ ಅಗತ್ಯವಾದ ಪರಿಸ್ಥಿತಿಯನ್ನು ಸೃಷ್ಟಿಸಬಲ್ಲದು. ಮತ್ತು ಈ ರೀತಿಯಲ್ಲಿ ಹೊಸ ಯಾಂತ್ರಿಕ ಆವಿಷ್ಕಾರಗಳು ಕಾರ್ಮಿಕರನ್ನು ಉದ್ಯೋಗದಿಂದ ಕಿತ್ತೆಸೆಯುವ ಬದಲು, ದಿನದ ಕೆಲಸದ ಅವಧಿಯನ್ನು ಕಡಿತಗೊಳಿಸಬಲ್ಲವು. ಉತ್ಪಾದನೆಯ ಪ್ರಕ್ರಿಯೆಯನ್ನು ಉತ್ತಮಗೊಳಿಸುವಲ್ಲಿ ಎಲ್ಲರಿಗೂ ಒಂದೇ ರೀತಿಯ ಆಸಕ್ತಿ ಇರುವುದರಿಂದ ಮತ್ತು ಎಲ್ಲರಿಗೂ ಸಮಾನ ಹಕ್ಕುಗಳಿರುವುದರಿಂದ ಮನುಷ್ಯರ ಮಧ್ಯದ ವಿರುದ್ಧಾತ್ಮಕವಾದ ಹಿತಾಸಕ್ತಿಗಳು ಮಾಯವಾಗುತ್ತವೆ. ನಿಜವಾದ ಕಲಿಕೆಯ ಸಮುದಾಯಗಳು ಹೀಗಾಗುವುದರಿಂದ ಈರ್ಷೆಯ, ದ್ವೇಷ ಮುಂತಾದ ಅನೇಕ ಭಯಾನಕ ಮೂಲ ಪ್ರವೃತ್ತಿಗಳ ಸ್ಥಾನದಲ್ಲಿ ವಿಚಾರಶೀಲತೆ, ಸಹನೆ, ಸ್ನೇಹ, ಪ್ರೀತಿ ಮೊದಲಾದ ಸಾಮಾಜಿಕ ಗುಣಗಳು ತಲೆ ಎತ್ತುತ್ತವೆ.

ಓವೆನ್ ಅವರು ತಮ್ಮ ಶೈಕ್ಷಣಿಕ ಸಿದ್ಧಾಂತವನ್ನು ಮೊದಲಬಾರಿಗೆ ಕಂಡುಹಿಡಿದದ್ದು ಎಂಬಂತೆ ಮುಂದಿಟ್ಟರು.೪೩ ಆದರೆ "ಮನುಷ್ಯನು ಪರಿಸ್ಥಿತಿಯ ಕೂಸು" ಎಂಬುದು ಹೊಸ ಪರಿಕಲ್ಪನೆಯೇನೂ ಆಗಿರಲಿಲ್ಲ. ಇದು ಜೋಸೆಫ್ ಪ್ರೀಸ್ಟ್ ಲೀ ಅವರಿಂದ ಬೆಳೆದು ಬಂದ ಸಿದ್ಧಾಂತವಾಗಿದ್ದು, ಗಾಡ್‌ವಿನ್ ಇದನ್ನು ಬೆಂಬಲಿಸಿದ್ದರು ಮತ್ತು ಜೇಮ್ಸ್ ಮಿಲ್ ತಮ್ಮ

ಲೇಖನವೊಂದರಲ್ಲಿ ವಿವರವಾಗಿ ವಿಶ್ಲೇಷಿಸಿದ್ದರು. ಈ ಅರ್ಥದಲ್ಲಿ ಹೇಳಬೇಕೆಂದರೆ ಓವೆನ್ ಅವರು ಹಾಬ್ಸ್ ಮತ್ತು ಲಾಕ್ ಅವರ ಭೌತವಾದಿ ದೃಷ್ಟಿಕೋನದಿಂದ ಉದಿಸಿದ ತತ್ತ್ವವನ್ನು ಅಭಿವ್ಯಕ್ತಿಸಿದ್ದಾರೆ. ಇದನ್ನು ಹಾರ್ಟ್ಲೇ ಮತ್ತು ಫ್ರೆಂಚ್ ಸಂವೇದನಾ ಸಿದ್ಧಾಂತಿಗಳಾದ ಹೆಲ್‌ವೆಟಿಯಸ್, ಕಾಂಡಿಲಾಕ್ ಅಭಿವೃದ್ಧಿಗೊಳಿಸಿದ್ದು, ಹದಿನೆಂಟನೆಯ ಶತಮಾನದ ಫ್ರೆಂಚ್ ಫಿಲಾಸೊಫೆಗಳು (ಫ್ರಾನ್ಸ್ನ ಜ್ಞಾನೋದಯ ಕಾಲದ ಬುದ್ಧಿಜೀವಿಗಳು) ಇದನ್ನು ಪರಿಪೂರ್ಣಗೊಳಿಸಿದ್ದರು.

ಶೈಕ್ಷಣಿಕ ಕ್ಷೇತ್ರಕ್ಕೆ ಹೇಳಬೇಕೆಂದರೆ ತನ್ನ ಸಿದ್ಧಾಂತಕ್ಕೆ ಮಾನವತಾವಾದಿ ಧೋರಣೆಯನ್ನು ಅನ್ವಯಿಸಿದ್ದೇ ಓವೆನ್ ಅವರ ಕೊಡುಗೆ. ಯಾವುದೋ ಒಂದು ನಂಬಿಕೆಯನ್ನೋ, ಸಿದ್ಧಾಂತವನ್ನೋ ಶಿಕ್ಷಣದಲ್ಲಿ ತುರುಕುವುದು ಅವರ ಗುರಿಯಾಗಿರಲಿಲ್ಲ. ಅಥವಾ ಅಮೂರ್ತವಾದ ರೀತಿಯಲ್ಲಿ ಮಕ್ಕಳಿಗೆ ಆನಂದ ನೀಡುವುದೇ ವಿದ್ಯೆಯ ಉದ್ದೇಶ ಎಂದು ಅವರು ಭಾವಿಸಿರಲಿಲ್ಲ. ಬದಲಿಗೆ ಸಮಾಜ ಮತ್ತು ನಿಸರ್ಗವನ್ನು ಕುರಿತು ವಿಚಾರಶೀಲವಾಗಿ ಯೋಚಿಸುವುದನ್ನು ಮಕ್ಕಳಿಗೆ ಕಲಿಸಬೇಕು, ಮಕ್ಕಳು ಬದುಕಿನ ಎಲ್ಲ ಅಂಶಗಳನ್ನು ಆನಂದಿಸುವಂತಾಗಬೇಕು ಎಂಬುದು ಅವರ ಉದ್ದೇಶ. ನ್ಯೂ ಲ್ಯಾನಾರ್ಕ್ ಶಾಲೆಗಳಲ್ಲಿ ಈ ವಿಚಾರಗಳನ್ನು ಆಚರಣೆಗೆ ತರಲಾಯಿತು.

ಓವೆನ್ ಅವರಿಗಿಂತ ಮುಂಚೆ ಬಂದ ಡೇಲ್ ಅವರು ಅಷ್ಟು ಹೊತ್ತಿಗಾಗಲೇ ದಿವಾಳಿಯಾದವರ ಮಕ್ಕಳಿಗೆ, ಗಿರಣಿಯಲ್ಲಿ ಕೆಲಸ ಮಾಡುವವರಿಗೆ ಒಂದಿಷ್ಟು ಶಿಕ್ಷಣವನ್ನು ನೀಡುವ ಪ್ರಯತ್ನವನ್ನು ಮಾಡಿದ್ದರು. ಆದರೆ ಅವರ ಶಿಕ್ಷಣ ಆರಂಭವಾಗುತ್ತಿದ್ದದ್ದು ವಿದ್ಯೆ ಕಲಿಯಬೇಕಾದವರು ಹದಿಮೂರು ಗಂಟೆಗಳ ಕಾಲ ದುಡಿದು ಸುಸ್ತಾಗಿ ಬಂದ ಮೇಲೆ. ಇದರಿಂದಾಗಿ ಅವರ ಕಲಿಕೆ ಚೆನ್ನಾಗಿ ಆಗುತ್ತಿರಲಿಲ್ಲ. ಲಾಭದ ಬಗ್ಗೆ ಆಸಕ್ತಿ ಇದ್ದ ತಮ್ಮ ಪಾಲುದಾರರು ವಿರೋಧಿಸಿದರೂ ಸಹ ಓವೆನ್ ಅವರು ದಿವಾಳಿಯಾದವರ ಮಕ್ಕಳನ್ನು, ಹತ್ತು ವರ್ಷದವರಿಗಿಂತ ಚಿಕ್ಕವರಾಗಿದ್ದ ಹುಡುಗರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಕೊನೆ ಹಾಕಿದರು. ೧೮೧೪ರ ಡಿಸೆಂಬರ್‌ನಲ್ಲಿ ಅವರು ತಮ್ಮ ಯೋಜನೆಗಳ ಬಗ್ಗೆ ಹೆಚ್ಚು ಸಹಾನುಭೂತಿ ಹೊಂದಿದ್ದ ಜೆರೆಮಿ ಬೆಂಥಾಮ್, ವಿಲಿಯಂ ಅಲೆನ್, ಜೋಸೆಫ್ ಫಾಕ್ಸ್ ಮುಂತಾದವರನ್ನು ಪಾಲುದಾರರನ್ನಾಗಿ ತೆಗೆದುಕೊಂಡರು. ಈ ಅವಧಿಗೆ ಊಟದ ಸಮಯವೂ ಸೇರಿದಂತೆ ದುಡಿತದ ಅವಧಿಯನ್ನು ಹನ್ನೆರಡು ಗಂಟೆಗೆ ಸೀಮಿತಗೊಳಿಸುವುದು, ಶಿಕ್ಷಣವನ್ನು ಕುರಿತ ಯೋಜನೆಗಳನ್ನು ಜಾರಿಗೊಳಿಸುವುದು, ಎಳೆಯ ತಲೆಮಾರಿನವರ ಮನೆಯೊಳಗಿನ ಬದುಕನ್ನು ಮತ್ತು ಅವರ ಸುತ್ತಲಿನ ವಾತಾವರಣವನ್ನು ಸುಧಾರಿಸುವುದು ಇವೆಲ್ಲ ಸಾಧ್ಯವಾಯಿತು.[೪೪]

೧೮೧೬ರ ಜನವರಿ ಒಂದರಂದು ನ್ಯೂ ಲ್ಯಾನಾರ್ಕ್‌ನಲ್ಲಿ "ಚಾರಿತ್ರ್ಯದ ಅಭಿವೃದ್ಧಿಗಾಗಿ ಸಂಸ್ಥೆ" ಎಂಬ ಭವನವನ್ನು ಓವೆನ್ ಪ್ರಾರಂಭಿಸಿದರು. ಅವರ

ಸುಪ್ರಸಿದ್ಧ ಮಕ್ಕಳಶಾಲೆ ಮತ್ತು ಎಳೆಯ ಕಾರ್ಮಿಕರಿಗೆ ಹಾಗೂ ವಯಸ್ಕರಿಗೆ ರಾತ್ರಿಶಾಲೆ ಇವುಗಳು ಆರಂಭವಾದದ್ದು ಇದೇ ಕಟ್ಟಡದಲ್ಲಿ. ಯಾಂತ್ರಿಕವಾಗಿ ಮಕ್ಕಳ ಕೈಲಿ ಉರು ಹೊಡೆಸುವುದು, ಹುಡುಗರಲ್ಲೇ ಬುದ್ಧಿವಂತನಾದವನ ಮೂಲಕ ಪಾಠ ಹೇಳಿಸುವ ಮಾನಿಟೋರಿಯಲ್ ಪದ್ಧತಿ ಇದಾವುದೂ ಓವೆನ್ ಅವರಿಗೆ ಹಿಡಿಸುತ್ತಿರಲಿಲ್ಲ. ಪಾಠಗಳು ಆಸಕ್ತಿದಾಯಕವಾಗಬೇಕು, ಚರ್ಚೆಗಳು ಮತ್ತು ಪ್ರಶ್ನೆ ಕೇಳುವುದನ್ನು ಉತ್ತೇಜಿಸಬೇಕು ಎಂಬುದು ಅವರ ನಿಲುವು. ಮಾಮೂಲಿ ವಿಷಯಗಳಲ್ಲದೆ ಭೂಗೋಳ, ಚರಿತ್ರೆ ಮತ್ತು ನಿಸರ್ಗ ವಿಜ್ಞಾನಗಳನ್ನು ಕಲಿಸಬೇಕೆಂದು ಓವೆನ್ ಒತ್ತಾಯಿಸಿದರು. ನಿಸರ್ಗ ವಿಜ್ಞಾನಗಳನ್ನು ಕಲಿಸಲು ಹಳ್ಳಿಯಿಂದ ತಂದ ಪ್ರಕೃತಿದತ್ತ ಪದಾರ್ಥಗಳು, ಮಾದರಿಗಳನ್ನು, ಪಟಗಳನ್ನು, ಪ್ರಾಣಿಗಳ ಚಿತ್ರಗಳನ್ನು, ಖನಿಜ ವಸ್ತುಗಳನ್ನು, ಪ್ರಾಣಿಗಳ ಚಿಪ್ಪುಗಳು ಇತ್ಯಾದಿಗಳನ್ನು ಗೋಡೆಗಳ ಮೇಲೆ ನೇತುಹಾಕಿ ತೋರಿಸಲಾಗುತ್ತಿತ್ತು. ಭೂಗೋಳವನ್ನು ಕಲಿಸಲು ದೊಡ್ಡದಾದ ಭೂಪಟಗಳನ್ನು ತರಲಾಗುತ್ತಿತ್ತು. ಪುರಾತನ ಮತ್ತು ಆಧುನಿಕ ಚರಿತ್ರೆಯನ್ನು ಕಲಿಸಲು 'ಕಾಲಪ್ರವಾಹದ' ಪಟಗಳನ್ನು ಬರೆದು ತೋರಿಸಲಾಗುತ್ತಿತ್ತು. ಇದಲ್ಲದೆ ಸಂಗೀತ, ನೃತ್ಯ, ಪ್ರಾಥಮಿಕ ಸೈನ್ಯ ಕವಾಯತು ಇವುಗಳನ್ನು ಓವೆನ್ ಸೇರಿಸಿದರು. ಮಕ್ಕಳನ್ನು ಕರುಣೆ ಮತ್ತು ಮಮತೆಯಿಂದಲೇ ದಾರಿಗೆ ತರಬೇಕಿತ್ತೇ ಹೊರತು ಯಾವುದೇ ಶಿಕ್ಷೆ, ವೈಯಕ್ತಿಕ ಸಾಧನೆಯನ್ನು ಎತ್ತಿ ಹಿಡಿಯುವ ಉತ್ತೇಜಕ ಬಹುಮಾನಗಳನ್ನು ಉಪಯೋಗಿಸುವಂತಿರಲಿಲ್ಲ. ಎಲ್ಲರೂ ಒಟ್ಟಾಗಿ ಸಹಕಾರಿ ಮನೋಭಾವದಿಂದ ಗಳಿಸುವ ಜ್ಞಾನವೇ ಒಂದು ಬಹುಮಾನ ಎನ್ನುವುದು ಅವರ ಅಭಿಮತ.[೪೫]

ಶಾಲೆಗೆ ಭೇಟಿಕೊಡುತ್ತಿದ್ದ ನೂರಾರು ಜನರಲ್ಲಿ ಉದಾರವಾದಿ ಯುಟಿಲಿಟೇರಿಯನ್ ಡಬ್ಲ್ಯು. ಜೆ. ಫಾಕ್ಸ್ ಸಹ ಒಬ್ಬರು. ೧೮೨೩ ರಲ್ಲಿ ಅಲ್ಲಿಗೆ ಭೇಟಿ ನೀಡಿದನಂತರ ಅವರು ತಮ್ಮ ಮಿತ್ರರೊಬ್ಬರಿಗೆ ಹೀಗೆಂದು ಪತ್ರ ಬರೆದರು, "ಶ್ರೀಮಂತರಿಗೆ ಸಿಗಬಹುದಾದ ಎಲ್ಲ ಸೌಲಭ್ಯಗಳೂ ಈ ಕಾರ್ಖಾನೆಯ ಮಕ್ಕಳಿಗೆ ದೊರಕುತ್ತಿವೆ. ಅವರು ದುಡಿಯುವ ವಯಸ್ಸನ್ನು ತಲಪಿದಾಗ ಸಹ ಅವರ ದುಡಿಮೆಯ ದಿನ ಬೇರೆಯವರಿಗಿಂತ ಚಿಕ್ಕದು. ಇಲ್ಲಿರುವ ಶುಚಿತ್ವ, ವಾಚನಾಲಯಗಳು, ಉಪನ್ಯಾಸಗಳು, ಸಂಗೀತ ಕಛೇರಿಗಳು, ನೃತ್ಯಗಳು, ಅತ್ಯಂತ ಅನುಕೂಲಕರವಾದ ವಸತಿ ಇವೆಲ್ಲ ಸ್ಕಾಟ್‌ಲೆಂಡಿನ ಅತ್ಯಂತ ಸುಂದರ ಪರಿಸರದಲ್ಲಿ ಸಿಕ್ಕಿರುವುದನ್ನು ಕಂಡಾಗ, ಓವೆನ್ ಅವರಿಗಿರುವಂತಹ ಪ್ರತಿಭೆ, ಲೋಕೋಪಕಾರಿ ಮನೋಭಾವ, ಹಿಡಿದ ಕೆಲಸವನ್ನು ಸಾಧಿಸುವ ಛಲ ಎಲ್ಲವನ್ನೂ ಗಣನೆಗೆ ತೆಗೆದುಕೊಂಡರೂ ಸಹ, ಕೇವಲ ಒಂದು ಹತ್ತಿ ಗಿರಣಿಯಿಂದ ಇಷ್ಟೆಲ್ಲಾ ಸಾಧ್ಯವೇ ಎಂದು ಅಚ್ಚರಿಯುಂಟಾಗುತ್ತದೆ. ಹುಡುಗರ ಕಲಿಕೆಯ ಮಟ್ಟವನ್ನು ಪರೀಕ್ಷಿಸಿದಾಗ ಸಹ ಇದರಲ್ಲಿ ಯಾವುದೇ ಅಡ್ಡದಾರಿ ಹಿಡಿದ ಮೋಸಗಾರಿಕೆ ಇಲ್ಲ ಎಂಬುದು ಸ್ಪಷ್ಟವಾಯಿತು. ಇಂಗ್ಲೆಂಡಿನ ಬೋರ್ಡಿಂಗ್ ಶಾಲೆಗಳ ವಿದ್ಯಾರ್ಥಿಗಳು ಸಹ ನಮ್ಮ ಪರೀಕ್ಷೆಯಲ್ಲಿ ಅದಕ್ಕಿಂತ ಚೆನ್ನಾಗಿ ತೇರ್ಗಡೆಯಾಗುತ್ತಿರಲಿಲ್ಲ."[೪೬]

೧೮೧೫ ರಿಂದ ೧೮೨೪ ರವರೆಗೆ ನ್ಯೂ ಲ್ಯಾನಾರ್ಕ್ ಶಾಲೆಯ ಗುಣಮಟ್ಟ ಹೀಗಿತ್ತು. ಅನಂತರದ ಕಾಲದಲ್ಲಿ ಓವೆನ್‌ರ ವಿಚಾರಗಳನ್ನು ಒಪ್ಪದ ಕೆಲವು ಪಾಲುದಾರರ ಒತ್ತಡದಡಿಯಲ್ಲಿ ಶಾಲೆಯೊಳಗೆ ಕೆಲವೊಂದು ಬದಲಾವಣೆಗಳನ್ನು ಮಾಡಬೇಕಾಗಿ ಬಂದಾಗ ಶಾಲೆಯ ಗುಣದಲ್ಲಿ ಒಂದಿಷ್ಟು ಬದಲಾವಣೆ ಅನಿವಾರ್ಯವಾಯಿತು. ಒಂದು ವರ್ಷದನಂತರ ಓವೆನ್ ಅಮೆರಿಕಕ್ಕೆ ಹೊರಟರು. ಅಲ್ಲಿ ತಮ್ಮ ಆದರ್ಶವಾದಂಥ ಸಹಕಾರಿ ಸಮುದಾಯವೊಂದನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು. ಹಾಗೆ ಹೋದ ಅವರು ತಮ್ಮೊಂದಿಗೆ 'ಬೋಟ್ ಲೋಡ್ ಆಫ್ ನಾಲೆಡ್ಜ್' (ಜ್ಞಾನ ತುಂಬಿದ ದೋಣಿ)) ತುಂಬಿಕೊಂಡು ಅಮೆರಿಕದತ್ತ ಪಯಣ ಬೆಳೆಸಿದರು. ಹಾಗೆ ಕರೆದುಕೊಂಡು ಹೋದವರಲ್ಲಿ ಇಬ್ಬರು ಶಿಕ್ಷಕರೂ ಇದ್ದರು. ಅವರು ಸ್ವಿಟ್ಜರ್‌ಲೆಂಡ್‌ನ ಈವರ್ಡನ್ ಎಂಬಲ್ಲಿದ್ದ ಪೆಂಪ್ಟಾಲೊಜ್ಜಿ (ಖ್ಯಾತ ಶೈಕ್ಷಣಿಕ ಸುಧಾರಕ) ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು.[೪೭] ಯೋಜನೆಯ ವೈಫಲ್ಯದ ಅನಂತರ ಓವೆನ್ ಇಂಗ್ಲೆಂಡಿಗೆ ಹಿಂತಿರುಗುವ ವೇಳೆಗೆ ದೇಶದ ಅನೇಕ ಕಡೆ ಕಾರ್ಮಿಕರು ಸಹಕಾರಿ ಸಂಘಗಳನ್ನು ಆರಂಭಿಸಲು ತೊಡಗಿದ್ದರು.

## ii. ಓವೆನ್‌ವಾದ ಮತ್ತು ಸಹಕಾರಿ ಸಮುದಾಯ

೧೮೧೫ರಲ್ಲಿ ನೆಪೋಲಿಯನ್ ಯುದ್ಧಗಳು ಮುಗಿದು ಆರ್ಥಿಕ ಬಿಕ್ಕಟ್ಟು ಉತ್ಕಟವಾಗಿದ್ದ ಸಂದರ್ಭದಲ್ಲಿ ಓವೆನ್ ಅವರು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲು ಕೂಡಲೇ ಸಹಕಾರಿ ಸಮುದಾಯಗಳನ್ನು ಸ್ಥಾಪಿಸಬೇಕೆಂಬ ಕಾರ್ಯಸಾಧುವಾದ ಯೋಜನೆಯೊಂದಿಗೆ ಮುಂದೆ ಬಂದಿದ್ದರು. ಅಂಥ ಮಾದರಿ ಗ್ರಾಮಗಳನ್ನು ಹುಟ್ಟುಹಾಕಲು ಅಗತ್ಯವಾದ ನಿಧಿಸಂಗ್ರಹ ಮಾಡಲಿಕ್ಕಾಗಿ ಸಮಾಜದ ಪ್ರತಿಷ್ಠಿತ ಜನರ ಮುಂದಿರಿಸಲು ಅವರು ಈ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದ್ದರು. ಆದರೆ ಅವರಿಗೆ ಸೂಕ್ತ ಪ್ರತಿಕ್ರಿಯೆ ದೊರಕಲಿಲ್ಲ. ಇದಾದನಂತರ ಈ ಯೋಜನೆಯನ್ನು ವಿಸ್ತರಿಸುತ್ತಾ ಅವರು ಶ್ರಮವೇ ಎಲ್ಲ ಸಂಪತ್ತನ್ನು ಸೃಷ್ಟಿಸುತ್ತದೆ, ಆದ್ದರಿಂದ ಶ್ರಮದಿಂದ ಉತ್ಪಾದಿಸಲ್ಪಟ್ಟ ಎಲ್ಲ ಉತ್ಪನ್ನವೂ ಕಾರ್ಮಿಕರಿಗೇ ಮರಳಬೇಕು ಎಂಬ ತಮ್ಮ ನಂಬಿಕೆಯನ್ನು ಮೊದಲಬಾರಿಗೆ ಪ್ರಚುರಪಡಿಸಿದರು.

ತಮ್ಮ ವಿಚಾರಗಳಿಗಾಗಿ ಪ್ರಚಾರ ಮಾಡುತ್ತಾ ಓವೆನ್ ಅವರು ಸಹಕಾರಿ ಸಮುದಾಯಗಳನ್ನು ವಿವಿಧ ರೀತಿಯಲ್ಲಿ ಸ್ಥಾಪಿಸಬಹುದು ಎಂದು ಪ್ರತಿಪಾದಿಸಿದರು. ``ದೊಡ್ಡ ಜಮೀನನ್ನು ಹೊಂದಿದವರು, ಶ್ರೀಮಂತ ಬಂಡವಾಳಗಾರರು, ಹೆಸರುವಾಸಿಯಾದ ಕಂಪನಿಗಳು, ಚರ್ಚುಗಳು, ಜಿಲ್ಲಾ ಸರ್ಕಾರಗಳು, ಮತ್ತು ದುಡಿಯುವ ಜನತೆಯ ಬೇರೆ ಬೇರೆ ವಿಭಾಗಗಳು; ಮಧ್ಯಮವರ್ಗದವರು, ರೈತರು, ಮೆಕ್ಯಾನಿಕ್‌ಗಳು, ವ್ಯಾಪಾರಸ್ಥರು ಇವರೆಲ್ಲರೂ ಪ್ರಸಕ್ತ ವ್ಯವಸ್ಥೆಯ ಕೆಡಕುಗಳಿಂದ ಹೊರಬರಲು ಇದನ್ನು ಸ್ಥಾಪಿಸಬಹುದು."[೪೮]

ಈ ಪ್ರಸ್ತಾವವು ದಾರಿದ್ರ್ಯವನ್ನು, ನಿರುದ್ಯೋಗವನ್ನು ಅಥವಾ ದುಡಿತದಲ್ಲಿ ಯಾವ ಸಂತಸವೂ ಇಲ್ಲದೆ ದಿನವಿಡೀ ಶ್ರಮಿಸುವುದನ್ನು ಮಾತ್ರ ಕೊಡುತ್ತಿದ್ದ ವ್ಯವಸ್ಥೆಯಿಂದ ಹೊರಬರುವ ದಾರಿಯನ್ನು ಅವರ ಮುಂದೆ ತೆರೆದಿಟ್ಟಿತ್ತು. ಅನೇಕರಿಗೆ, ಸದಸ್ಯರ ದುಡಿತದಿಂದ ಉತ್ಪನ್ನವಾಗುವ ಉಳಿತಾಯದಿಂದ ಎಲ್ಲರಿಗೂ ನಾಗರಿಕ ಜೀವನವನ್ನೂ, ಉತ್ತಮವಾದ ದುಡಿಮೆಯ ವಾತಾವರಣವನ್ನೂ ಕೊಡಬಲ್ಲಂಥ ಸಮುದಾಯವೊಂದನ್ನು ಸ್ಥಾಪಿಸುವುದು ಒಂದು ಆದರ್ಶವಾದ ಆದರೆ ಕಾರ್ಯಸಾಧುವಾದ ಯೋಜನೆ ಎನಿಸಿತ್ತು. ಅಂಥ ಸಮುದಾಯದಲ್ಲಿ, “ಅತ್ಯುತ್ತಮ ಅಭ್ಯಾಸಗಳು, ವ್ಯಕ್ತಿತ್ವಗಳು” ಯಾರ ಅರಿವಿಗೂ ಬಾರದಂತೆಯೇ ಸೃಷ್ಟಿಯಾಗಿ ಬಿಡುತ್ತವೆ; ಏಕೆಂದರೆ “ಯಾವುದೇ ಸ್ಥಾನವನ್ನು ತುಂಬಲು ಸಮರ್ಥರಾಗುವಂತೆ, ತಮ್ಮ ಸಂಸ್ಥೆಯ ಸಹಚರರ ಕಲ್ಯಾಣಕ್ಕಾಗಿ ಅವಶ್ಯವಾದ ಎಲ್ಲ ಕರ್ತವ್ಯಗಳನ್ನೂ ನಿರ್ವಹಿಸಲಾಗುವಂತೆ ಅವರಿಗೆ ತರಬೇತಿ ನೀಡಲಾಗಿರುತ್ತದೆ” ಎಂದು ಓವೆನ್ ಹೇಳುತ್ತಿದ್ದರು. ಇದೇ ಒಂದು ರೀತಿಯ ಶಿಕ್ಷಣ. ಓವೆನ್ ಬಲವಾಗಿ ಪ್ರತಿಪಾದಿಸುತ್ತಿದ್ದದ್ದು: “ಕೇವಲ ಶಿಕ್ಷಣದಿಂದ ಮಾತ್ರವೇ ಮನುಷ್ಯರ ಸಮುದಾಯಗಳಲ್ಲಿ ಆಡಳಿತ ಸಮರ್ಪಕವಾಗುವುದು ಸಾಧ್ಯ ಮತ್ತು ಅಂಥ ಶಿಕ್ಷಣದಿಂದ ಮಾತ್ರ ಅತ್ಯಂತ ಕಡಿಮೆ ಶ್ರಮದಿಂದ ಆದರೆ ಅತ್ಯಂತ ತೃಪ್ತಿಕರವಾಗಿ ಮಾನವ ಸಮಾಜದ ಪ್ರತಿಯೊಂದು ಉದ್ದೇಶವನ್ನೂ ಸಾಧಿಸಲಾಗುತ್ತದೆ.”[೪೯]

ಪ್ರತಿಯೊಬ್ಬ ಮನುಷ್ಯನೂ ಉತ್ತಮ ಉತ್ಪಾದಕನಾಗುವಂತೆ ಅವನಿಗೆ ಸೂಕ್ತ ಶಿಕ್ಷಣ, ತರಬೇತಿಯನ್ನು ನೀಡುವಲ್ಲೇ ಎಲ್ಲರ ಹಿತಾಸಕ್ತಿಯೂ ಅಡಗಿರುವುದರಿಂದ, ಅಂಥ ಸಮಾಜದಲ್ಲಿ ಅಜ್ಞಾನ ಉಳಿದಿರುವುದಕ್ಕೆ ಸಾಧ್ಯವೇ ಇಲ್ಲ. ಆಡ್ಯಂ ಸ್ಮಿತ್ ಅವರಿಗೆ ಹೊಳೆದಿದ್ದ ಸಮಸ್ಯೆಯೇ ಇಲ್ಲಿ ಓವೆನ್ ಅವರ ಮನಸ್ಸನ್ನೂ ಆವರಿಸಿಕೊಂಡಿದೆ. ಓವೆನ್ ಪರಿಹಾರವನ್ನು ಸೂಚಿಸುತ್ತಾರೆ: ``ಒಬ್ಬ ದಾರದ ತುಂಡುಗಳನ್ನೂ ಸೇರಿಸುವ ರೋಗಿಷ್ಠ ಕಾರ್ಮಿಕ, ಒಬ್ಬ ಮೊಳೆಗೆ ತಲೆಗಳನ್ನು ಜೋಡಿಸುವವನು, ಒಬ್ಬ ಮೈಮೇಲೆ ಜ್ಞಾನವೇ ಇಲ್ಲದೆ ತಿಳಿವಳಿಕೆ ಇಲ್ಲದೆ, ವಿಚಾರಶೀಲ ಚಿಂತನೆ ಇಲ್ಲದೆ ಸುಮ್ಮನೆ ನೆಲವನ್ನು ದಿಟ್ಟಿಸಿ ನೋಡುತ್ತಾ ನಿಲ್ಲುವ ದಡ್ಡ ಇಂಥವರ ಬದಲಾಗಿ, ಕ್ರಿಯೆಯಿಂದಲೂ ಜ್ಞಾನದಿಂದಲೂ ಪರಿಪೂರ್ಣವಾಗಿರುವ ದುಡಿಯುವ ವರ್ಗವೊಂದು ಮೇಲಕ್ಕೆ ಚಿಮ್ಮುತ್ತದೆ ಎಂದುಕೊಳ್ಳಿ! ಅವರ ನಡವಳಿಕೆ, ತಿಳಿವಳಿಕೆ, ಸಭ್ಯತೆ, ವ್ಯಕ್ತಿತ್ವಗಳು ಹೇಗಿರುತ್ತವೆ ಎಂದರೆ, ಅವರಲ್ಲಿನ ಅತ್ಯಂತ ಕೆಳಗಿನ ಶ್ರೇಣಿಯ ಮನುಷ್ಯನೂ, ಇಂದಿನ ಅಥವಾ ಹಿಂದಿನ ಸಮಾಜಗಳು ಸೃಷ್ಟಿಸಿರುವ ಯಾವುದೇ ವರ್ಗದ ಯಾವುದೇ ವ್ಯಕ್ತಿಗಿಂತ ಮೇಲಿರುತ್ತಾನೆ.”[೫೦]

ಇದು ಸಮಕಾಲೀನ ಸಮಸ್ಯೆಗಳನ್ನು ಕಾರ್ಮಿಕ ವರ್ಗದ ದೃಷ್ಟಿಕೋನದಿಂದ ನೋಡುವ ರೀತಿ ಮತ್ತು ಇಂಥ ಪರಿಹಾರೋಪಾಯಗಳಿಗೆ ಜನತೆಯ ನಡುವೆ ಗಾಢವಾದ ಆಕರ್ಷಣೆ ಇರುತ್ತದೆ. ಓವೆನ್ ಅವರ

ಯೋಜನೆಯು ಪ್ರಕಟವಾದ ಹತ್ತು ವರ್ಷಗಳೊಳಗೆ ಜನ ತಮ್ಮ ಶ್ರಮದ ಸಂಪೂರ್ಣ ಮೌಲ್ಯದಿಂದ ತಮ್ಮದೇ ಸಮುದಾಯಗಳನ್ನು ಸ್ಥಾಪಿಸಲಾರಂಭಿಸಿದರು. ಇಂಥ ಕಡೆ ಅವರು ತಮ್ಮ ವೃತ್ತಿಗಳನ್ನು ಮುಂದುವರಿಸಿಕೊಳ್ಳಬಹುದಾಗಿತ್ತು. ಮನುಷ್ಯರಂತೆ ಬದುಕಬಹುದಿತ್ತು ಮತ್ತು ತಮ್ಮ ಮಕ್ಕಳಿಗೆ ನೈಜ ಜ್ಞಾನೋದಯವಾಗುವಂಥ ಶಿಕ್ಷಣವನ್ನು ಕೊಡಿಸಬಹುದಿತ್ತು. ಅಂಥ ಸಮುದಾಯಗಳು ತಪ್ಪದೆ ಯಶಸ್ವಿಯಾಗಬೇಕು ಮತ್ತು ಅವು ಕಾಲಕ್ರಮೇಣ ವಿಸ್ತರಿಸುತ್ತಾ ಮಾನವ ಸಮಾಜದಲ್ಲಿ ಸಂಪೂರ್ಣ ಬದಲಾವಣೆ ತರಬಹುದು ಎಂದು ಅನೇಕರು ಆಶಿಸಿದ್ದರು.

೧೮೨೧ರಲ್ಲಿ ಲಂಡನ್‌ನಲ್ಲಿ ವೃತ್ತಿನಿರತ ಮುದ್ರಣಕಾರರು ಮತ್ತು ಅವರ ಗೆಳೆಯರು “ಸಹಕಾರಿ ಮತ್ತು ಆರ್ಥಿಕ ಸಮಾಜ” ಎಂಬ ಸಂಘವನ್ನು ಸ್ಥಾಪಿಸಿ ‘ಎಕನಾಮಿಸ್ಟ್’ ಎಂಬ ತಮ್ಮದೇ ಆದ ಪ್ರಚಾರ ಪತ್ರಿಕೆಯನ್ನು ಆರಂಭಿಸಿದರು ಮತ್ತು ಸಹಕಾರಿ ತತ್ತ್ವದ ಆಧಾರದ ಮೇಲೆ ಒಂದು ಸಣ್ಣ ಸಮುದಾಯವನ್ನೂ ಆರಂಭಿಸಿದರು. ಇಲ್ಲಿ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕಾದದ್ದು ಸಮುದಾಯದ ಪ್ರಪ್ರಥಮ ಕರ್ತವ್ಯ ಎಂದು ತೀರ್ಮಾನಿಸಲಾಯಿತು.[೫೧]

ಇಂಥದ್ದೇ ಇನ್ನೊಂದು ಯೋಜನೆ ಎಡಿನ್ ಬರ್ಗ್‌ನಲ್ಲಿ ಅದೇ ವರ್ಷ ಆರಂಭವಾಯಿತು. ಅಬ್ರಹಾಂ ಕೂಂಬೆ ಎನ್ನುವವರು ಆರಂಭಿಸಿದ ``ಪ್ರಾಕ್ಟಿಕಲ್ ಸೊಸೈಟಿ'' ಎಂಬ ಈ ಸಮುದಾಯದಲ್ಲಿ ಒಂದು ಹೊತ್ತಿನಲ್ಲಿ ಐನೂರರಿಂದ ಆರುನೂರು ಕುಟುಂಬಗಳು ಸೇರಿಕೊಂಡಿದ್ದವು. ಅವುಗಳು ಒಂದಾಗಿ ಒಂದು ಸಹಕಾರಿ ಅಂಗಡಿಯನ್ನು ತೆರೆದದ್ದಲ್ಲದೆ ನಿಯತವಾಗಿ ಚರ್ಚೆಗಳಿಗೆ ಹಾಗೂ ಮನರಂಜನೆಗೆ ಒಟ್ಟು ಸೇರುತ್ತಿದ್ದವು ಮತ್ತು ನ್ಯೂ ಲ್ಯಾನಾರ್ಕ್ ಮಾದರಿಯಲ್ಲಿ ನೂರ ಇಪ್ಪತ್ತು ಮಕ್ಕಳಿಗಾಗಿ ಶಾಲೆಯೊಂದನ್ನು ಆರಂಭಿಸಿದವು.[೫೨]

ಕೂಂಬೆ ಅವರೇ ೧೮೨೫ರಲ್ಲಿ ಆರಂಭಿಸಿದ ಆರ್‌ಬಿಸ್ಟನ್ ಮಹತ್ವಾಕಾಂಕ್ಷಿ ಯೋಜನೆಯು ಬಹಳ ದೊಡ್ಡ ಕಟ್ಟಡವನ್ನು ಹೊಂದಿದ್ದು ಅದರಲ್ಲಿ ಒಂದು ಸಾವಿರ ಜನಕ್ಕೆ ಅವಕಾಶವಿತ್ತು, ಮಕ್ಕಳಿಗೆ ವಸತಿ ಸೌಕರ್ಯವಿದ್ದು ಎಲ್ಲರೂ ಸಮಾನವಾದ ಶಾಲೆಗಳಲ್ಲಿ, ಶಿಶು ಕಲಿಕಾ ಕೇಂದ್ರಗಳಲ್ಲಿ ಕಲಿಯುತ್ತಿದ್ದರು.

ಇಂಥ ಕೆಲವೊಂದು ಮಹತ್ವಾಕಾಂಕ್ಷಿ ಯೋಜನೆಗಳು ಹಣದ ಅಭಾವದಿಂದ ವಿಫಲವಾದಾಗ ಕಾರ್ಮಿಕರು ಹೊಸ ಮಾದರಿಯ ಸಹಕಾರಿ ಸಂಘಗಳನ್ನು ಸ್ಥಾಪಿಸಿದರು. ಬಹುತೇಕ ಒಂದೇ ವೃತ್ತಿಯಲ್ಲಿದ್ದವರ ಸಂಘಗಳು ಅವು. ಆರಂಭದಲ್ಲಿ ಅವು ಒಂದು ಸಣ್ಣ ಬಂಡವಾಳವನ್ನು ಸಂಗ್ರಹಿಸಿ ತಮ್ಮ ನಿರುದ್ಯೋಗಿ ಸದಸ್ಯರುಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಕೊಳ್ಳುತ್ತಿದ್ದವು ಮತ್ತು ಸೂಕ್ತ ಅವಕಾಶಗಳು ದೊರಕಿದಾಗ ಬೆಳೆಯುತ್ತಾ ಹೋಗುತ್ತಿದ್ದವು. ಅಲ್ಲಿ ಉತ್ಪನ್ನವಾದ ಸರಕುಗಳು ಆರಂಭದಲ್ಲಿ ಅಲ್ಲಲ್ಲೇ ಸ್ಥಳೀಯವಾಗಿ ಮಾರಾಟವಾಗುತ್ತಿದ್ದವು. ಅನಂತರ ಇಂತಹ ಸಹಕಾರಿ ಉತ್ಪನ್ನಗಳ ವಿನಿಮಯ

ಆರಂಭವಾಯಿತು ಮತ್ತು ಅವರೊಳಗೇ ಒಂದು ಶ್ರಮದ ವಿನಿಮಯ ಮಾಧ್ಯಮವನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನವನ್ನು ಮಾಡಲಾಯಿತು. ಇಂಥ ಸಂಘಗಳ ಸಂಖ್ಯೆ ಹೆಚ್ಚಿತು ಮತ್ತು ೧೮೩೦ರ ವೇಳೆಗೆ ಸುಮಾರು ೩೦೦ ಸಂಘಗಳು ಅಸ್ತಿತ್ವಕ್ಕೆ ಬಂದಿದ್ದವು. ಒಂದೆರಡು ವರ್ಷಗಳಲ್ಲೇ ಅದು ಐದುನೂರನ್ನು ಮುಟ್ಟಿತು. ಅನೇಕ ಸಂದರ್ಭಗಳಲ್ಲಿ ಸದಸ್ಯರ ಮಕ್ಕಳಿಗೆ ಶಿಕ್ಷಣ ನೀಡುವುದನ್ನು ಯೋಜನೆಯ ಗುರುತರವಾದ ಭಾಗ ಎಂದು ತೀರ್ಮಾನಿಸಲಾಯಿತು. ಹೀಗೆ ಈ ದೇಶದಲ್ಲಿ ಮೊದಲು ಆರಂಭವಾದದ್ದೆಂದು ಭಾವಿಸುವ, ೧೮೪೪ರಲ್ಲಿ ರಾಚ್‌ಡೇಲ್ ಪಯೊನರ್ಸ್ ಎಂಬ ಸಹಕಾರಿ ಸಂಘ ಆರಂಭವಾಗುವುದಕ್ಕೆ ಮುನ್ನವೇ ಆರಂಭಿಕ ಸಹಕಾರಿ ಚಳವಳಿಯೊಂದು ಶುರುವಾಗಿತ್ತು. ೧೮೩೦ರ ಅನಂತರ ಶೈಕ್ಷಣಿಕ ಚಳವಳಿಯ ಮೇಲೆ ಈ ಆರಂಭಿಕ ಆಂದೋಲನವು ಮುಖ್ಯ ಪ್ರಭಾವವನ್ನು ಬೀರಿತು.

ಇಷ್ಟು ಹೊತ್ತಿಗೆ ಓವೆನ್‌ರು ಕಾರ್ಮಿಕ ವರ್ಗದ ಚಳವಳಿ, ಸಮಾಜವಾದ ಮತ್ತು ನಾಸ್ತಿಕವಾದದೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಂಡಿದ್ದರು. ಶ್ರೀಮಂತರು ಅವರ ಯೋಜನೆಗಳಿಂದ ದೂರವಾಗಿ ಕೈತೊಳೆದುಕೊಂಡುಬಿಟ್ಟಿದ್ದರು. ಅವರು ಲಂಡನ್‌ನಲ್ಲಿನ ಭಾನುವಾರದ ಉಪನ್ಯಾಸಗಳಲ್ಲಿ ತಮ್ಮ ಗಟ್ಟಿಯಾದ ವಿಚಾರವಾದವನ್ನು ಪ್ರತಿಪಾದಿಸುತ್ತಿದ್ದರಿಂದ ಸಹಕಾರಿ ಚಳವಳಿಯಲ್ಲೂ ಬಿರುಕು ಮೂಡಿತ್ತು. ಆದರೆ ಈ ವೇಳೆಗೆ ಅವರು ಬೇರೆ ಸಹವರ್ತಿಗಳನ್ನು ಸಂಪಾದಿಸಿಕೊಂಡಿದ್ದರು. ಅವರು ಕಾರ್ಮಿಕರ ಬೇರೆ ವಿಭಾಗಗಳಲ್ಲಿ ಸಮಾಜವಾದದ ಚಿಂತನೆಯನ್ನು ಪ್ರಚುರಪಡಿಸಲು ನೆರವಾದರು. ಅಂಥವರಲ್ಲಿ ಒಬ್ಬರು ವಿಲಿಯಂ ಥಾಂಪ್‌ಸನ್. ಆತ ಐರ್‌ಲೆಂಡ್‌ನ, ಒಬ್ಬ ಭೂ ಒಡೆಯ. ಆತನಿಗೆ ರೈತಾಪಿಗಳ ಬಡತನ, ಸಂಕಟಗಳ ಬಗ್ಗೆ ತೀವ್ರ ಕಾಳಜಿಯಿತ್ತು. ಅವರಿಗೆ ಶಿಕ್ಷಣದ ಪ್ರಸರಣದಲ್ಲಿ ತೀವ್ರ ಆಸಕ್ತಿಯಿದ್ದದ್ದು ಮಾತ್ರವಲ್ಲ, ಜನಸಾಮಾನ್ಯರನ್ನು ಆ ಹೊತ್ತಿನ ದಾರಿದ್ರ್ಯದಿಂದ ರಕ್ಷಿಸಲು ಹಾಗೂ ಜಗತ್ತಿನಲ್ಲಿ ಒಂದು ನ್ಯಾಯಯುತ ಸಮಾಜವನ್ನು ಕಟ್ಟಲು ಸಹಕಾರ ಚಳವಳಿ ಅಗತ್ಯ ಎಂದು ಅವರು ಭಾವಿಸಿದ್ದರು. ಇವರಲ್ಲದೆ ರಿಚರ್ಡ್ ಕಾರ್ಲೈಲ್ ಎಂಬ ಥಾಮಸ್ ಪೇಯ್ನ್ರ ಕಟ್ಟಾ ಅನುಯಾಯಿಯೊಬ್ಬರಿದ್ದರು. ಅವರು ಒಮ್ಮೆ ವಿಚಾರವಾದವು ಮೂಢನಂಬಿಕೆಯ ಮೇಲೆ ವಿಜಯವನ್ನು ಸಾಧಿಸಿದರೆ ಪ್ರಾತಿನಿಧಿಕ ಸರ್ಕಾರ ಮತ್ತು ಮಹಾನ್ ಸಾಮಾಜಿಕ ಪ್ರಗತಿಯ ಹೆಬ್ಬಾಗಿಲು ತೆರೆದಂತೆ ಎಂದು ನಂಬಿದ್ದರು. ಅವರಿಗೆ ಸಹ ಓವೆನ್ ಅವರ ಸಂದೇಶದಲ್ಲಿ ಸಮಾನ ಮನಸ್ಕ ಅಭಿಪ್ರಾಯಗಳು ಕಂಡುಬಂದವು. ಅದೇ ರೀತಿಯಲ್ಲಿ ಕಾರ್ಮಿಕ ವರ್ಗವು ತನ್ನ ವಿಮೋಚನೆಯನ್ನು ಗಳಿಸಿಕೊಳ್ಳುವ ಮೊದಲು ತನ್ನ ದುಡಿಮೆಗೆ ತಕ್ಕ ಪ್ರತಿಫಲವನ್ನು ಪಡೆಯಬೇಕೆಂದು ಪ್ರತಿಪಾದಿಸುತ್ತಿದ್ದ ಥಾಮಸ್ ಹಾಡ್ಸ್ಕಿನ್ ಅವರೂ ಇದ್ದರು.

ತಮ್ಮ ಭಾಷಣಗಳು, ಪತ್ರಿಕೆಗಳು ಮತ್ತು ಪುಸ್ತಕಗಳ ಮೂಲಕ ಇಂಥ ವ್ಯಕ್ತಿಗಳು ಕಾರ್ಮಿಕವರ್ಗದ ಭವಿಷ್ಯತ್ತಿನ ನಾಯಕರ ಆಸಕ್ತಿಯನ್ನು, ಅನಂತರ ಬೆಂಬಲವನ್ನು ಗಳಿಸಿಕೊಂಡರು. ಆ ಜನರೆಂದರೆ ವಿಲಿಯಂ ಲೊವೆಟ್, ಕ್ಲೀವ್, ವ್ಯಾಟ್ಸನ್ ಮತ್ತು ಜೀವನಪರ್ಯಂತ ಓವೆನ್‌ವಾದಿಯಾಗೇ ಉಳಿದ ಹೆದರಿಂಗ್‌ಟನ್. ಇದಲ್ಲದೆ ೧೮೩೦ರ ದಶಕದ ಕೊನೆಯ ಭಾಗದಲ್ಲಿ ಮತ್ತು ೧೮೪೦ರ ದಶಕದಲ್ಲಿ ಚಾರ್ಟಿಸ್ಟ್ ಆಂದೋಲನದ ನಾಯಕರಾಗಿ ಹೊರಹೊಮ್ಮಿದ ಬ್ರಾಂಟೆರೆ ಓ ಬ್ರಿಯೆನ್, ಜಾರ್ಜ್ ಜೂಲಿಯನ್ ಹಾರ್ನೆ ಮತ್ತಿತರರ ಬೆಂಬಲವನ್ನೂ ಗಳಿಸಿಕೊಳ್ಳಲಾಗಿತ್ತು. ಮನುಷ್ಯನ ಬದುಕು ಉತ್ತಮವಾಗುವಂತೆ ವಿಜ್ಞಾನವು ಮಾನವ ಶ್ರಮಕ್ಕೆ ದಾರಿ ತೋರಿಸಬಲ್ಲದು ಎಂಬ ಸಂದೇಶವನ್ನು ಗ್ರಹಿಸಲು ಶಿಕ್ಷಣ ಅಗತ್ಯ ಎಂಬ ಬೋಧನೆಯನ್ನು ಪ್ರಸರಿಸಲಾಗಿತ್ತು. ಇದಲ್ಲದೆ ಶಿಕ್ಷಣವು ಬರಲಿರುವ ತಲೆಮಾರುಗಳನ್ನು ಹೊಸ ರೀತಿಯ ಬದುಕಿಗೆ ಸಜ್ಜುಗೊಳಿಸುತ್ತದೆ ಮತ್ತು ಮನುಷ್ಯರು ಬದುಕಲು ಯೋಗ್ಯವಾದ ಜಗತ್ತನ್ನು ಈ ಮೂಲಕ ಸ್ಥಾಪಿಸಬಹುದು ಎಂದೂ ತಿಳಿಹೇಳಲಾಗಿತ್ತು.

ಇಂಥ ಪರಿಕಲ್ಪನೆಗಳಿಗೆ ಹಾದಿಯನ್ನು ಸುಗಮಗೊಳಿಸಲಾಗಿತ್ತು ಎಂಬುದು ನಮಗೆ ೧೮೧೭ರ ಲ್ಯಾಂಕಾಶೈರ್ ಸುಧಾರಕರ ಕಾರ್ಯಕ್ರಮದಿಂದ ಸ್ಪಷ್ಟವಾಗುತ್ತದೆ. ಅವರು ಈ ಹೊತ್ತಿಗಾಗಲೇ ತಮ್ಮದೇ ಅನುಭವದಿಂದಲೂ, ಪೇಯ್ನ್ನ ಕೃತಿಗಳ ಅಧ್ಯಯನದಿಂದಲೂ ಚರ್ಚ್ ಮತ್ತು ಪ್ರಭುತ್ವವು ಶಿಕ್ಷಣವನ್ನು ನಿಯಂತ್ರಿಸುವುದರ ಮೂಲಕ ಜನತೆಯ ಮನಸ್ಸನ್ನು ತಮಗೆ ಬೇಕಾದಂತೆ ರೂಪಿಸಿಕೊಂಡು, ತಮ್ಮ ಅಧಿಕಾರವನ್ನು ಉಳಿಸಿಕೊಂಡು ಬಂದಿವೆ ಎಂದು ಅರಿತುಕೊಂಡಿದ್ದರು. ಅಂದು ಅಸ್ತಿತ್ವದಲ್ಲಿದ್ದ ಎಲ್ಲ ಶಾಲೆಗಳೂ ಪಂಥೀಯವಾದಿ ಗೊಡ್ಡು ವಿಚಾರಗಳನ್ನೂ, ಮೂಢನಂಬಿಕೆಗಳನ್ನೂ ಮಕ್ಕಳಲ್ಲಿ ಬೆಳೆಸಿ, ಅವರಿಗೆ ಸಮಾಜವನ್ನು ಕುರಿತು, ಮನುಷ್ಯನ ಹಕ್ಕು ಬಾಧ್ಯತೆಗಳನ್ನು ಕುರಿತು, ಇಡೀ ವಿಶ್ವವನ್ನು ಕುರಿತು ಸುಳ್ಳಾದ ವ್ಯಾಖ್ಯಾನವನ್ನು ಕಲ್ಪಿಸಿದ್ದವು. ಇದರ ಉದ್ದೇಶ ಜನತೆಯ ಹಾದಿತಪ್ಪಿಸುವುದು ಅವರನ್ನು ನಿರಾಯುಧರನ್ನಾಗಿಸುವುದೇ ಆಗಿತ್ತು. ಈಗ ಓವೆನ್ ಮತ್ತು ಅವರ ಸಹವರ್ತಿಗಳು ಮುಂದೆ ಬಂದು ಶಿಕ್ಷಣವು ಕೇವಲ ಸತ್ಯವಾದದ್ದನ್ನು ಕುರಿತಾಗಿಯೇ ಇರಬೇಕು, ಅದು ಮನುಷ್ಯರ ಮನಸ್ಸನ್ನು ತಪ್ಪಾದ ತಿಳಿವಳಿಕೆಗಳಿಂದ ಮುಕ್ತಗೊಳಿಸಬೇಕು ಮತ್ತು ವಿಚಾರವೇ ಎಲ್ಲಕ್ಕಿಂತ ಮುಖ್ಯವಾದದ್ದು ಎಂಬುದನ್ನು ಎತ್ತಿಹಿಡಿಯಬೇಕು ಎಂದು ಒತ್ತಾಯಿಸತೊಡಗಿದರು. ಬೆಳವಣಿಗೆಯ ಹಂತದಲ್ಲಿದ್ದ ಕಾರ್ಮಿಕ ವರ್ಗವು ಮುಂದೆ ಈ ಚಿಂತನೆಗಳನ್ನು ತನ್ನದಾಗಿ ಮಾಡಿಕೊಂಡಿತು.

## iii. ರಿಚರ್ಡ್ ಕಾರ್ಲೈಲ್‌ರ “ವಿಜ್ಞಾನ ಕ್ಷೇತ್ರದ ಮಹನೀಯರಿಗೊಂದು ಉಪನ್ಯಾಸ”

ಕಾರ್ಮಿಕರು ಬೌದ್ಧಿಕ ನಾಯಕತ್ವಕ್ಕಾಗಿ ಯಾರ ಕಡೆ ನೋಡುತ್ತಿದ್ದರೋ ಅಂಥ ನೇತಾರರು ೧೮೨೦ರ ದಶಕದ ಆದಿಭಾಗದ ಹೊತ್ತಿಗಾಗಲೇ ಸತ್ಯ ಮತ್ತು ವಿಚಾರವನ್ನು ಶಿಕ್ಷಣದ ಮೂಲಕ ಪ್ರಸರಿಸಬಹುದು ಎಂಬ ಅಭಿಪ್ರಾಯವನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಿದ್ದರು. ಈ ದೃಷ್ಟಿಕೋನದ ಅತ್ಯಂತ ಮನಸೆಳೆಯುವ ಅಭಿವ್ಯಕ್ತಿಯನ್ನು ನಾವು, “ವಿಜ್ಞಾನ ಕ್ಷೇತ್ರದ ಮಹನೀಯರಿಗೊಂದು ಉಪನ್ಯಾಸ (೧೮೨೧)”[೫೩] ಎಂಬ ಲೇಖನದಲ್ಲಿ ಕಾಣಬಹುದು. ಇದನ್ನು ಬರೆದವರು ಕಾರ್ಲೈಲ್. ಅವರು ತಾವು ಇನ್ನೂ ಆರು ವರ್ಷ ಕಾರಾಗೃಹ ವಾಸವನ್ನು ಡೊರ್‌ಚಸ್ಟರ್ ಜೈಲಿನಲ್ಲಿ ಅನುಭವಿಸುತ್ತಿದ್ದಾಗಲೇ ಇದನ್ನು ಬರೆದು ಪ್ರಕಟಿಸಿ ಮುದ್ರಿಸಿದರು.

ಈ ಕಿರು ಪುಸ್ತಕದಲ್ಲಿ ಕಾರ್ಲೈಲ್‌ರು ಆ ಕಾಲದ ಅತ್ಯಂತ ಮುಂದುವರಿದ ಮುಕ್ತ ಚಿಂತಕರ ನಿಲುವಿಗೆ ಅಭಿವ್ಯಕ್ತಿ ನೀಡಿದ್ದಾರೆ. ಆ ಚಿಂತಕರು ನೈತಿಕ ಮತ್ತು ಭೌತಿಕ ಅಭಿವೃದ್ಧಿಗೆ ವಿಜ್ಞಾನ ಮತ್ತು ವೈಜ್ಞಾನಿಕ ಶಿಕ್ಷಣದ ಪ್ರಗತಿ ಅಗತ್ಯ ಎಂದು ಪ್ರತಿಪಾದಿಸಿದ್ದವರು. ಈ ಆಲೋಚನೆಗಳನ್ನು ಕಾರ್ಲೈಲ್ ಅವರು ತಾವು ತುಂಬ ಅಭಿಮಾನದಿಂದ ನೋಡುತ್ತಿದ್ದ, ಅನುಸರಿಸುತ್ತಿದ್ದ ಪೇಯ್ನ್ ಅವರ ‘ಏಜ್ ಆಫ್ ರೀಸನ್’ ಪುಸ್ತಕದಿಂದ ಪಡೆದಿದ್ದರು. ಈ ಪುಸ್ತಕವನ್ನು ನಿಷೇಧಿಸಿದ್ದರೂ ಪ್ರಕಟಿಸಿದರು ಎಂಬ ಕಾರಣಕ್ಕಾಗಿ ಕಾರ್ಲೈಲ್‌ರಿಗೆ ಜೈಲುವಾಸ ಪ್ರಾಪ್ತವಾಗಿತ್ತು.

ಕಾರ್ಲೈಲ್‌ರು ೧೮೨೬ರಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದರು. ಆಗ ಪೇಯ್ನ್ ಅವರ ಜನ್ಮದಿನಾಚರಣೆಯ ದಿನ ಔತಣಕೂಟವೊಂದನ್ನು ಏರ್ಪಡಿಸಲಾಯಿತು. ಔತಣಕೂಟದಲ್ಲಿ ಟೋಸ್ಟ್ ಮಾಡುವ ಸಂದರ್ಭ ಬಂದಾಗ, ಅಂದರೆ ಪಾನೀಯದ ಲೋಟವನ್ನು ಕೈಯÀಲ್ಲಿ ಹಿಡಿದು ಇಂಥವರಿಗೆ ಗೌರವಪೂರ್ಣ ನೆನಪು ಎಂದು ಘೋಷಿಸುತ್ತಾ ಪಾನೀಯ ಕುಡಿಯುವ ಸಮಯದಲ್ಲಿ ಯಾವೆಲ್ಲ ಮಹನೀಯರ ಹೆಸರನ್ನು ಹೇಳಲಾಯಿತು ಎಂಬುದನ್ನು ಗಮನಿಸಿದರೆ ಕಾರ್ಲೈಲ್ ಮತ್ತು ಅವರಂಥ ಕ್ರಾಂತಿಕಾರಿಗಳ ಮೇಲೆ ಯಾವ ವ್ಯಕ್ತಿಗಳ ಪ್ರಭಾವವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಥಾಮಸ್ ಪೇಯ್ನ್ ಅವರಲ್ಲದೆ ರೂಸೋ, ವಾಲ್ಟೇರ್, ಡಿಡೆರೊ, ಡಿ’ಹಾಲ್‌ಬಾಕ್, ಬೆಂಜಮಿನ್ ಫ್ರಾಂಕ್ಲಿನ್, ಎಲಿಹು ಪಾಮರ್, ಟಿಂಡಾಲ್, ಟೋಲಂಡ್ ಮತ್ತು ಅನ್ನೆಟ್, ಟಿಲೊಟ್‌ಸನ್, ಡಾ. ಕಾನ್ಯರ್ಸ್ ಮಿಡಲ್‌ಟನ್, ಬೈರನ್, ಶೆಲ್ಲಿ ಮತ್ತು ಮಾನವತೆಯ ಸಬಲೀಕರಣಕ್ಕೆ ಲೇಖನಿ ಕೈಗೆತ್ತಿಕೊಂಡ ಎಲ್ಲ ಇಂಗ್ಲಿಷ್‌ರಿಗೂ[೫೪] ಎಂದು ಹೇಳಲಾಯಿತು. ಪೇಯ್ನ್ ಅವರ ಹೆಸರನ್ನು ಹೇಳುವಾಗ ಕಾರ್ಲೈಲ್ ವಿಶೇಷವಾಗಿ ಅವರ ಬಗ್ಗೆ “ಮಾನವತೆಯ ಮತ್ತು ಔದಾರ್ಯದಿಂದ ಕೂಡಿದ ಅವರ ಸತತವಾದ ಸೇವೆಯನ್ನು ನಾವು ಮೆಚ್ಚುತ್ತೇವೆ” ಎಂದು ಹೇಳಿದ್ದರು.

ವಿಚಾರವಾದಿ ನಿಲುವು ಆಗ ಬಹಳ ಮುಖ್ಯವಾಗಿತ್ತು. "ಉಪನ್ಯಾಸ" ಪುಸ್ತಕದಲ್ಲಿ ಪ್ರಧಾನವಾಗಿರುವುದು ಇದೇ ಅಂಶವೇ. ಇದರಲ್ಲಿ ಕಾರ್ಲೈಲ್ ಅವರು ವಿಜ್ಞಾನವನ್ನು ಕುರಿತು ಭೌತವಾದಿ ನಿಲುವನ್ನು ತೆಗೆದುಕೊಳ್ಳುತ್ತಾರೆ. 'ಏಜ್ ಆಫ್ ರೀಸನ್' ಪುಸ್ತಕದಲ್ಲಿ ಥಾಮಸ್ ಪೇಯ್ನ್ ಅವರು ಮೃತಭಾಷೆಗಳ ಜಾಗದಲ್ಲಿ ವಿಜ್ಞಾನವನ್ನು ಕಲಿಸಬೇಕೆಂದು ಪ್ರತಿಪಾದಿಸಿದರು. "ಸತತವಾದ ಪ್ರಗತಿಶೀಲ ಜ್ಞಾನವು, ನಂಬಿಕೆಯ ಮೇಲೆ ಆಧಾರಿತವಾದ ಚಿಂತನೆಯ ಸತ್ಯವನ್ನು ಪ್ರಶ್ನಿಸುತ್ತದೆ ಮತ್ತು ಅದಕ್ಕೆ ವಿರುದ್ಧವಾಗಿ ಹೋಗುತ್ತದೆ" ಎಂದರು. "ವಿಜ್ಞಾನದ ಕಲಿಕೆಯನ್ನೇ ಕ್ರಿಶ್ಚಿಯನ್ನರು ತಿರಸ್ಕರಿಸಿದ್ದಾರೆ ಮತ್ತು ಅದನ್ನು ಬೋಧಿಸಿದರೆ ಕಿರುಕುಳ ನೀಡುತ್ತಾರೆ"[೫೫] ಎಂದು ಅವರು ಕ್ರಿಶ್ಚಿಯನ್ನರನ್ನು ಟೀಕಿಸಿದರು. ಈ ಬ್ರಹ್ಮಾಂಡವನ್ನು ಕುರಿತ ನಿಜವಾದ ವೈಜ್ಞಾನಿಕ ಜ್ಞಾನವು ಮತ್ತು ಜಗತ್ತನ್ನು ಕುರಿತ ನಿಯಮಗಳ ತಿಳಿವಳಿಕೆಯು ಕ್ರಿಶ್ಚಿಯನ್ ನಿಗೂಢವಾದದ ತಪ್ಪುಗಳನ್ನು ಬಯಲಿಗೆಳೆಯುತ್ತದೆ ಮತ್ತು ಅವರ ವ್ಯಾಖ್ಯಾನಗಳು ಎಲ್ಲ ತರ್ಕ-ವಿಚಾರಕ್ಕೂ ವಿರುದ್ಧವಾಗಿವ ಎಂದು ಅವರು ಸ್ಪಷ್ಟಪಡಿಸಿದರು. ಜಗತ್ತಿನ ಸೃಷ್ಟಿಯನ್ನು ಕುರಿತು ಕ್ರಿಶ್ಚಿಯನ್ನರು ಪ್ರತಿಪಾದಿಸುವ ಮಿಥಕಗಳು ಸುಳ್ಳಾಗಿರುವುದು ಮಾತ್ರವಲ್ಲ ನೈತಿಕವಾಗಿ ಸಹ ತಪ್ಪು. "ಧರ್ಮದ ವ್ಯಾಖ್ಯಾನಕ್ಕಿಂತ ವಿಭಿನ್ನವಾಗಿ ಈ ಬ್ರಹ್ಮಾಂಡವನ್ನು ಕುರಿತು, ಅದರ ಯಾವುದೇ ಭಾಗವನ್ನು ಕುರಿತು ಸರಿಯಾದ ಜ್ಞಾನವನ್ನು ನೀಡಬಲ್ಲ ಸಾಕ್ಷಿ, ರುಜುವಾತುಗಳನ್ನು ಸಂಗ್ರಹಿಸಬೇಕಾದದ್ದು ಎಲ್ಲ ಮನುಷ್ಯರ ನೈತಿಕ ಕರ್ತವ್ಯ. ಆದರೆ ಇದರ ಫಲಿತಾಂಶದ ಬಗ್ಗೆ ಭಯ ಇದೆಯೇನೋ ಎಂಬಂತೆ ಕ್ರಿಶ್ಚಿಯನ್ನರು ಇದನ್ನು ಕೂಡಲೇ ವಿರೋಧಿಸುತ್ತಾರೆ"[೫೬] ಎಂಬ ಅಭಿಪ್ರಾಯವನ್ನು ಕಾರ್ಲೈಲ್ ಮುಂದಿಡುತ್ತಾ ಹೋದರು.

ಉಪನ್ಯಾಸ ಪುಸ್ತಕದ ಮೊದಲಭಾಗವನ್ನು ವಿಶೇಷವಾಗಿ ವಿಜ್ಞಾನಿಗಳು, ರಸಾಯನಶಾಸ್ತ್ರಜ್ಞರು ಹಾಗೂ ಖಗೋಳಶಾಸ್ತ್ರಜ್ಞರಿಗೆ ಉದ್ದೇಶಿಸಿ ಬರೆದದ್ದು. ಅದರಲ್ಲಿ ವಿಜ್ಞಾನಿಗಳು ತಮ್ಮ ಆವಿಷ್ಕಾರಗಳ ತತ್ತ್ವಶಾಸ್ತ್ರೀಯ ಪರಿಣಾಮಗಳನ್ನು ಮನುಕುಲಕ್ಕೆ ಪರಿಚಯಿಸಬೇಕು ಎಂಬ ಮನವಿಯಿದೆ. ಉದಾಹರಣೆಗೆ ರಸಾಯನಶಾಸ್ತ್ರದ ತಿಳಿವಳಿಕೆಯು ಈ ಕೆಳಗಿನ ತೀರ್ಮಾನಗಳಿಗೆ ಕಾರಣವಾಗುತ್ತದೆ: "ಭೌತಜಗತ್ತಿಗೆ ಸಂಬಂಧಿಸಿದಂತೆ ಸೃಷ್ಟಿ ಎಂಬ ಪದವು ಸಮರ್ಪಕವಾದದ್ದಲ್ಲ. ದ್ರವ್ಯರಾಶಿಯನ್ನು ಎಂದೇ ಆಗಲಿ ಸೃಷ್ಟಿಸಲಿಲ್ಲ. ಅದನ್ನು ನಾಶಮಾಡುವುದು ಸಹ ಸಾಧ್ಯವಿಲ್ಲ. ಅತೀತವಾದ ಮಹಾನ್‌ಶಕ್ತಿ ಎಂಬುದು ಯಾವುದೂ ಇಲ್ಲ. ದ್ರವ್ಯರಾಶಿಗೆ ಪ್ರತಿಸ್ಪರ್ಧಿ ಇಲ್ಲ. ದ್ರವ್ಯರಾಶಿಯು ಭೂತಕಾಲದಲ್ಲೂ ಇದ್ದು, ಭವಿಷ್ಯತ್ತಿನಲ್ಲೂ ಇರುವಂತಹದ್ದು, ಶಾಶ್ವತವಾದದ್ದು. ಅದರ ರಾಸಾಯನಿಕ ವಿಶ್ಲೇಷಣೆ ನಿರಂತರವಾದದ್ದು. ಅದರ ಒಳರಚನೆ ಬದಲಾಗುತ್ತಿರುವಂಥದ್ದು"[೫೭] ಅದೇ ರೀತಿ ಖಗೋಳಶಾಸ್ತ್ರವು ಎಲ್ಲ ಧಾರ್ಮಿಕ ಕಾಸ್ಮೋಲಜಿ (ಬ್ರಹ್ಮಾಂಡ ಶಾಸ್ತ್ರ)ಯನ್ನೂ ಬಯಲಿಗೆಳೆಯುತ್ತದೆ. ಆದರೆ ವಿಜ್ಞಾನಿಗಳು ತಮ್ಮ ಇಂತಹ ತೀರ್ಮಾನಗಳನ್ನು ಎಲ್ಲರಿಗೂ ತಲಪಿಸುತ್ತಿಲ್ಲ. ಬದಲಿಗೆ ಅವರು ಮಿಥ್ಯೆಯನ್ನೂ, ನಕಲಿ ಚಿಂತಕರನ್ನೂ

ಬೆಳೆಯಲು ಬಿಟ್ಟಿದ್ದಾರೆ. ಆದರೆ ಕಾರ್ಲೈಲ್ ಹೇಳುತ್ತಾರೆ "ಮೂಢನಂಬಿಕೆಯು ಮಾನವ ಭಾವನೆಗಳನ್ನು ಭ್ರಷ್ಟಗೊಳಿಸುತ್ತದೆ. ವಿಜ್ಞಾನ ಮಾತ್ರ ಇದನ್ನು ಬದಲಿಸಬಲ್ಲದು, ನೈತಿಕ ಶಕ್ತಿಯನ್ನು ನೀಡಬಲ್ಲದು.''[೫೮] ಹೀಗಾಗಿ ಅವರು "ಆದ್ದರಿಂದ ಮುಂದೆ ಬನ್ನಿ, ನನ್ನನ್ನು ಬೆಂಬಲಿಸಿ... ದೇಶದ ತತ್ತ್ವಶಾಸ್ತ್ರಜ್ಞರು ಮುಂದೆ ಬಂದು ಸಮರ ಸಾರಿದರೆ ಮೂಢನಂಬಿಕೆಗಳು ಇನ್ನು ಒಂದು ವರ್ಷ ಕಾಲವೂ ಉಳಿಯಲಾರವು.'' ಎಂದು ಕರೆ ನೀಡುತ್ತಾರೆ, ಅವರು ಹೀಗೆ ಮುಂದೆ ಬಂದು ವಿಜ್ಞಾನದ ಸತ್ಯಗಳನ್ನು ಪ್ರತಿಪಾದಿಸಿದರೆ, ಪುರೋಹಿತವರ್ಗ ಕಸಿದುಕೊಳ್ಳುತ್ತಿರುವ ಆರು ಮಿಲಿಯನ್ ಪೌಂಡ್‌ನಷ್ಟಿರುವ ಹಣವನ್ನು "ವಿಜ್ಞಾನದ ದೇವಾಲಯಗಳನ್ನು ನಿರ್ಮಿಸಲು, ಸಮರ್ಥ ಪ್ರಾಧ್ಯಾಪಕರನ್ನು, ಶಿಕ್ಷಕರನ್ನು ನೇಮಿಸಲು ಸ್ವಂತ ಇಚ್ಛೆಯಿಂದ ವಿನಿಯೋಗಿಸುವಂತಾಗುತ್ತದೆ.'' "ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ಉಪಯುಕ್ತವಾದದ್ದನ್ನು ಕಲಿಸುವುದೇ ಉದ್ದೇಶವಾಗುತ್ತದೆ."[೫೯]

ಹೊಸ ರೀತಿಯ ಶಿಕ್ಷಣವನ್ನು ಸ್ಥಾಪಿಸಿದ್ದು ಇಷ್ಟೇ ಮುಖ್ಯವಾದ ಸಂಗತಿ. "ಅಸ್ತಿತ್ವದಲ್ಲಿರುವ ಎಲ್ಲ ಮಾದರಿಗಳೂ ತಪ್ಪಾಗಿವೆ, ಅಸಮರ್ಪಕವಾಗಿವೆ" ಎಂದು ಕಾರ್ಲೈಲ್ ನುಡಿದರು. ``ವಿದ್ಯಾರ್ಥಿಯೊಬ್ಬ ತಾನು ಶಾಲೆಯಲ್ಲಿ ಕಳೆಯುವ ಸಮಯದ ಅರ್ಧಭಾಗವನ್ನು ಧಾರ್ಮಿಕ ಉಪದೇಶಗಳನ್ನು ಕಲಿಯುವುದರಲ್ಲಿ ಕಳೆಯುತ್ತಾನೆ. ಇದು ನಿಜಕ್ಕೂ ವಿದ್ಯಾರ್ಥಿಯ ಮನಸ್ಸಿನ ಮೇಲೆ ಅರ್ಥಪೂರ್ಣ ಪ್ರಭಾವವನ್ನು ಬೀರುವುದಿಲ್ಲ. ಬದಲಿಗೆ ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುವುದರಿಂದ ಅವನ ಸಂಕಲ್ಪ ಶಕ್ತಿ ಮರಗಟ್ಟುತ್ತದೆ, ಬುದ್ಧಿ ಮಂಕಾಗುತ್ತದೆ. ಇದನ್ನೆಲ್ಲ ಶಾಲೆಯ ಶಿಸ್ತು ಎಂದು ಕರೆಯುತ್ತಾರೆ. ಆದರೆ ಇದಕ್ಕೆ ವಿದ್ಯಾರ್ಥಿ ಅಸಹ್ಯಪಡುತ್ತಿರುತ್ತಾನೆ". "ಮೇಧಾವಿತನದ ಕಿಡಿಯನ್ನು ಹೊತ್ತಿಸುವಂತೆ, ತಾರುಣ್ಯದ ಉತ್ಸಾಹವನ್ನು ಉದ್ದೀಪನಗೊಳಿಸುವಂತೆ" ಶಿಕ್ಷಣದ ಯಾವ ಭಾಗವನ್ನೂ ರಚಿಸಿರುವುದಿಲ್ಲ. ಆದರೆ ಇದಕ್ಕೆ ಬದಲಿಗೆ ಶಿಕ್ಷಣ ಎಂದರೆ ವೈಜ್ಞಾನಿಕ ವಿಷಯಗಳ ಮೇಲೆಯೇ ಗಮನ ಹಾಕುವುದು ಎಂದಾದರೆ, "ಅದರಿಂದ ಮನಸ್ಸು ಸದಾ ವಿಜ್ಞಾನದ ಮೇಲೆಯೇ ಕೇಂದ್ರೀಕೃತವಾದರೆ" ಇಂಥ ಪರಿಸ್ಥಿತಿಯನ್ನು ಬದಲಾಯಿಸಬಹುದು ಮತ್ತು ಕಲಿಕೆಗೆ ಒಂದು ಹೊಸ ಉದ್ದೇಶವನ್ನು ಒದಗಿಸಬಹುದು. "ಕಲೆ ಮತ್ತು ವಿಜ್ಞಾನದ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸುವ ಮತ್ತು ಮುಂದೊಯ್ಯುವ ಗುರಿಯನ್ನು ಹೊಂದಿರುವ, ಸಮಾಜದ ಹಿತಾಸಕ್ತಿಗೆ ಪೂರಕವಾಗಿರುವ ವಿಷಯಗಳನ್ನು ಕುರಿತ ಜ್ಞಾನವನ್ನು ಗ್ರಹಿಸಲು, ಅದನ್ನು ವಿಸ್ತರಿಸಿಕೊಳ್ಳಲು ಅವರ ಮನಸ್ಸು ತಲ್ಲೀನವಾಗುವಂತೆ, ರಂಜಿಸುವಂತೆ, ಮುದಗೊಳ್ಳುವಂತೆ ವಿಜ್ಞಾನದ ಅಧ್ಯಯನವು ಮಾಡುತ್ತದೆ."[೬೦]

ಅದರೊಂದಿಗೆ ಕಾರ್ಲೈಲ್ ಅವರು ಅನೇಕ ಸಮಕಾಲೀನ ವಿಷಯಗಳನ್ನು ಅವು ಅನೈತಿಕ ಎಂಬ ಕಾರಣಕ್ಕಾಗಿ ಆಚೆಗೆ ತಳ್ಳಿದರು. ಉದಾಹರಣೆಗೆ ಗ್ರೀಸ್ ಹಾಗೂ ರೋಮ್‌ನ ಪುರಾಣಗಳನ್ನು ಆಧರಿಸಿದ ಪುರಾತನ ಶಾಸ್ತ್ರೀಯ ಗ್ರಂಥಗಳನ್ನು ಅವರು ಒಪ್ಪಲಿಲ್ಲ. ಅದೇ ರೀತಿ ಗತಕಾಲದ

ಅಜ್ಞಾನವನ್ನು, ಬರ್ಬರತೆಯನ್ನೂ ಪ್ರಧಾನವಾಗಿ ಚಿತ್ರಿಸುವಂತೆ ರಚಿಸಿದ್ದ ಇತಿಹಾಸವನ್ನೂ ಅವರು ಒಪ್ಪಲಿಲ್ಲ. ಓದುವುದು, ಬರೆಯುವುದು ಮತ್ತು ಗಣಿತದೊಂದಿಗೆ ಶಿಕ್ಷಣವು, "ಖಗೋಳಶಾಸ್ತ್ರ, ಭೂಗೋಳ, ಪ್ರಾಕೃತಿಕ ಚರಿತ್ರೆ ಮತ್ತು ರಸಾಯನಶಾಸ್ತ್ರದ ಭಾಗಗಳನ್ನು" ಕಲಿಸಬೇಕು. ಇದರಿಂದಾಗಿ ಮಕ್ಕಳು "ಎಳೆಯ ವಯಸ್ಸಿನಲ್ಲಿಯೇ ತಮಗೆ ಅರ್ಥವಾಗದ ಧಾರ್ಮಿಕ ಕರ್ಮಠ ತತ್ತ್ವಗಳನ್ನು, ಅಧ್ಯಾತ್ಮವನ್ನು ಕಲಿಯುತ್ತಾ ಮನಸ್ಸಿಗೆ ಹಿಂಸೆ ಮಾಡಿಕೊಳ್ಳುವ ಬದಲು ನಿಶ್ಚೇತನವೂ ಸುಸಂಘಟಿತವೂ ಆದ ದ್ರವ್ಯರಾಶಿಯ ಬಗ್ಗೆ ಸರಿಯಾದ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಬಹುದು."[೬೧]

ಹೀಗೆ ಶಿಕ್ಷಣದಲ್ಲಿ ಕಲಿಸಬೇಕಾದ ವೈಜ್ಞಾನಿಕ ವಿಷಯಗಳನ್ನು ಪಟ್ಟಿಮಾಡುವಲ್ಲಿ ಕಾರ್ಲೈಲ್‌ರವರು ಅಭಿಜಾತ ಭೌತವಾದಿ ದೃಷ್ಟಿಕೋನದಿಂದ ಆರಂಭಿಸುತ್ತಾರೆ. "ನಾವು ನೋಡುವಂಥ ಅಥವಾ ಊಹಿಸಿಕೊಳ್ಳುವಂಥ ಎಲ್ಲ ವಸ್ತುಗಳೂ ದ್ರವ್ಯರಾಶಿಯನ್ನು ಮತ್ತು ಚಲನೆಯನ್ನು ಹೊಂದಿರುವುದರಿಂದ ಮತ್ತು ರಸಾಯನಶಾಸ್ತ್ರವು ವಿವಿಧ ವಸ್ತುಗಳ ಸಂಯೋಗಗಳ ಕಾರಣ ಮತ್ತು ಪರಿಣಾಮವನ್ನು ಕುರಿತು ಮತ್ತು ದ್ರವ್ಯರಾಶಿಯ ಗುಣ ಸ್ವಭಾವಗಳನ್ನು ಕುರಿತು ಇರುವುದರಿಂದ ಅದು ವಿಜ್ಞಾನದ ಮುಖ್ಯ ಭಾಗ ಎಂಬುದು ಸ್ವಯಂವೇದ್ಯ. ಅದರ ವ್ಯಾಪ್ತಿಯಲ್ಲಿ ವ್ಯವಸಾಯ, ಆರೋಗ್ಯ ರಕ್ಷಣೆ, ಜವಳಿ ಉತ್ಪಾದನೆ, ಆಹಾರ ತಯಾರಿಕೆ ಮುಂತಾದ ಅನೇಕ ಬದುಕಿಗೆ ಅಗತ್ಯವಾದ ಪ್ರಾಯೋಗಿಕ ವಿಷಯಗಳೂ ಬರುತ್ತವೆ. ಇದರಲ್ಲೆಲ್ಲ ಅಡಕವಾಗಿರುವುದು ರಾಸಾಯನಿಕ ಕ್ರಿಯೆಗಳೇ. ಆದ್ದರಿಂದ ಮಕ್ಕಳಿಗೆ ಅರ್ಥವಾಗುವಂತೆ ರಸಾಯನಶಾಸ್ತ್ರದ ಪ್ರಾಥಮಿಕ ತಿಳಿವಳಿಕೆಯನ್ನು ನೀಡಿ, ಮಕ್ಕಳೇ ಅದನ್ನು ಕುರಿತು ಪ್ರಯೋಗಗಳನ್ನು ಮಾಡಲು ಉತ್ತೇಜಿಸಬೇಕು.''[೬೨]

ಮಕ್ಕಳು ನಿಸರ್ಗವನ್ನು ಕುರಿತ ಎಲ್ಲ ತಿಳಿವಳಿಕೆಯನ್ನು, ಪ್ರಾಕೃತಿಕ ವಿಜ್ಞಾನಗಳನ್ನು ತಾವೇ ನೋಡುತ್ತಾ, ಪ್ರಯೋಗ ಮಾಡುತ್ತಾ ಕಲಿಯಬೇಕು. ಪ್ರಾಣಿಲೋಕ ಮತ್ತು ಸಸ್ಯಲೋಕದ ಅಂಶಗಳನ್ನು ವಿವರಿಸಲು ಮತ್ತು ವರ್ಗೀಕರಿಸಲು ಸಾಧ್ಯ. ವರ್ಗೀಕರಣದ ಲಿನ್ನಿಯನ್ ವ್ಯವಸ್ಥೆಯನ್ನು ಕಲಿಸಬೇಕು. ಎಲ್ಲ ಇತ್ತೀಚಿನ ಆವಿಷ್ಕಾರಗಳನ್ನು ಸೇರಿಸಿಕೊಂಡು ಖಗೋಳಶಾಸ್ತ್ರವನ್ನು ಕಲಿಸತಕ್ಕದ್ದು. ಹೊಸ ಆವಿಷ್ಕಾರಗಳಿಗೆ ಶಾಲಾ ಶಿಕ್ಷಣದಲ್ಲಿ ಆದ್ಯತೆ ಇರಬೇಕು. ಭೂಗೋಳವಾದರೋ ಪ್ರಪಂಚವನ್ನು ಇಂದಿನ ದಿನಗಳಲ್ಲಿ ಯಾವ ರೀತಿ ವಿಭಾಗಿಸಿದ್ದಾರೆ ಎಂಬುದನ್ನು ತಿಳಿಸಬೇಕು ಮತ್ತು ಆಯಾ ಪ್ರದೇಶಗಳ "ಜನತೆಯ ಇಂದಿನ ರೂಢಿಗಳು, ವರ್ತನೆಗಳು ಮತ್ತು ವೈವಿಧ್ಯಗಳನ್ನು ಅರಿಯಲು ಸಹಾಯಕವಾಗಬೇಕು.[೬೩] ಕಾರ್ಲೈಲ್‌ರ ಪಠ್ಯಕ್ರಮವು ಅಂಕಗಣಿತ, ಜ್ಯಾಮಿತಿ, ಚಲನಶಾಸ್ತ್ರ, (ಮೆಕಾನಿಕ್ಸ್)ಗಳೊಂದಿಗೆ ಪೂರ್ಣಗೊಳ್ಳುತ್ತದೆ. "ಪುರಾಣ ಮತ್ತು ಮೂಢನಂಬಿಕೆ ಭ್ರಮೆಯಿಂದ ಮುಕ್ತಗೊಂಡ" ನೈಜ ಜ್ಞಾನೋದಯದ ಬೋಧನೆಗೆ ಅಗತ್ಯವಾದ

ಪಠ್ಯಪುಸ್ತಕಗಳನ್ನು ತಯಾರಿಸಲು ಅವರು ಮತ್ತೊಮ್ಮೆ 'ವಿಜ್ಞಾನ ಕ್ಷೇತ್ರದ ಮಹನೀಯರಿಗೆ ಮನವಿ' ಮಾಡಿಕೊಳ್ಳುತ್ತಾರೆ. ತನ್ಮೂಲಕ ಒಂದು ಮಗು ಪ್ರಕೃತಿಯಲ್ಲಿ ಮನುಷ್ಯನ ಪಾತ್ರವನ್ನು ಕುರಿತು ಅರಿಯುತ್ತಾ ವಿನೀತನಾಗಬೇಕು, ನೈಜ ಜ್ಞಾನಿಯಾಗಬೇಕು.

ಕಾರ್ಲೈಲ್ ಅವರು ಮನಃಶಾಸ್ತ್ರದ ಭೌತಿಕ ವ್ಯಾಖ್ಯಾನದ ಆಧಾರದ ಮೇಲೆ ಬೋಧನಾ ವಿಧಾನಗಳು ಹೇಗಿರಬೇಕೆಂಬುದರ ಬಗ್ಗೆ ತಮ್ಮ ಸಲಹೆಗಳನ್ನು ನೀಡುತ್ತಾರೆ. "ಮನಸ್ಸು ಸಹ ಭೌತಿಕ ಜಗತ್ತಿಗೇ ಸೇರಿದ್ದು ಎಂಬುದನ್ನು, ಯೋಚನೆ ಮಾಡಲು ತಯಾರಿರುವವರೆಲ್ಲರೂ ಒಪ್ಪಿಕೊಳ್ಳುವುದರಿಂದ, ತರುಣರಿಗೆ ಶಿಕ್ಷಣ ನೀಡಲು ಅಗತ್ಯವಾದ ಒಂದು ಹೊಸದಾದ ಶಿಕ್ಷಣ ಪದ್ಧತಿಯು ವಿಕಸನಗೊಳ್ಳುತ್ತಾ ಹೋಗುತ್ತದೆ." ಅರ್ಥಹೀನ ಪುನರಾವರ್ತನೆ ಮತ್ತು ಮೂಢನಂಬಿಕೆಯ ಜಾಗದಲ್ಲಿ ಮುಕ್ತ ಚರ್ಚೆ ಮತ್ತು ಧನಾತ್ಮಕವಾದ ನೈತಿಕತೆಯನ್ನು ಬರೇ ಉಪದೇಶ ಮಾಡದೆ ಆಚರಿಸಿ ತೋರಿಸಬೇಕು. ಕಾರ್ಲೈಲ್ ಅವರು ಇಲ್ಲಿ ಮತ್ತೊಮ್ಮೆ ಧಾರ್ಮಿಕ ತತ್ತ್ವ ಹಾಗೂ ಆಚರಣೆಯನ್ನು ತಿರಸ್ಕರಿಸುತ್ತಾರೆ. "ವೈಜ್ಞಾನಿಕ ಹುಡುಕಾಟ ಮತ್ತು ವೈಜ್ಞಾನಿಕ ಶಿಕ್ಷಣವು ಸಹಜವಾಗಿಯೇ ನೈತಿಕ ಸದ್ಗುಣಗಳಿಗೆ ವಿಸ್ತರಿಸಿಕೊಳ್ಳಬೇಕು" ಎಂದು ಅವರು ಪ್ರತಿಪಾದಿಸುತ್ತಾರೆ. ಎಲ್ಲಿಯವರೆಗೂ ಮಕ್ಕಳಿಗೆ ಈ ಜೀವನ ಎಂಬುದು ಸಾವಿನ ಅನಂತರದ ಜೀವನಕ್ಕೆ ಸಿದ್ಧತಾ ಅವಧಿ ಎಂದು ನಾವು ಬೋಧಿಸುತ್ತೇವೆಯೋ ಅಲ್ಲಿಯವರೆಗೂ ಅವರ, "ಮನಸ್ಸು ನಿಸರ್ಗದ ಆಹ್ಲಾದಕರ ಸುಂದರ ನೋಟದ ವಿಸ್ತಾರವನ್ನು ಗ್ರಹಿಸಲಾರದು. ಈ ಜೀವನವಲ್ಲದೆ ಬೇರೆ ಜೀವನವು ಇಲ್ಲದಿರುವುದರಿಂದ, ಅದನ್ನು ಸಂತಸದ ದೃಶ್ಯವನ್ನಾಗಿ ಪರಿವರ್ತಿಸಲು, ಮನಸ್ಸಿನಿಂದ ಪುರೋಹಿತರು ಕಲಿಸಿರುವ ಎಲ್ಲ ಕರ್ಮಠ ಸಿದ್ಧಾಂತಗಳನ್ನು ಹೊರಗಟ್ಟಬೇಕು." ಆ ಜಾಗದಲ್ಲಿ "ನಿಸರ್ಗ ಮತ್ತು ಅದರ ನಿಯಮಗಳ ಅಧ್ಯಯನವನ್ನು" ಸೇರಿಸಬೇಕು ಮತ್ತು ಅದು ಮಾತ್ರವೇ ``ದೃಢವಾದ ನಂಬಿಕೆ ಅಥವಾ ಧರ್ಮ" ಆಗಬೇಕು.[೬೪]

ಆದ್ದರಿಂದಲೇ ಜ್ಞಾನ ಮತ್ತು ಸ್ವಾತಂತ್ರ್ಯ ಎರಡಕ್ಕೂ ವಿಜ್ಞಾನವೇ ಕೀಲಿಕೈ. ಎಂದರೆ ಯಾರೋ ಹೇರುವ ನಂಬಿಕೆಗಳನ್ನು ತೊರೆದು ತನ್ನದೇ ಆದ ನೀತಿಯ ಪರಿಕಲ್ಪನೆಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯ ಸಹ. "ಮನುಷ್ಯನು ಅಜ್ಞಾನ ಮತ್ತು ಪೆದ್ದುತನದಲ್ಲಿ ಸಂತೋಷಪಡುವುದಿಲ್ಲ. ಅದರಿಂದ ಬಿಡುಗಡೆ ಹೊಂದಬೇಕೆಂಬುದೇ ಅವನ ಸಹಜ ಬಯಕೆ. ಎಲ್ಲ ದಮನಕಾರಿ ಆಡಳಿತ, ದಬ್ಬಾಳಿಕೆ ಮತ್ತು ಭ್ರಮೆಗಳನ್ನು ಮನುಕುಲದ ಮೌಢ್ಯ ಮತ್ತು ಅಜ್ಞಾನದ ಬುನಾದಿಯ ಮೇಲೆ ಕಟ್ಟಲಾಗಿದೆ. ಜ್ಞಾನ, ವೈಜ್ಞಾನಿಕ ಜ್ಞಾನವೇ ಇದನ್ನು ಎದುರಿಸಬಲ್ಲ ಶಕ್ತಿ."[೬೫] ``ಆದ್ದರಿಂದ ಪ್ರತಿಯೊಬ್ಬ ಶಾಲಾಶಿಕ್ಷಕನೂ ವಿಜ್ಞಾನದ ವ್ಯಕ್ತಿಯಾಗಬೇಕೇ ಹೊರತು ಶ್ರೀಮಾನ್ ಬ್ರೌಘಾಮ್ ಅವರು ಅಪೇಕ್ಷಿಸಿದಂತೆ ಚರ್ಚಿನ ಪಾದ್ರಿಯಾಗಬಾರದು."[೬೬]

ತಮ್ಮ ಪ್ರತಿಪಾದನೆಯನ್ನು ಪರಿಸಮಾಪ್ತಿಗೊಳಿಸುತ್ತಾ ಕಾರ್ಲೈಲ್ ಹೇಳುತ್ತಾರೆ "ನಮ್ಮ ತರುಣರು ಈ ಆಧಾರದಲ್ಲಿ ಶಿಕ್ಷಿತರಾಗಲಿ, ವಯಸ್ಕರು ಸಹ ಇದೇ ಮಾದರಿಯಲ್ಲಿ ಪುನರ್‌ಶಿಕ್ಷಿತರಾಗಲಿ. ಹೀಗಾದಾಗ ನಾವು ಮನುಕುಲವು ಸೂಕ್ತವಾದ ಚಾರಿತ್ರ್ಯವನ್ನು ಗಳಿಸಿಕೊಂಡದ್ದನ್ನು ಕಾಣುತ್ತೇವೆ. ಆ ಚಾರಿತ್ರ್ಯವು ಈಗ ನಾವು ಕಾಣುತ್ತಿರುವುದಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಅವರ ನಡುವೆ ಪ್ರಾತಿನಿಧಿಕ ಸರ್ಕಾರ ಮಾತ್ರವೇ ಅವಶ್ಯವಾದ ಮಾದರಿಯ ಸರ್ಕಾರವಾಗಿರುತ್ತದೆ ಮತ್ತು ಶಾಸನಬದ್ಧ ಆಡಳಿತದ ಮುಖ್ಯ ಕಾರ್ಯವು ವಿಜ್ಞಾನ ಮತ್ತು ಕಲೆಯನ್ನು ಅಭಿವೃದ್ಧಿಗೊಳಿಸುವುದೇ ಆಗುತ್ತದೆ.''[೬೭]

ಹೀಗೆ ಕಡೆಗೂ ಜ್ಞಾನೋದಯ ಶಿಕ್ಷಣವನ್ನು ಕುರಿತ ಬೇಡಿಕೆಯು ಅದಕ್ಕಾಗಿ ಸಂಸತ್ತಿನಲ್ಲಿ ಸುಧಾರಣೆಯನ್ನು ಜಾರಿಗೊಳಿಸುವ ಕರ್ತವ್ಯದೊಂದಿಗೆ ಅವಿಚ್ಛಿನ್ನವಾಗಿ ಬೆಸೆದುಕೊಂಡಿತು ಮತ್ತು ಇದು ಮುಂದಿನ ವರ್ಷಗಳಲ್ಲಿ ಜನಪ್ರಿಯ ಚಳವಳಿಗಳ ಆಸಕ್ತಿಯನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸಿತು.

## iv. ಜ್ಞಾನ ಪ್ರಸಾರವನ್ನು ಕುರಿತು ವಿಲಿಯಂ ಥಾಂಪ್ಸನ್

ಒಂದು ನ್ಯಾಯಯುತ ಸಮಾಜವನ್ನು ಸ್ಥಾಪಿಸಲು ವೈಜ್ಞಾನಿಕ ಶಿಕ್ಷಣ ಅಗತ್ಯ ಎಂದು ಕಾರ್ಲೈಲ್ ಅವರು ಭಾವಿಸಿದ ಹಾಗೆಯೇ, ಸಹಕಾರದ ಮೂಲಕ ಸಮಾಜವನ್ನು ಬದಲಾಯಿಸಬಹುದು ಎಂಬ ತಮ್ಮ ಯೋಜನೆಯಲ್ಲಿ ವಿಲಿಯಂ ಥಾಂಪ್ಸನ್‌ರು ಶಿಕ್ಷಣಕ್ಕೆ ಕೇಂದ್ರ ಸ್ಥಾನವನ್ನು ನೀಡಿದರು. ಕಾರ್ಮಿಕ ವರ್ಗದ ಚಿಂತನೆಯು ಹರಳುಗಟ್ಟುತ್ತಿದ್ದ ೧೮೨೦ರ ದಶಕದ ಕೊನೆಯಭಾಗ ಮತ್ತು ೧೮೩೦ರ ದಶಕದ ಮೊದಲಭಾಗದಲ್ಲಿ ಆ ಒಂದು ಪ್ರಕ್ರಿಯೆಯ ಮೇಲೆ ಥಾಂಪ್ಸನ್‌ರವರ ಬರಹಗಳು ಮತ್ತು ಭಾಷಣಗಳು ಗಣನೀಯವಾದ ಪ್ರಭಾವವನ್ನೇ ಉಂಟುಮಾಡಿದವು. ಸಾಂಪ್ರದಾಯಿಕ ರಾಜಕೀಯ ಅರ್ಥಶಾಸ್ತ್ರಕ್ಕೆ ನೇರವಾಗಿ ಸೆಡ್ಡು ಹೊಡೆದ "ಮಾನವನ ಸುಖಸಮೃದ್ಧಿಗೆ ಅತ್ಯಂತ ಸಹಾಯಕವಾದ ಸಂಪತ್ತಿನ ಹಂಚಿಕೆಯ ತತ್ತ್ವಗಳನ್ನು ಕುರಿತು ಒಂದು ವಿಶ್ಲೇಷಣೆ" (ಎನ್‌ಕ್ವಯಿರಿ ಇನ್‌ಟು ದಿ ಪ್ರಿನ್ಸಿಪಲ್ಸ್ ಆಫ್ ದ ಡಿಸ್ಟ್ರಿಬ್ಯೂಶನ್ ಆಫ್ ವೆಲ್ತ್ ಮೋಸ್ಟ್ ಕಂಡ್ಯೂಸಿವ್ ಟು ಹ್ಯೂಮನ್ ಹ್ಯಾಪಿನೆಸ್" (೧೮೨೪) ಎಂಬ ಹೊತ್ತಗೆಯು ಪ್ರಭಾವಶಾಲಿಯಾಗಿತ್ತು, ಅದಾದ ಮೇಲೆ ೧೮೨೫ರಲ್ಲಿ ಮಹಿಳಾ ಹಕ್ಕುಗಳ ಪರವಾಗಿ ವಾದಿಸಿದ ಅವರ "ಮನುಕುಲದ ಅರ್ಧಭಾಗಕ್ಕೆ ಮನವಿ" (ಆ್ಯನ್ ಅಪೀಲ್ ಟು ಒನ್ ಹಾಫ್ ಆಫ್ ದಿ ಹ್ಯೂಮನ್ ರೇಸ್), ೧೮೨೭ರಲ್ಲಿ ಸಹಕಾರಿ ಉತ್ಪಾದನೆ ಮತ್ತು ವಿತರಣೆಯ ಆಧಾರದ ಮೇಲೆ ರಚಿತವಾದ ಹೊಸ ಸಮಾಜವನ್ನು ಸೃಷ್ಟಿಸಲು ಟ್ರೇಡ್ ಯೂನಿಯನ್‌ಗಳ ಮಹತ್ತ್ವಕ್ಕೆ ಒತ್ತು ನೀಡಿದ "ಶ್ರಮಕ್ಕೆ ಪ್ರತಿಫಲ" (ಲೇಬರ್ ರಿವಾರ್ಡೆಡ್) ಪುಸ್ತಕಗಳು ಹೊರಬಂದವು. ಕಡೆಯದಾಗಿ ಅವರು "ಸಮುದಾಯಗಳನ್ನು ಸ್ಥಾಪಿಸಲು ಪ್ರಾಯೋಗಿಕ ಸಲಹೆಗಳು" (ಪ್ರಾಕ್ಟಿಕಲ್ ಡೈರೆಕ್ಷನ್ ಫಾರ್ ದಿ ಎಸ್ಟಾಬ್ಲಿಶ್‌ಮೆಂಟ್ ಆಫ್ ಕಮ್ಯೂನಿಟೀಸ್) ಎಂಬ

ಪುಸ್ತಕವನ್ನು ಬರೆದರು. ಇದರಲ್ಲಿ ಅವರು ಸಹಕಾರ ಆಧಾರಿತ ಸಮಾಜಗಳನ್ನು ಸೃಷ್ಟಿಸಲು, ಅವುಗಳ ಆರಂಭದ ಹಂತದಲ್ಲಿ ಮಹತ್ವದ ಮಾರ್ಗದರ್ಶನ ನೀಡಿದ್ದ ಓವೆನ್‌ರವರಿಗಿಂತಲೂ ಹೆಚ್ಚು ಸ್ಪಷ್ಟವಾದ, ಮೂರ್ತವಾದ ನಿರ್ದೇಶನಗಳನ್ನು ನೀಡಿದರು.[೬೮]

೧೭೭೫ರಲ್ಲಿ ಐರ್‌ಲೆಂಡ್‌ನಲ್ಲಿ ಜನಿಸಿದ ವಿಲಿಯಂ ಥಾಂಪ್‌ಸನ್‌ರವರು ಪ್ರಾರಂಭದಲ್ಲಿ ಬೆಂಥಾಮ್‌ರವರ ಅನುಯಾಯಿಯಾಗಿದ್ದರು. ಆಗ ಅವರ ಆಸಕ್ತಿಯನ್ನು ಕೆರಳಿಸಿದ್ದ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಯನ್ನು ಅಭ್ಯಾಸಮಾಡಲು ಅವರು ೧೮೨೨ರಲ್ಲಿ ಇಂಗ್ಲೆಂಡಿಗೆ ಬಂದರು. ತಮ್ಮ "ಎನ್‌ಕ್ವಯಿರಿ" (ಹುಡುಕಾಟ) ಪುಸ್ತಕದಲ್ಲಿ ಅವರು ಬೆಂಥಾಮ್‌ರ ಚಿಂತನೆಯಿಂದ ಸಮಾಜವಾದದ ಕಡೆಗೆ ಪಯಣ ಮಾಡುತ್ತಾರೆ. ಅದರಲ್ಲಿ ಅವರು ಶಿಕ್ಷಣಕ್ಕೆ ಒಂದು ದೀರ್ಘ ಅಧ್ಯಾಯವನ್ನೇ ಮೀಸಲಿಟ್ಟಿದ್ದಾರೆ.

ರಾಬರ್ಟ್ ಓವೆನ್ ಮತ್ತು ಹಾಡ್ಜ್ ಸ್ಕಿನ್‌ರಂತೆಯೇ ಥಾಂಪ್‌ಸನ್‌ರವರು ಕಾರ್ಮಿಕನಿಗೆ ತಾನು ಉತ್ಪಾದಿಸಿದ ಸರಕಿನ ಸಂಪೂರ್ಣ ಮೌಲ್ಯದ ಮೇಲೆ ಹಕ್ಕಿದೆ ಎಂದು ಪ್ರತಿಪಾದಿಸಿದರು. ಆದರೆ ಅವನಿಂದ ಅದನ್ನು ಕಸಿದುಕೊಳ್ಳಲಾಗಿದೆ ಎಂದು ಅವರು ವಾದಿಸಿದರು. ಆದರೆ ಅವರು ಸಹಕಾರಿ ಸಮುದಾಯಗಳನ್ನು ಸತತವಾಗಿ ವಿಸ್ತರಿಸುವ ಒಂದು ನ್ಯಾಯಯುತ ಸಮಾಜವನ್ನು ಕಟ್ಟಬಹುದು ಎಂಬ ಓವೆನ್‌ರವರ ಆದರ್ಶ ರಾಜ್ಯದ ಪರಿಕಲ್ಪನೆಯನ್ನು ಮೀರಿ ಮುನ್ನಡೆದರು. 'ವಿತರಣೆಯ ಸಹಜ ನಿಯಮ'ಗಳನ್ನು ಅನುಸರಿಸಿದಲ್ಲಿ ಅದು ಒಂದು ವಿಚಾರಯುಕ್ತ ಸಮಾಜಕ್ಕೆ, ಅತ್ಯುನ್ನತ ಸಂತೋಷಕ್ಕೆ ಕಾರಣವಾಗುತ್ತದೆ ಎಂದು ಅವರು ತಮ್ಮ 'ಎನ್‌ಕ್ವಯರಿ' ಪುಸ್ತಕದಲ್ಲಿ ಪ್ರತಿಪಾದಿಸಿದರು. ಇಂಥದೊಂದು ಸಾಮಾಜಿಕ ವ್ಯವಸ್ಥೆಯನ್ನು ಸಹಕಾರ ತತ್ತ್ವಗಳ ಮೇಲೆ ಸ್ಥಾಪಿಸಬಹುದು ಆದರೆ ಇದು ಸಾಧ್ಯವಾಗುವುದು ಇದರೊಂದಿಗೆ ರಾಜ್ಯಾಧಿಕಾರವನ್ನೂ ಪಡೆದುಕೊಂಡಾಗ ಮಾತ್ರ ಎಂದು ಅವರು ವಾದಿಸಿದರು. 'ತಮ್ಮ ಶ್ರಮದ ಇಡಿಯ ಪ್ರತಿಫಲವನ್ನು ತಾವೇ ಪಡೆದುಕೊಳ್ಳುವ ಕನಸು ಈಡೇರುವ ಮೊದಲು ಕಾರ್ಮಿಕರು ತಮ್ಮ ಶ್ರಮವನ್ನು ಬೃಹತ್ ಪ್ರಮಾಣದಲ್ಲಿ, ಒಗ್ಗಟ್ಟಿನಿಂದ ಸಂಘಟಿಸಿಕೊಳ್ಳಲು ಅಗತ್ಯವಾದ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು, ಮತ್ತು ಈ ಅರ್ಥದಲ್ಲಿ "ಕಾರ್ಮಿಕರು ಬಂಡವಾಳಗಾರರಾಗಬೇಕು" ಎಂದು ಅವರು ತಮ್ಮ "ಲೇಬರ್ ರಿವಾರ್ಡೆಡ್" ಪುಸ್ತಕದಲ್ಲಿ ಹೇಳಿದರು. "ದುಡಿಯುವ ವರ್ಗಗಳು ಜ್ಞಾನದೊಂದಿಗೆ ಅಧಿಕಾರವನ್ನು ಗಳಿಸಿಕೊಳ್ಳಬೇಕು, ಇಡೀ ಸಾಮಾಜಿಕ ಯಂತ್ರದ ಅಧಿಕಾರವನ್ನು ತಮ್ಮ ಕೈಗೆತ್ತಿಕೊಳ್ಳಬೇಕು, ತನ್ಮೂಲಕ ರಾಷ್ಟ್ರಮಟ್ಟದಲ್ಲಿ ಕೂಡಲೇ ಎಲ್ಲರ ಪಕ್ಷಪಾತರಹಿತವಾದ, ಸಮಾನವಾದ ಸೌಖ್ಯವನ್ನು ಸ್ಥಾಪಿಸಲು ತಮ್ಮ ಜ್ಞಾನವನ್ನು ವಿನಿಯೋಗಿಸಬೇಕು."[೬೯]

ಜ್ಞಾನದ ಸಂಗ್ರಹಣೆ ಮತ್ತು ಪ್ರಸರಣೆಯ ಮೂಲಕ ಸಹಕಾರಿ ಸಮಾಜದಲ್ಲಿ ವಿತರಣೆಯ ಸಹಜ ನಿಯಮಗಳನ್ನು ಶಾಶ್ವತವಾಗಿ

ಭದ್ರಪಡಿಸಬೇಕು. ಮೊದಲಿಗೆ ಉತ್ಪಾದನೆಯಲ್ಲಿ ಒಂದಾಗಿಯೇ ಇದ್ದ ಜ್ಞಾನ ಮತ್ತು ಶ್ರಮಗಳು ಅನಂತರ ಬೇರೆಯಾಗಿದ್ದು ಈಗ ಮತ್ತೊಮ್ಮೆ ಐಕ್ಯಗೊಳ್ಳುವುದರಿಂದ ಇದು ಸಾಧ್ಯವಾಗುತ್ತದೆ. ಸಹಕಾರಿ ಉತ್ಪಾದನೆಯಲ್ಲಿ ಜ್ಞಾನವು ಶ್ರಮಕ್ಕೆ ವಿರುದ್ಧವಾಗಿ ನಿಲ್ಲುವುದಿಲ್ಲ; "ತನ್ನ ನಿಧಿಯ ಭಂಡಾರವನ್ನು ಅದು ಕಾರ್ಮಿಕರಿಂದ ಮುಚ್ಚಿಡುವುದಿಲ್ಲ, ಅವರಲ್ಲಿ ಭ್ರಮೆಯನ್ನು ಸೃಷ್ಟಿಸುವುದಿಲ್ಲ", ದಾರಿತಪ್ಪಿಸುವುದಿಲ್ಲ, "ಬದಲಿಗೆ ಮತ್ತೊಮ್ಮೆ ವಿಜ್ಞಾನದಿಂದ ಶಿಕ್ಷಿತವಾಗಿ, ಕೇವಲ ಮಾಂಸಖಂಡದ ಶಕ್ತಿಯಾಗದೆ, ಯಾಂತ್ರಿಕವಾಗದೆ, ವಿಧೇಯವಾಗದ ಶ್ರಮದೊಂದಿಗೆ ಮತ್ತೆ ಒಂದಾಗುತ್ತದೆ." ಹೀಗೆ ದೈಹಿಕ ಶ್ರಮ ಮತ್ತು ಬೌದ್ಧಿಕ ಶ್ರಮಗಳ ಮಧ್ಯದ ಭೇದವನ್ನು ಮೀರಲಾಗುತ್ತದೆ, "ಏಕೆಂದರೆ ಎಲ್ಲರ ಸೌಖ್ಯ-ಸಂತೋಷಗಳಿಗೂ ಅದು ಅಗತ್ಯ ಹಾಗೂ ಸಾಮಾಜಿಕ ಕಲೆಯ ಅಭಿವೃದ್ಧಿಗೆ, ಪ್ರಗತಿಗೆ ಇದು ಅವಶ್ಯವಾದ ಸಾಧನ", ಅಂಥ ಒಂದು ಸಮಾಜವು "ತನ್ನ ಆಧಾರಕ್ಕೆ ಅಗತ್ಯವಾದ ಜ್ಞಾನವನ್ನು ತನ್ನ ಎಲ್ಲ ಸದಸ್ಯರಿಗೂ ಹರಡುವ, ವಿಸ್ತರಿಸುತ್ತಾ ಹೋಗುವ ವಿವೇಕವನ್ನು ಹೊಂದಿರುತ್ತದೆ."[೭೦] ಅದು ಮೊದಲನೆಯದಾಗಿ ತನ್ನ ಸಾಮಾಜಿಕ ಸಂಸ್ಥೆಗಳ ಗುಣವನ್ನೇ ಬದಲಾಯಿಸುವ ಮೂಲಕ ಇದನ್ನು ಸಾಧಿಸುತ್ತದೆ ಮತ್ತು ಎರಡನೆಯದಾಗಿ ಪತ್ರಿಕೆಗಳು ಚರ್ಚೆಗಳ ಮೂಲಕ ತನ್ನ ವಯಸ್ಕ ಜನಸಮುದಾಯಕ್ಕೆ ಎಲ್ಲ ಲಭ್ಯ ಸಾಧನಗಳ ಮೂಲಕ ಸತ್ಯ, ವಿಜ್ಞಾನ ಮತ್ತು ವೈಚಾರಿಕತೆಯ ಅರಿವನ್ನು ನೀಡುತ್ತವೆ ಮತ್ತು ಅಂತಿಮವಾಗಿ ಮಕ್ಕಳಿಗೆ ಅಂತಹ ಸಮರ್ಪಕ ಶಿಕ್ಷಣವನ್ನು ಖಾತ್ರಿ ಪಡಿಸುತ್ತವೆ.

"ಭಾವನೆ ಮತ್ತು ತೀರ್ಮಾನದ ಶಕ್ತಿ (ವಿಚಾರ) ಎರಡೂ ಸಹ ಸಮಾನವಾಗಿ ಮೆದುಳಿನ ಪ್ರಕ್ರಿಯೆಗಳೇ" ಎಂಬ ಮನಸ್ಸನ್ನು ಕುರಿತ ಭೌತವಾದಿ ಧೋರಣೆಯನ್ನೇ ಥಾಂಪ್‌ಸನ್ ಎತ್ತಿ ಹಿಡಿದರು.[೭೧] ಮನುಷ್ಯನ ಗುಣಗಳನ್ನು ನಿರ್ಧರಿಸುವುದು, ರೂಪಿಸುವುದು ಶಿಕ್ಷಣ ಮತ್ತು ಪರಿಸರ ಎಂಬುದನ್ನು ಅವರು ಪೂರ್ತಿಯಾಗಿ ಅಂಗೀಕರಿಸಿದರು. ಇದಕ್ಕಾಗಿ ಅವರು ಬೆಂಥಾಮ್ ಅವರ ನೈಜ ಅನುಯಾಯಿಯಂತೆ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಾಮಾಜಿಕ ಸಂಸ್ಥೆಗಳ ಮಹತ್ತರ ಪಾತ್ರವೇನು ಎಂಬುದರ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಅವರ ಪ್ರಕಾರ ಅಂದು ಅಸ್ತಿತ್ವದಲ್ಲಿದ್ದ ಸಾಮಾಜಿಕ ಸಂಸ್ಥೆಗಳು ಸತ್ಯ, ಕಷ್ಟಸಹಿಷ್ಣುತೆ, ಆತ್ಮಸಂಯಮ, ವಿವೇಕ, ಪರೋಪಕಾರ, ಆತ್ಮಸಂಸ್ಕಾರ (ಲೂನಾರ್ ಶಿಕ್ಷಣತಜ್ಞರು ಕಲಿಸಬೇಕೆಂದು ಇಚ್ಛಿಸಿದಂಥ ಸದ್ಗುಣಗಳು) ಈ ಎಲ್ಲ ಅವಶ್ಯಕ ಮಾನವೀಯ ಗುಣಗಳನ್ನು ಬೆಳೆಸುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಬದಲಿಗೆ ಆ ಸಂಸ್ಥೆಗಳು ಮೇಲೆ ಹೇಳಿದ ಗುಣಗಳಿಗೆ ವಿರುದ್ಧವಾದದ್ದನ್ನೇ ತುಂಬುತ್ತವೆ. ಆದ್ದರಿಂದಲೇ ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ಮತ್ತು ಸರ್ಕಾರವನ್ನು ಬದಲಾಯಿಸುವುದೇ ಪ್ರಥಮ ಕರ್ತವ್ಯ. ಮತದಾನದ ಹಕ್ಕನ್ನು ಎಲ್ಲರಿಗೂ ವಿಸ್ತರಿಸುವುದೇ ``ಜ್ಞಾನ ಪ್ರಸರಣೆಯ ಕಾರ್ಯದಲ್ಲಿ ಅತ್ಯಂತ ಪ್ರಬಲ ಸಾಧನವಾಗುತ್ತದೆ; ಮತದಾನದ ಹಕ್ಕನ್ನು ಚಲಾಯಿಸುವ ಮೂಲಕ ಸಾಮಾಜಿಕ ಆಗುಹೋಗುಗಳ ಕುರಿತು ಸಮಗ್ರವಾದ

ತಿಳಿವಳಿಕೆಯನ್ನು ಗಳಿಸುವ ಸಾಮರ್ಥ್ಯವನ್ನು, ಎಂದರೆ ಮಾನವ ಗುಣಗಳಲ್ಲಿ ಅತ್ಯಂತ ಮುಖ್ಯವಾದದ್ದನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಸಾಧ್ಯವಾಗುತ್ತದೆ."

ಒಟ್ಟಿನಲ್ಲಿ ಸಾಮಾನ್ಯವಾಗಿ ಹೇಳಬೇಕೆಂದರೆ ಸರ್ಕಾರಗಳು ತಮ್ಮ ಹಿತಾಸಕ್ತಿಯಲ್ಲಿ ಮುಂದುವರಿಸಿಕೊಂಡು ಬಂದಿದ್ದ ಜನತೆಯ ಮಾನಸಿಕ ಅಂಧಕಾರವು ಕೊನೆಗೊಳ್ಳುವ ಕಾಲ ಬಂದಿದೆ ಎಂದು ಥಾಂಪ್‌ಸನ್‌ರು ಅಭಿಪ್ರಾಯಪಟ್ಟರು. ಆದರೂ, "ಈ ಅಜ್ಞಾನವನ್ನು ಮುಂದುವರಿಸಬೇಕೆಂದು ಅಭಿಪ್ರಾಯಪಡುವವರು, ಅದಕ್ಕಾಗಿ ಪ್ರಯತ್ನಿಸುವವರು ಇನ್ನೂ ಇದ್ದಾರೆ"[೨೨] ಎನ್ನುತ್ತಾರೆ. ಈ ದೀರ್ಘ ಕಾಲಾವಧಿಯಲ್ಲಿ ಜನತೆಯ ಮನಸ್ಸಿಗೆ ಯಾವುದೇ ಚಟುವಟಿಕೆ ಇಲ್ಲದೆ ಅದು ಮರಗಟ್ಟಿಹೋಗಿದೆ. ಅವರಿಗೆ ಯಾರೂ ಪ್ರಶ್ನಿಸುವುದನ್ನು, ಸಂಶಯಿಸುವುದನ್ನು ಹೇಳಿಕೊಡಲಿಲ್ಲ. ಅವರ ಬಡತನದಿಂದಾಗಿ ಅವರಿಗೆ ಜ್ಞಾನವು ನಿರಾಕರಿಸಲ್ಪಟ್ಟಿತ್ತು. ಮುಕ್ತ ಚರ್ಚೆಯನ್ನು ತುಳಿದುಹಾಕಲಾಗಿತ್ತು. ಆದರೆ ಈಗ ವಿಚಾರ ಮಾಡುವ ಶಕ್ತಿ ಮತ್ತು ಜ್ಞಾನಾರ್ಜನೆ ಹೆಚ್ಚು ಹಬ್ಬುತ್ತಿದೆ. ಎಲ್ಲೆಡೆ ಜನತೆ, "ಹಿಂಸೆಯನ್ನು ರಕ್ತಪಾತವನ್ನು ಎದುರಿಸಲು ಸಿದ್ಧರಿದ್ದಾರೆ. ಧಾರ್ಮಿಕ-ರಾಜಕೀಯ-ಕಾನೂನಾತ್ಮಕ ಕಿರುಕುಳವನ್ನು ಎದುರಿಸಿಯಾದರೂ ನೈತಿಕ ವಿಜ್ಞಾನವು ಪ್ರಕೃತಿ ವಿಜ್ಞಾನದಂತೆ ನಿಶ್ಶಂಖಲವಾಗಬೇಕು ಎಂದು ಬಯಸುತ್ತಾರೆ, ವಿಚಾರದ ತೀವ್ರ ರಾಜಿರಹಿತ ಪರೀಕ್ಷೆಗೆ ಒಳಪಡಲಾಗದ್ದು ಎನ್ನುವಂಥದ್ದು ಯಾವುದೂ ಇರಬಾರದು ಎಂದು ಬಯಸುತ್ತಾರೆ, ಉಪಯುಕ್ತ ಅಲ್ಲ ಎನಿಸುವಂಥ ಯಾವುದೇ ಸಂಸ್ಥೆಗೆ, ಅದು ಹೊಸದಾಗಲಿ ಅಥವಾ ಹಳೆಯದಾಗಲಿ ಅದಕ್ಕೆ ಬೆಂಬಲ ಸಿಗಬಾರದು ಎಂದು ಬಯಸುತ್ತಾರೆ."[೨೩] ಇನ್ನೂ ಅನೇಕ ಅಡೆತಡೆಗಳಿವೆ. ಅವುಗಳನ್ನು ನಿವಾರಿಸಿಕೊಳ್ಳಬೇಕಿದೆ. ಉದಾಹರಣೆಗೆ, ಜ್ಞಾನದ ಮೇಲಿನ ತೆರಿಗೆ, ಪುಸ್ತಕ ಮತ್ತು ರಾಜಕೀಯ ಪ್ರಕಾಶನದ ಮೇಲಿನ ನಿರ್ಬಂಧ ಇತ್ಯಾದಿ. ಆದರೆ ಇವೆಲ್ಲವನ್ನು ಗುಡಿಸಿ ಪಕ್ಕಕ್ಕೆ ಬಿಸಾಡಲಾಗುತ್ತದೆ. ಮನುಷ್ಯನು "ಕೇವಲ ಸತ್ಯವನ್ನು ಶಿಕ್ಷಣದಲ್ಲಿ ಕಲಿಯುವುದು, ಜ್ಞಾನವು ರುಜುವಾತಿನ ಮೇಲೆ ಮಾತ್ರ ಆಧಾರಿತವಾಗಿದ್ದು ಯಾವುದೇ ಪೂರ್ವ ನಿರ್ಧಾರಿತ ಪಕ್ಷಪಾತ ಅಥವಾ ಅಭಿಪ್ರಾಯಗಳಿಂದ ಮುಕ್ತವಾಗಿರುವುದು" ಇಂಥದ್ದನ್ನು ಮಾತ್ರ ಜನತೆಯ ಶಿಕ್ಷಣ ಎನ್ನುವ ಕಾಲ ದೂರವಿಲ್ಲ. ಒಮ್ಮೆ ಇದನ್ನು ಸಾಧಿಸಲಾದರೆ, ವಯಸ್ಕರ ಶಿಕ್ಷಣವು ಎಷ್ಟೊಂದು ವೇಗವಾಗಿರುತ್ತದೆ, ಅದರ ಪ್ರಭಾವ ಎಷ್ಟು ಪ್ರಗಾಢವಾಗಿರುತ್ತದೆ, ವಿಸ್ತಾರವಾಗಿರುತ್ತದೆ ಎಂಬುದನ್ನು ನಾವು ಈಗ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ.[೨೪]

ಕಾರ್ಲೈಲ್ ಮತ್ತು ಓವೆನ್ ಅವರಂತೆಯೇ ಥಾಂಪ್‌ಸನ್ ಅವರೂ ಸಹ ಅಸ್ತಿತ್ವದಲ್ಲಿದ್ದ ಶಾಲೆಗಳ, ಅವು ಬಡವರ ಶಾಲೆಗಳೇ ಆಗಲಿ ಶ್ರೀಮಂತರ ಶಾಲೆಗಳೇ ಆಗಿರಲಿ- ಉಗ್ರ ಟೀಕಾಕಾರರಾಗಿದ್ದರು, ಶ್ರೀಮಂತರ ಶಾಲೆಗಳಲ್ಲಿ ಸಹ ಬೌದ್ಧಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಿಕೊಳ್ಳುವಂಥ ಪ್ರಗತಿಯೇನೂ

ಆಗಿರಲಿಲ್ಲ. ಕಾರಣವೇನೆಂದರೆ ಭೌತಿಕ ಜಗತ್ತಿನ ಬಗ್ಗೆಯೇ ಆಗಲೀ ನೈತಿಕತೆಯ ಬಗ್ಗೆಯೇ ಆಗಲೀ ನಿಜವಾದ ಜ್ಞಾನ ಬೆಳೆದಿರಲಿಲ್ಲ. ಎರಡನೆಯದಾಗಿ ಜ್ಞಾನದ ಸಂವಹನದ ಬಗ್ಗೆ ಸಹ ಸೂಕ್ತವಾದ ತಿಳಿವಳಿಕೆ ಇರಲಿಲ್ಲ. ಆದ್ದರಿಂದ ಶಾಲೆಗಳಲ್ಲಿ ಕಲಿಸುತ್ತಿದ್ದದ್ದು ಅಥವಾ ಕಲಿಸುತ್ತೇವೆಂದು ಹೇಳಿಕೊಳ್ಳುತ್ತಿದ್ದದ್ದು ಕೇವಲ ಜೊಳ್ಳಾದ ಶಬ್ದಗಳು, ಕೆಲಸಕ್ಕೆ ಬಾರದ ಒಣಪಾಂಡಿತ್ಯ, ಟೊಳ್ಳಾದ ಉಪದೇಶ, ಉದ್ದೇಶ ಉತ್ತಮವಿದ್ದಾಗಲೂ ಏನನ್ನೂ ಸೃಷ್ಟಿಸಲಾಗದ ನಿರ್ವೀರ್ಯವಾದಂಥವು.[೭೫]

ಸಾಮಾನ್ಯವಾಗಿ ಶಿಕ್ಷಣದಲ್ಲಿ ಗಮನಾರ್ಹವಾದದ್ದೇನನ್ನೂ ಸಾಧಿಸಲಾಗಿರಲಿಲ್ಲ. ಅಲ್ಲಿ ಗಮನವಿರುತ್ತಿದ್ದುದೆಲ್ಲ "ತಮ್ಮ ಶಿಕ್ಷಣಕ್ಕೆ ತಾವೇ ಹಣ ತೆರಲು ಸಿದ್ಧರಾಗಿದ್ದ ಸವಲತ್ತುಳ್ಳ ಜನರ ಹಿತಾಸಕ್ತಿಯ ಬಗ್ಗೆ ಮಾತ್ರ." "ಕೆಲವೊಂದು ನಿಗದಿಯಾದ ಅಭಿಪ್ರಾಯಗಳು ಹಾಗೂ ಸಂಸ್ಥೆಗಳನ್ನು ಬೆಂಬಲಿಸುವುದೇ" ಉದ್ದೇಶವಾಗಿರುವ ವಿಶ್ವವಿದ್ಯಾಲಯಗಳಿಂದ ಶೇಕಡ ತೊಂಬತ್ತೊಂಬತ್ತು ಜನರನ್ನು ಹೊರಗಿರಿಸಲಾಗಿತ್ತು. ಅಲ್ಲಿ "ಎಲ್ಲ ಪ್ರಶ್ನಿಸುವ, ಪರೀಕ್ಷಿಸುವ ಪ್ರಯತ್ನಗಳನ್ನು ದುರ್ವರ್ತನೆ ಎಂದು ಪರಿಗಣಿಸಿ ಅದಕ್ಕೆ ಭಯಂಕರವಾದ ಪ್ರತಿಕ್ರಿಯೆ, ಶಿಕ್ಷೆ ಕಾದಿರುತ್ತಿತ್ತು." "ಒಟ್ಟಿನಲ್ಲಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಿಜಕ್ಕೂ ಉತ್ಪಾದಕ ವರ್ಗಗಳ ದುಡಿತದ ಫಲವಾಗಿ ಅನುತ್ಪಾದಕ ಜನರನ್ನು ಸಿದ್ಧಪಡಿಸುವುದು, ಅವರಂಥವರನ್ನು ತಯಾರು ಮಾಡಿದ ಹಳೆಯ ಸಂಸ್ಥೆಗಳನ್ನು, ಅವು ಎಷ್ಟೇ ದ್ವೇಷಾರ್ಹವಾಗಿರಲಿ ಅವುಗಳನ್ನು ರಕ್ಷಿಸಬಲ್ಲ ಆಸಕ್ತ, ಉತ್ಸಾಹಿ ಯಂತ್ರಗಳ ಪಡೆಯನ್ನು ನಿರ್ಮಿಸುವುದು, ಯಾವುದೇ ನಿಜವಾದ ಅಥವಾ ನಿಜವೆಂದು ಭಾವಿಸಿದ ಅಲ್ಪಸ್ವಲ್ಪ ವಾಸ್ತವ ಜ್ಞಾನದ ಮೇಲೆ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿ, ಅದರಿಂದ ಜನಸಾಮಾನ್ಯರನ್ನು ದೂರವಿರಿಸಿ ತುಳಿದಿಡುವುದು"[೭೬] ವಿಶ್ವವಿದ್ಯಾಲಯಗಳ ಗುಣವಾಗಿತ್ತು.

ವಿಶ್ವವಿದ್ಯಾನಿಲಯಗಳು ಇಡಿಯ ಸಮಾಜಕ್ಕೆ ಉಪಯುಕ್ತವಾಗಬೇಕು ಎಂಬ ಪ್ರತಿಪಾದನೆಯನ್ನು ಥಾಂಪ್‌ಸನ್ ಮುಂದಿಡುತ್ತಾರೆ. ಇದಲ್ಲದೆ ವಿಶಾಲ ಜನಸಮುದಾಯಕ್ಕೆ ಶಿಕ್ಷಣ ಸಿಗಬೇಕು. ಆದರೆ ಈಗ ಅಂಗೀಕೃತವಾಗಿರುವ ಸಾರ್ವತ್ರಿಕ ಶಿಕ್ಷಣದ ವಿಧಾನಗಳಿಂದಲ್ಲ. ಶಿಕ್ಷಣವನ್ನು ಪ್ರಸರಿಸುವುದೇ 'ಒಂದು ಭಯಾನಕ ಕೆಡಕು' ಎಂದು ಅಸ್ತಿತ್ವದಲ್ಲಿದ್ದ ಸಂಸ್ಥೆಗಳನ್ನು ರಕ್ಷಿಸಲು ಯತ್ನಿಸುತ್ತಿದ್ದವರು ಬಹಳ ಕಾಲ ವಿರೋಧಿಸುತ್ತಿದ್ದುದನ್ನು ಕುರಿತು ಚರ್ಚಿಸುತ್ತಾ ಥಾಂಪ್‌ಸನ್ ಅವರು ಬೆಲ್ ಮತ್ತು ಲ್ಯಾಂಕಾಸ್ಟರ್ ವಿಧಾನದ ಶಾಲೆಗಳನ್ನು (ಜಾಣ ವಿದ್ಯಾರ್ಥಿಗಳಿಂದ ಉಳಿದವರಿಗೆ ಪಾಠ ಹೇಳಿಸುವ ವಿಧಾನದ ಶಾಲೆ) ತೀವ್ರವಾಗಿ ವಿರೋಧಿಸುತ್ತಾರೆ.

"ಈ ಶಾಲೆಗಳು ಏಕೆ ವಿಫಲವಾದವೆಂಬುದು ಸ್ವಯಂವೇದ್ಯ. ಇದು ಒಳಿತನ್ನು ಸಾಧಿಸಬಲ್ಲ ದಿವ್ಯಾಸ್ತ್ರ ಎಂಬಂತೆ ಇದರ ಪ್ರತಿಪಾದಕರು ವಿಪರೀತ ಆಶಾವಾದಿಗಳಾಗಿದ್ದರು. ಅವರಲ್ಲಿ ಅನೇಕರು ಈ ಅಸ್ತ್ರವನ್ನು ಚೆನ್ನಾಗಿ

ಉಪಯೋಗಿಸಿಕೊಳ್ಳಬೇಕೆಂದು ವಿಪರೀತ ಉತ್ಸಾಹಿಗಳಾಗಿದ್ದರು. ಯಾವುದೇ ಪೂರ್ವಾಪರ ಯೋಚನೆ ಇಲ್ಲದೆ ನೈತಿಕತೆಯನ್ನು ಕುರಿತ ತಮ್ಮ ವಿಚಿತ್ರ ಅಭಿಪ್ರಾಯಗಳನ್ನು ಪ್ರಸರಿಸಲು ಉತ್ಸುಕರಾಗಿದ್ದರು. ಅದರಲ್ಲೂ ಆಧ್ಯಾತ್ಮಿಕ ವಿಷಯಗಳನ್ನು ಪ್ರಚಾರ ಮಾಡುವುದಕ್ಕೆ ಅವರಾಗಲೀ ಅವರ ವಿರುದ್ಧ ಬಣದವರಾಗಲೀ ಉತ್ಸಾಹಿಗಳಾಗಿದ್ದರು. ಆದ್ದರಿಂದ ಸತ್ಯವೋ ಸುಳ್ಳೋ ಅಂತೂ ಮಕ್ಕಳ ತಲೆಗೆ ಭೈರಿಗೆ ಕೊರೆಯುವ ಯಂತ್ರವೇ ಶಿಕ್ಷಣ ಎಂದು ಭಾವಿಸಿ ಅದರ ಮೇಲೆ ಯಜಮಾನಿಕೆ ಸಾಧಿಸಲು ಸ್ಪರ್ಧೆ ನಡೆದಿತ್ತು. ಅವರ ಉದ್ಧಾರಕ್ಕಾಗಿ ಶಿಕ್ಷಣವನ್ನು ಒದಗಿಸಬೇಕೆಂಬುದು ಉದ್ದೇಶವಾಗಿರಲಿಲ್ಲ, ಉಪಯೋಗವಿಲ್ಲದ ಯಾವುದೋ ಕರ್ಮಠ ಸಿದ್ಧಾಂತಕ್ಕೆ ಪಕ್ಷಪಾತಿಗಳನ್ನು ತಯಾರು ಮಾಡುವುದಷ್ಟೇ ಅವರ ಗುರಿಯಾಗಿತ್ತು."

"ಈ ಬೆಲ್ ಮತ್ತು ಲ್ಯಾಂಕಾಸ್ಟರ್ ಮಾದರಿಯ ಶಾಲೆಗಳ ತೀವ್ರವಾದ ದೋಷವೆಂದರೆ ಅದರಲ್ಲಿ ವಿಷಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮಹತ್ತ್ವವಿಲ್ಲ. ಅಲ್ಲಿ ಒತ್ತುಕೊಡಲಾಗುವುದು ಮಾಹಿತಿಗಳನ್ನು ನೆನಪಿಟ್ಟುಕೊಳ್ಳುವುದಕ್ಕೆ ಮಾತ್ರ" ಎಂದು ಥಾಂಪ್‌ಸನ್ ಸ್ಪಷ್ಟವಾಗಿ ಹೇಳುತ್ತಾರೆ. ಇದರಿಂದಾಗಿ ಈ ಶಾಲೆಗಳು ಏನನ್ನಾದರೂ ಕಲಿಸಿವೆ ಎಂದರೆ ಅದು, "ಸ್ಥಾಪಿತ ಸಂಸ್ಥೆಗಳೊಂದಿಗೆ ಸಹಕರಿಸುತ್ತಾ ಜಡವಾದ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಮತ್ತು ಅಂಧವಿಶ್ವಾಸವನ್ನು ಬೆಳೆಸಿಕೊಳ್ಳುವುದು."[೭೭] ಇಂಥ ಪಂಥಗಳು ಮತ್ತು ಪಕ್ಷಗಳ ಸುಪರ್ದಿಗೆ ಶಿಕ್ಷಣವನ್ನು ಬಿಡುವುದೆಂದರೆ ಪಂಥೀಯ ತಿಳಿವಳಿಕೆಗಳನ್ನು ಕಲಿಸುವುದಕ್ಕೆ, ಗುಂಪು ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನಕ್ಕೆ ಶಾಮೀಲಾದಂತೆ.

ಈ ಧೋರಣೆಗೆ ವಿರುದ್ಧವಾಗಿ ಥಾಂಪ್‌ಸನ್ ಅವರು ಇಡಿಯ ಸಮುದಾಯದ ಹಿತಾಸಕ್ತಿಯನ್ನು ಮುಂದಿಡುತ್ತಾರೆ ಮತ್ತು ಎಲ್ಲ ಮನುಷ್ಯರಿಗೂ ನೈಜ ಜ್ಞಾನೋದಯವನ್ನು ನೀಡಬಲ್ಲ ಶಿಕ್ಷಣವನ್ನು ಪಡೆಯಲು ಹಕ್ಕಿದೆ ಎಂದು ಪ್ರತಿಪಾದಿಸುತ್ತಾರೆ. ಸತ್ಯದ ಗೆಲುವಿನಲ್ಲಿಯೇ ಎಲ್ಲರ ಹಿತಾಸಕ್ತಿಯೂ ಅಡಕವಾಗಿರುತ್ತದೆ. ರಾಷ್ಟ್ರದ ಶಿಕ್ಷಣ ಎಂದರೆ ಇಡಿಯ ಜನಸಮುದಾಯದ ಶಿಕ್ಷಣ ಮತ್ತು ಅದು ಬರೇ ಅಭಿಪ್ರಾಯಗಳನ್ನು ಪ್ರಚಾರ ಮಾಡುವುದಲ್ಲ, ಸತ್ಯವನ್ನು ಪ್ರಸಾರಮಾಡುವುದು.

"ಎಲ್ಲ ಪ್ರಜ್ಞಾವಂತ ವಿಚಾರಶೀಲ ಜನಸಮುದಾಯದ ಸದಸ್ಯರಿಗೂ ಅವರಲ್ಲಿನ ಬಹುಸಂಖ್ಯಾತ ಸದಸ್ಯರಿಗೂ ಅವರ ಹಿತಾಸಕ್ತಿಯನ್ನು ಗಮನಿಸಿಯಾದರೂ ಶಿಕ್ಷಣ ನೀಡಲೇಬೇಕು. ಅದು ಅವರ ಸುಖಸಂತೋಷವನ್ನು ವರ್ಧಿಸಲಿಕ್ಕಾಗಿಯೇ ಹೊರತು ಯಾವುದೋ ಅಭಿಪ್ರಾಯಗಳನ್ನು ಕುರಿತು, ಅದು ಭೌತಿಕ ವಿಷಯಗಳನ್ನು ಕುರಿತದ್ದೇ ಆಗಿರಲಿ, ಆಧ್ಯಾತ್ಮಿಕವೇ ಆಗಿರಲಿ, ಧರ್ಮಶಾಸ್ತ್ರದ ಪರವಾಗಿರಲಿ ಅಥವಾ ಅದಕ್ಕೆ ವಿರುದ್ಧವಾಗಿರಲಿ, ಅದರ ಪಕ್ಷಪಾತಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಶಿಕ್ಷಣದ ಉದ್ದೇಶವಲ್ಲ. ಅಥವಾ ಯಾವುದೋ ವರ್ಗ, ವರ್ಗಕ್ಕೆ ಸೇರಿದ ಜನರ

ಹಿತಾಸಕ್ತಿಗಾಗಿ ಜನರನ್ನು ಉಪಕರಣಗಳಂತೆ ಬಳಸುವುದಕ್ಕೆ ಕೂಡ ಶಿಕ್ಷಣದ ಉಪಯೋಗವಾಗಬಾರದು. ಜನರನ್ನು ಅವರ ಹಿತಾಸಕ್ತಿಯಲ್ಲಿಯೇ ವಿದ್ಯಾವಂತರನ್ನಾಗಿ ಮಾಡಬೇಕು. ಪ್ರತಿಯೊಂದು ಸಮುದಾಯದ ಹಿತಾಸಕ್ತಿ ಎಂದರೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವಂತಾಗುವುದು, ಅವರು ಜಗತ್ತು ಹೇಗಿದೆಯೋ ಹಾಗೆಯೇ ಅರ್ಥಮಾಡಿಕೊಳ್ಳುವಂತಾಗುವುದು, ಭೌತಿಕ ವಸ್ತುಗಳ ಗುಣಗಳನ್ನು ಸಂಬಂಧಗಳನ್ನು ಅರ್ಥಮಾಡಿಕೊಳ್ಳುವಂತಾಗುವುದು, ತಮ್ಮ ಕಾರ್ಯಗಳ ಪರಿಣಾಮ ಏನು ಎಂಬುದನ್ನು ಗ್ರಹಿಸುವಂತಾಗುವುದು, ಎಂದರೆ ಒಟ್ಟಿನಲ್ಲಿ ಅವರ ಹಿತಾಸಕ್ತಿಯಲ್ಲೇ ಅವರಿಗೆ ಸತ್ಯವನ್ನೇ ಕಲಿಸಬೇಕು; ಸತ್ಯದ ಅರ್ಥ ಇದೇನೇ."[೭೮]

ಇದನ್ನು ಸಾಧಿಸುವುದು ಹೇಗೆ?

"ಮೊದಲನೆಯದಾಗಿ ಈಗ ಶ್ರೀಮಂತರಿಗೆ ಕಲಿಸುತ್ತಿರುವ, ಕಲಿಸುತ್ತಿದ್ದೇವೆಂದುಕೊಂಡಿರುವ ಸಂಗತಿಗಳಲ್ಲಿ ಹತ್ತರಲ್ಲಿ ಒಂಬತ್ತರಷ್ಟಿರುವ ನಿರುಪಯೋಗಿ ಭಾಗವನ್ನು ಕೈಬಿಡಬೇಕು. ಎರಡನೆಯದಾಗಿ ಹತ್ತರಲ್ಲಿ ಒಂದರಷ್ಟಿರುವ ಉಪಯುಕ್ತ ಭಾಗವನ್ನು ಉಳಿಸಿಕೊಳ್ಳಬೇಕು, ಮತ್ತು ಮೂರನೆಯದಾಗಿ ಈಗ ಗಿಳಿಪಾಠ ಮಾಡಿಸುತ್ತಿರುವ ವ್ಯಾಕರಣ, ವಿದೇಶಿ ಪದಪುಂಜಗಳ ಜಾಗದಲ್ಲಿ ತರುಣರ ಮನಸ್ಸಿಗೆ ಹೊಂದಿಕೆಯಾಗುವಂಥ ಪ್ರಾಯೋಗಿಕ, ಕಾರ್ಯಸಾಧುವಾದ ವಿಜ್ಞಾನದ ಆಸಕ್ತಿದಾಯಕ ಹಾಗೂ ಅತ್ಯಂತ ಉಪಯುಕ್ತವಾದ ಇತ್ತೀಚಿನ ಸಂಶೋಧನೆಗಳನ್ನು ಕಲಿಕೆಯಲ್ಲಿ ಸೇರಿಸಿಕೊಳ್ಳಬೇಕು."[೭೯]

``ಈ ವಿಧಾನದ ಮೂಲಕ ಸಮುದಾಯದ ಬಹುಸಂಖ್ಯಾತ ಜನರು ಅತ್ಯುತ್ತಮ ಮನುಷ್ಯರಂತೆಯೇ ಬುದ್ಧಿವಂತರೂ, ನೀತಿವಂತರೂ, ಸಂತೋಷಚಿತ್ತರೂ ಆಗಬಹುದು. ಇಂಥ ರಾಷ್ಟ್ರ, ಶಿಕ್ಷಣವು ದುಡಿಯುವ ಜನರ, ಶ್ರಮದ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುತ್ತದೆ; ಇಡಿಯ ಸಮುದಾಯದ ಎಲ್ಲ ಪ್ರತಿಭೆಯೂ ಅಭಿವೃದ್ಧಿಹೊಂದುವುದನ್ನು ಖಾತ್ರಿಪಡಿಸುತ್ತದೆ, ಅದು ಸಾರ್ವಜನಿಕ ಸೇವೆಗೆ ವಿನಿಯೋಗವಾಗುವಂತೆ ನೋಡಿಕೊಳ್ಳುತ್ತದೆ.'' ಇದರಿಂದಾಗಿ ವಿಜ್ಞಾನ ಮತ್ತು ಕಲೆಗಳು "ಎಲ್ಲೆಡೆಯೂ ಮುನ್ನಡೆಯುತ್ತವೆ, ಉತ್ತಮಗೊಳ್ಳುತ್ತವೆ."[೮೦] ಬಡಜನರ ಮಕ್ಕಳನ್ನು ಶ್ರೀಮಂತರ ಮಕ್ಕಳಂತೆ ಮುಚ್ಚಟೆಯಾಗಿ ರಕ್ಷಿಸಿ ಬೆಳೆಸಿರುವುದಿಲ್ಲ. ಅವರ ಮೇಲೆ ಯಾರೋ ಕಣ್ಣಿಟ್ಟು ಕಾಪಾಡುತ್ತಿರುವುದಿಲ್ಲ. ಅವರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಬಲ್ಲರು. ಆದ್ದರಿಂದ ಬೌದ್ಧಿಕವಾಗಿ ಶ್ರೇಷ್ಠವಾದ ಶಿಕ್ಷಣದಿಂದ ಅವರು ಶ್ರೀಮಂತರ ಮಕ್ಕಳಿಗಿಂತ ಹೆಚ್ಚಾಗಿ ಮುಂದೊಡಗಿನ ಗುಣಗಳನ್ನು, ಶಿಕ್ಷಣದ ಲಾಭ ಪಡೆಯಬಲ್ಲ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ಆದರೆ ಇಷ್ಟಾಗಿಯೂ ಶಾಲೆ ಸೇರುವ ವಯಸ್ಸು ಬಂದಾಗ ಅವರು ಉಪೇಕ್ಷೆಗೊಳಗಾಗುತ್ತಾರೆ, ಅವರಿಗೆ ಗಮನ ಕೊಡುವವರು ಯಾರೂ ಇರುವುದಿಲ್ಲ. ಆದರೆ ಶ್ರೀಮಂತರ ಮಕ್ಕಳಿಗೆ ಹಾಗಲ್ಲ, ಅವರಿಗೆ ಶಿಕ್ಷಣ

ದೊರಕುತ್ತದೆ. ಆದರೂ "ಶಾಲೆಗೆ, ಕಲಿಕೆಯ ಸ್ಥಳಕ್ಕೆ ಬಂದಾಗ ಬಡವರ ಮಗುವಿನಲ್ಲಿ ಉಂಟಾಗುವ ಉತ್ಸಾಹ, ಶ್ರೀಮಂತರ ಮಕ್ಕಳಿಗಿಂತ ಮಿಗಿಲಾದದ್ದು. ಬಡವರಿಗೆ ಶಿಕ್ಷಣ ಎಂಬುದು ಒಂದು ನಾವೀನ್ಯ, ಒಂದು ಲಾಭ, ತನಗಿಂತ ಮೇಲ್ಮಟ್ಟದವರೊಂದಿಗೆ ಸಹವಾಸ ಇತ್ಯಾದಿ. ಆದರೆ ಶ್ರೀಮಂತರ ಮಗುವಿಗೆ ಶಿಕ್ಷಣ ಎಂದರೆ ಸ್ವಾತಂತ್ರ್ಯದ ಹರಣ, ನಿಯಂತ್ರಣವಿರುತ್ತದೆ ಎಂಬ ಭಯ, ಹೊಸತೇನಾದರೂ ಇದೆ ಎಂದೆನಿಸುವುದಿಲ್ಲ, ಮನೆಯಷ್ಟು ಶಾಲೆ ಆರಾಮವಾಗಿರುವುದಿಲ್ಲ. ಬಡವರ ಮಕ್ಕಳ ಪರಿಚಯವಾಗುವುದರಲ್ಲಿ ಗೌರವ ಎನಿಸುವುದಿಲ್ಲ, ಹೆದರಿಸುವ ಮುಖ್ಯೋಪಾಧ್ಯಾಯರು ಹಿಡಿಸುವುದಿಲ್ಲ, ಭವಿಷ್ಯತ್ತಿನಲ್ಲಿ ತುಂಬ ಒಳ್ಳೆಯದಾಗುತ್ತದೆ ಎಂಬ ಭರವಸೆಯೂ ಇರುವುದಿಲ್ಲ."[೮೧] ಹೀಗೆನ್ನುತ್ತಾ ಥಾಂಪ್‌ಸನ್ ಅವರು ಇಡಿಯ ದೇಶಕ್ಕೆ ಅನ್ವಯಿಸುವ ಸಾರ್ವತ್ರಿಕ ಶಿಕ್ಷಣ ಪದ್ಧತಿಗೆ ಅಗತ್ಯವಾದ ಹಣವನ್ನು ಹೊಂದಿಸುವ ಯೋಜನೆಯ ರೂಪುರೇಷೆಯನ್ನು ಮುಂದಿಡುತ್ತಾರೆ.

## v. ಥಾಮಸ್ ಹಾಡ್ಜ಼್ ಸ್ಕಿನ್ ಮತ್ತು ಸಮಾಜದ ಅರಿವು

ಸಹಕಾರಿ ತತ್ತ್ವದ 'ಮುನ್ನೋಟ'ದಲ್ಲಿ ನಂಬಿಕೆಯಿಲ್ಲದಿದ್ದರೂ, ಹಾಡ್ಜ್‌ಸ್ಕಿನ್‌ರು ಇದೇ ರೀತಿಯಲ್ಲಿ ಸಮಾಜ ಬದಲಾವಣೆಯಲ್ಲಿ ಜ್ಞಾನಕ್ಕೆ ಅಪಾರ ಶಕ್ತಿಯಿದೆ ಎಂದು ನಂಬಿದ್ದರು. ಬಂಡವಾಳಗಾರ ಮತ್ತು ಕಾರ್ಮಿಕರ ನಡುವೆ ಅದೆಂಥ ಮೂಲಭೂತ ಹಿತಾಸಕ್ತಿಗಳ ಸಂಘರ್ಷ ಇದೆ ಎಂಬುದನ್ನು ಕಾರ್ಮಿಕವರ್ಗಕ್ಕೆ ತಿಳಿಸಬೇಕೆಂಬುದು ಆತನ ಪ್ರಾಥಮಿಕ ಉದ್ದೇಶವಾಗಿತ್ತು. ಬಂಡವಾಳಗಾರನು ಕಾರ್ಮಿಕನಿಂದ, ಎಂದರೆ ಎಲ್ಲ ಮೌಲ್ಯವನ್ನೂ ಸೃಷ್ಟಿಸುವವನಿಂದ ಆತನಿಗೆ ನ್ಯಾಯವಾಗಿ ಸಿಗಬೇಕಾಗಿದ್ದ ಭಾಗದಲ್ಲಿ ದೊಡ್ಡ ಪಾಲನ್ನು ಕಸಿದುಕೊಳ್ಳುತ್ತಾನೆ ಎಂಬುದನ್ನು ತೋರಿಸಬೇಕೆಂಬುದು ಆತನ ಆಶಯ. ಇಂಥ ಪರಿಸ್ಥಿತಿಯನ್ನು ಹಾಗೆಯೇ ಉಳಿಸಿಕೊಂಡುಹೋಗುವ ಧೋರಣೆಯಿಂದಲೇ ಬಂಡವಾಳಗಾರನು "ಯಾವ ಸಹಜ ನಿಯಮಗಳ ಮೇಲೆ ಕಾರ್ಮಿಕರ ಅಸ್ತಿತ್ವ ಮತ್ತು ಆನಂದ-ಸೌಖ್ಯ ಅವಲಂಬಿತವಾಗಿದೆ ಎಂಬುದನ್ನು ಆತನಿಂದ ಬಚ್ಚಿಡಲು"ಯತ್ನಿಸುತ್ತಾನೆ ಎಂದು ಹಾಡ್ಜ್‌ಸ್ಕಿನ್ ಪ್ರತಿಪಾದಿಸುತ್ತಾರೆ.

"ಬಂಡವಾಳದ ದುರಾಗ್ರಹದ ವಿರುದ್ಧ ಕಾರ್ಮಿಕರ ವರ್ಗವನ್ನು ಸಮರ್ಥಿಸುವುದು"[೮೨] (ಲೇಬರ್ ಡಿಫೆಂಡೆಡ್ ಅಗೇನಸ್ಟ ಕ್ಲೇಮ್ಸ್ ಆಫ್ ಕ್ಯಾಪಿಟಲ್) ಎಂಬ ಪುಸ್ತಕದಲ್ಲಿ ಹಾಡ್ಜ್ ಸ್ಕಿನ್‌ರವರು ಅಂದಿನ ಕಾಲದ ರಾಜಕೀಯ ಅರ್ಥಶಾಸ್ತ್ರದ ವಿರುದ್ಧ, ಅದರಲ್ಲೂ ವಿಶೇಷವಾಗಿ ಜೆ. ಎಸ್. ಮಿಲ್‌ರವರ ಲಾಭ ಮತ್ತು ಬಡ್ಡಿಯನ್ನು ಕುರಿತ ಸಿದ್ಧಾಂತದ ವಿರುದ್ಧ ಬಲವಾದ ದಾಳಿ ಮಾಡಿದರು.[೮೩] ಹಾಡ್ಜ್ ಸ್ಕಿನ್‌ರು ಈ ವಾದದ ಮೂಲಕ ಶ್ರಮಿಕರ ಪರವಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಯತ್ನಿಸಿದರು ನಿಜ. ಆದರೆ ಅದಲ್ಲದೆ ಅವರಿಗೆ ಎಲ್ಲಕ್ಕಿಂತ ಮುಖ್ಯವಾಗಿ ಕಾರ್ಮಿಕರಿಗೆ ತಮ್ಮ ಕಡೆ ನ್ಯಾಯ ಇದೆ ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿತ್ತು ಮತ್ತು ಅವರ

ಬೇಡಿಕೆಗಳನ್ನು ಇನ್ನಷ್ಟು ಮೇಲ್ಮಟ್ಟಕ್ಕೆ ಏರಿಸಿ, ಅವರು ಒಂದಾಗಿ ಬಂಡವಾಳಶಾಹಿ ವರ್ಗದ ವಿರುದ್ಧ ಗೆಲ್ಲುವಂತೆ ಮಾಡಬೇಕಿತ್ತು.

ಅವರು ಬರೆಯುತ್ತಾರೆ, "ದೈಹಿಕ ಶ್ರಮಗಾರರು ಬಂಡವಾಳಗಾರರಿಂದ ತುಳಿತಕ್ಕೊಳಗಾಗಿದ್ದಾರೆ, ಅವರಿಗೆ ಸಿಗುವ ವೇತನ ಸರಿಯಾಗಿಲ್ಲ. ಅವರು ಇಂದಿಗೂ ಕೂಡ ತಮಗೆ ಬರಬೇಕಾದ ವೇತನ ಎಷ್ಟಿರಬೇಕೆಂದು ಆಗ್ರಹಿಸುವಾಗ, ತಾವು ಉತ್ಪಾದಿಸಿರುವ ಪದಾರ್ಥದ ಬೆಲೆ ಏನು ಎಂಬುದನ್ನು ಗಣನೆಗೆ ತೆಗೆದುಕೊಂಡು ಕೇಳುವುದಿಲ್ಲ, ಬದಲಿಗೆ ಇಲ್ಲಿಯವರೆಗೂ ಎಷ್ಟು ಸಿಕ್ಕುತ್ತಿತ್ತು ಎಂಬುದರಿಂದ ಮಾತ್ರ ನಿರ್ಧರಿಸುತ್ತಾರೆ."

"ಇಂಥ ಪೂರ್ವಗ್ರಹದಿಂದಲೇ ಕಾರ್ಮಿಕರಿಗೆ ಇನ್ನೂ ಬಹಳಕಾಲ ಕೂಲಿಯ ಸಾಮಾಜಿಕ ನ್ಯಾಯಪರತೆ ಏನಿದೆ ಎಂದು ಗ್ರಹಿಸುವುದು, ಪ್ರತಿಯೊಬ್ಬ ಕಾರ್ಮಿಕನಿಗೂ ದಕ್ಕಬೇಕಾದ ಪಾಲು ಎಷ್ಟು ಎಂಬುದನ್ನು ಪ್ರತಿಪಾದಿಸುವುದು ಕಷ್ಟವಾಗುತ್ತದೆ." ಇನ್ನೊಂದು ಕಡೆ ಲಾಭದಿಂದ, ಬಡ್ಡಿಯಿಂದ ಬದುಕುವ ಬಂಡವಾಳಗಾರರಿಗೆ, "ರಾಷ್ಟ್ರೀಯ ಉತ್ಪಾದನೆಯಲ್ಲಿ ಇದು ನಮ್ಮದು ಎಂದು ಆಗ್ರಹಿಸಲು ಸಂಪ್ರದಾಯದ, ರೂಢಿಯ ಬೆಂಬಲ ಬಿಟ್ಟರೆ ಯಾವ ಆಧಾರವೂ ಇಲ್ಲ." ನಿಜಕ್ಕೂ ಹೇಳಬೇಕೆಂದರೆ ಇಂದಿನ ಕಾರ್ಮಿಕರು ಹಳೆಯ ಕಾಲದ ಜೀತದಾಳುಗಳಿಂದ, ದಾಸರಿಂದ ಬಂದವರಾಗಿದ್ದು ಅವರು ಇನ್ನೂ ತಮ್ಮ ಹಿಂದಿನ ತಲೆಮಾರಿನ ಚಿಂತನೆಯ ಪಾಶಗಳಿಂದ ಮುಕ್ತರಾಗಿಲ್ಲ. ನ್ಯಾಯದ ಆಧಾರದ ಮೇಲೆ ಅವರ ಬೇಡಿಕೆಗಳನ್ನು ಇಲ್ಲಿಯವರೆಗೂ ಪರೀಕ್ಷಿಸಿಕೊಂಡೇ ಇಲ್ಲ.

"ಚರಿತ್ರೆಯಲ್ಲಿ ಮೊದಲಬಾರಿಗೆ ಕಾರ್ಮಿಕರು ಶಿಕ್ಷಿತರಾಗುತ್ತಿದ್ದಾರೆ ಮತ್ತು ಎಲ್ಲ ವಿಷಯಗಳನ್ನು ಆಳಕ್ಕೆ ಹೋಗಿ ಪರೀಕ್ಷಿಸಬೇಕು" ಎಂಬ ಸತ್ಯವನ್ನು ಗ್ರಹಿಸುತ್ತಿರುವುದರಿಂದ ಇದೆಲ್ಲವನ್ನೂ ಬದಲಿಸಬಹುದು. ``ಸಮಾಜಗಳನ್ನು ಯಾವ ತತ್ತ್ವಗಳ ಮೇಲೆ ರಚಿಸಲಾಗುತ್ತಿದೆ, ಆಳಲಾಗುತ್ತಿದೆ ಎಂಬ ತತ್ತ್ವಗಳು ಅವರಿಗೆ ಅರ್ಥವಾಗದಂತೆ ಕಾರ್ಮಿಕರನ್ನು ಅಜ್ಞಾನದಲ್ಲಿರಿಸಬಹುದು ಎಂದು ಭಾವಿಸುವುದು ಇನ್ನು ಮುಂದೆ ಅಸಾಧ್ಯ". "ಸತ್ಯ ಮತ್ತು ನ್ಯಾಯದ ಮೇಲೆ ಯಾವುದೆಲ್ಲ ಆಧರಿಸಿಲ್ಲವೋ, ಅದೆಲ್ಲವನ್ನೂ ನಿಃಶಬ್ದವಾಗಿ ಬುಡಮೇಲು ಮಾಡಬಲ್ಲ ವಿದ್ರೋಹವನ್ನು ತುಳಿದಿಡಲು ಯಾವ ಪವಿತ್ರ ಮೈತ್ರಿಕೂಟಕ್ಕೂ ಸಾಧ್ಯವಿಲ್ಲ." ಕಾರ್ಮಿಕರು "ತಮ್ಮ ಹುಡುಕಾಟ, ಪರೀಕ್ಷೆಗಳನ್ನು ನಿಲ್ಲಿಸುವುದಿಲ್ಲ. ಅವರು ಭೂಗರ್ಭಶಾಸ್ತ್ರಜ್ಞನ ವಿಚಿತ್ರ ಸಂಶೋಧನೆಗಳ ಬಗ್ಗೆ, ಸಸ್ಯಶಾಸ್ತ್ರಜ್ಞನ ವಿಸ್ತಾರವಾದ ವರ್ಗೀಕರಣಗಳ ಬಗ್ಗೆ ತಲೆಕೆಡಿಸಿಕೊಳ್ಳದೇ ಇರಬಹುದು. ಆದರೆ ಅವರು ಖಂಡಿತವಾಗಿ ಎಲ್ಲ ವರ್ಗಗಳಿಗಿಂತಲೂ ಮಿಗಿಲಾಗಿ ತಮ್ಮ ವರ್ಗವೇ ಏಕೆ ದಾರಿದ್ರ್ಯದ ಸಂಕಟಗಳಿಗೆ ತುತ್ತಾಗಿದೆ ಎಂಬ ಪ್ರಶ್ನೆಯನ್ನು ಉತ್ತರಿಸಿಕೊಳ್ಳಲು ಯತ್ನಿಸುತ್ತಾರೆ." ಹೀಗೆ ದುಡಿಯುವ ಜನತೆ "ಜ್ಞಾನವನ್ನು ಪಡೆದುಕೊಂಡಂತೆ, ಗತಕಾಲದಲ್ಲಿ ನಿರ್ಮಿಸಿದ ಆಳವಾದ ಸಾಮಾಜಿಕ ಕಟ್ಟಡದ ಬುನಾದಿಗಳನ್ನು ಅಗೆದು ಹಾಕಲಾಗುತ್ತದೆ. ಜನತೆ

ಅವುಗಳನ್ನು ಕುತೂಹಲದಿಂದ ಬಗೆದು ಸೂಕ್ಷ್ಮವಾಗಿ ನೋಡುತ್ತಾರೆ. ಅದು ನಿಜಕ್ಕೂ ನ್ಯಾಯದ ಆಧಾರದಲ್ಲಿ ನಿರ್ಮಿತವಾಗಿತ್ತು, ಅದನ್ನು ಉಳಿಸಬೇಕಾದದ್ದು ನ್ಯಾಯದ ಅವಶ್ಯಕತೆ ಎಂದು ಅವರಿಗೆ ಅನ್ನಿಸದಿದ್ದರೆ ಅವರು ಅದನ್ನು ಮತ್ತೆ ಕಟ್ಟುವುದಿಲ್ಲ."[೮೪]

೧೮೨೭ರಲ್ಲಿ "ಪಾಪ್ಯುಲರ್ ಪೊಲಿಟಿಕಲ್ ಎಕಾನಮಿ" (ಜನಪ್ರಿಯ ರಾಜಕೀಯ ಅರ್ಥಶಾಸ್ತ್ರ) ಎಂಬ ಹೆಸರಿನಲ್ಲಿ ಪ್ರಕಟವಾದ ಸಾರ್ವಜನಿಕ ಉಪನ್ಯಾಸಗಳ ಸರಣಿಯೂ ಸೇರಿದಂತೆ ಹಾಡ್ಜ್ ಸ್ಕಿನ್‌ರ ಎಲ್ಲ ಆರ್ಥಿಕ ಬರಹಗಳೂ ಸಮಾಜವನ್ನು ಕುರಿತ ವಾಸ್ತವ ಚಿತ್ರಣವನ್ನು ನೀಡಬೇಕು ಎಂಬ ಮುಖ್ಯ ಧ್ಯೇಯವನ್ನೇ ಹೊಂದಿದ್ದವು. ಕೆಡಕುಗಳನ್ನು ನಿರ್ಮೂಲನ ಮಾಡಿ, ನ್ಯಾಯಯುತ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ಅಸ್ತಿತ್ವದಲ್ಲಿರುವ ಸಂಸ್ಥೆಗಳನ್ನು ನ್ಯಾಯದ ಮೂಲಭೂತ ತತ್ತ್ವಗಳ ಮೇಲೆ ರಚಿಸಬೇಕು. ಇದಕ್ಕಾಗಿ ಕಾರ್ಮಿಕರು ಸತ್ಯವನ್ನು ಕಂಡುಕೊಳ್ಳಲೇಬೇಕಾಗುತ್ತದೆ ಎಂಬುದನ್ನು ಹಾಡ್ಜ್ ಸ್ಕಿನ್‌ರವರು ದಣಿವಿಲ್ಲದೆ ಪ್ರಚಾರ ಮಾಡುತ್ತಾ ಹೋದರು.

ಸುಧಾರಣಾ ಕಾಯಿದೆ ಬರುವ ಹಿಂದಿನ ದಶಕದಲ್ಲಿ ಓವೆನ್, ಕಾರ್ಲೈಲ್, ಥಾಂಪ್‌ಸನ್ ಮತ್ತು ಹಾಡ್ಜ್ ಸ್ಕಿನ್ ಅವರು ಕಾರ್ಮಿಕ ವರ್ಗದ ಚಳಿವಳಿಗೆ ಮುಖ್ಯವಾದ ಸೈದ್ಧಾಂತಿಕ ಮಾರ್ಗದರ್ಶನವನ್ನು ನೀಡಿದರು. ತಮಗೆ ಬಂಡವಾಳಗಾರನಿಂದ ಬರಬೇಕಾದ ನ್ಯಾಯಯುತ ಭಾಗವನ್ನು ಪಡೆಯಲು ಸಹಕಾರಿ ತತ್ತ್ವವನ್ನು ಹಾಗೂ ಐಕಮತ್ಯದಿಂದ ನ್ಯಾಯಕ್ಕಾಗಿ ಆಗ್ರಹಿಸುವುದನ್ನು ಕಾರ್ಮಿಕರಿಗೆ ಅವರು ಕಲಿಸಿದರು. ೧೮೨೪ರಲ್ಲಿ ಸಂಘಟನಾ ಕಾಯಿದೆಗಳನ್ನು ಹಿಂತೆಗೆದುಕೊಂಡ ಅನಂತರ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗಾಗಿ ದೊಡ್ಡ ಪ್ರಮಾಣದಲ್ಲಿ ಹೋರಾಟಕ್ಕಿಳಿಯಲಾರಂಭಿಸಿದಾಗ, ಸಣ್ಣ ಉತ್ಪಾದಕರ ಸಹಕಾರಿ ಸೊಸೈಟಿಗಳೊಂದಿಗೆ ಕಾರ್ಮಿಕ ಸಂಘಗಳ ರಚನೆಯೂ ಜೋರಾಗಿ ಮುನ್ನಡೆಯಿತು. ಇಂಥ ಸಾಮಾಜಿಕ ಮತ್ತು ರಾಜಕೀಯ ಕ್ರಿಯೆಗೆ ಶಿಕ್ಷಣವು ಅವಶ್ಯಕ, ಸಮಾಜದ ಬದಲಾವಣೆಗೆ ಅದು ಮೂಲಭೂತ ನಿಬಂಧನೆ ಅಲ್ಲದಿದ್ದರೂ ಅವಶ್ಯಕ ಕ್ರಮ ಎಂದು ಎಲ್ಲ ಸಿದ್ಧಾಂತಿಗಳೂ ಪ್ರತಿಪಾದಿಸಿದರು.

೧೮೨೦ರ ದಶಕದ ಅಂತ್ಯದಲ್ಲಿ ಮತ್ತು ೧೮೩೦ರ ದಶಕದ ಆರಂಭದಲ್ಲಿ ಹೊಸ ರೀತಿಯ ಶಿಕ್ಷಣ ಬೇಕು ಎಂಬುದು ಮುಖ್ಯ ಅಭಿಪ್ರಾಯವಾಯಿತು. ಅದನ್ನು ಕೇವಲ ಸಭೆಗಳಲ್ಲೋ, ಪತ್ರಿಕೆಗಳಲ್ಲೋ ಪ್ರತಿಪಾದಿಸಿದ್ದು ಮಾತ್ರವಲ್ಲ, ಅದು ಹೊಸ ಶಾಲೆ-ಸಂಸ್ಥೆಗಳ ಉದಯಕ್ಕೂ ಕಾರಣವಾಯಿತು.

## ೩. ಒಂದು ಸ್ವತಂತ್ರ ಶಿಕ್ಷಣ ಪದ್ಧತಿಗಾಗಿ ಆಂದೋಲನ

### (i) ಆರಂಭಕಾಲದ ಸಹಕಾರಿ ಸಂಘಗಳ ಶೈಕ್ಷಣಿಕ ಚಟುವಟಿಕೆಗಳು

೧೮೨೫ರಲ್ಲಿ ಲಂಡನ್‌ನ ಸಹಕಾರ ಸಂಘವು ಲಂಡನ್ ನಗರದ ಹೊರಗೆ "ಪರಸ್ಪರ ಸಹಕಾರಿ ತತ್ತ್ವಗಳ ಆಧಾರದ ಮೇಲೆ ಸಮುದಾಯವನ್ನು ಸ್ಥಾಪಿಸುವುದನ್ನು ಕುರಿತು" ಒಡಂಬಡಿಕೆಯ ವಿಧಿಗಳನ್ನು ರಚಿಸಿಕೊಂಡಿತು. ಅದರಲ್ಲಿ ೧೧ನೆಯ ವಿಧಿಯಲ್ಲಿ ಬೆಳೆಯುತ್ತಿರುವ ಸಹಕಾರಿ ಸಂಘದ ಸಮುದಾಯಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಉದ್ದೇಶಗಳನ್ನು ಕುರಿತು ಹೀಗೆ ಹೇಳಲಾಗಿತ್ತು:

"ನಮ್ಮ ಸಮುದಾಯವನ್ನು ಪ್ರವೇಶಿಸುವ ಎಲ್ಲ ಮಕ್ಕಳಿಗೆ ಅಥವಾ ಸಮುದಾಯದಲ್ಲೇ ಜನಿಸಿರುವ ಎಲ್ಲ ಮಕ್ಕಳಿಗೆ ನಾವು ಇಂದಿನ ಕಾಲದ ಮಾನವ ಸಮಾಜದಲ್ಲಿ ಲಭ್ಯವಿರುವ ಎಲ್ಲ ಜ್ಞಾನವೂ ಖಾತ್ರಿಪಡಿಸಬಹುದಾದಂಥ ಅತ್ಯುತ್ತಮ ಬೌದ್ಧಿಕ ಹಾಗೂ ಶಾರೀರಕ ಶಿಕ್ಷಣವನ್ನು ಖಚಿತಪಡಿಸುತ್ತೇವೆ. ನಾವು ನೀಡುವ ಈ ವಿಶಿಷ್ಟವಾದ ಸೌಲಭ್ಯವನ್ನು ನಮ್ಮ ಹೊರಗಿರುವ ಇಂದಿನ ಸಾಮಾಜಿಕ ಪರಿಸರದಲ್ಲಿ ಎಷ್ಟೇ ಕಷ್ಟಪಟ್ಟರೂ, ಎಷ್ಟೇ ಸಂಪತ್ತನ್ನು ವಿನಿಯೋಗಿಸಿದರೂ ಪಡೆದುಕೊಳ್ಳುವುದು ಸಾಧ್ಯವಿಲ್ಲ. ನಮ್ಮ ಆಯಸ್ಸನ್ನು ಆದಷ್ಟು ದೀರ್ಘವಾಗಿಸುವುದು, ಆ ಅವಧಿಯಲ್ಲಿ ಯಾವ ತೊಂದರೆಯೂ ಇಲ್ಲದಂಥ ಆರೋಗ್ಯವನ್ನು ಹೊಂದಿರುವುದು, ಅಂಥ ಬದುಕಿನಲ್ಲಿ ಆನಂದವನ್ನೂ, ವಿವಿಧರೀತಿಯ ಇಂದ್ರಿಯಜನ್ಯ ಸುಖಗಳನ್ನೂ ಅನುಭವಿಸುವುದು, ಕ್ರೀಡಾ ಚಟುವಟಿಕೆಗಳಲ್ಲಿ ತೊಡಗುವುದು, ಜ್ಞಾನದ ಸಂತೋಷವನ್ನು ಅನುಭವಿಸುವುದು, ಪರಸ್ಪರ ಸಹಾನುಭೂತಿ, ನೆರವುಗಳನ್ನು ವ್ಯಕ್ತಪಡಿಸುವುದು ಮತ್ತು ಇವೆಲ್ಲವನ್ನು ಅನೇಕ ರೀತಿಯ ವೈವಿಧ್ಯದಲ್ಲಿ, ಸಂಯೋಗದಲ್ಲಿ ಅನುಭವಿಸುವಂತೆ ಮಾಡುವುದು ಇಡಿಯ ಸಮುದಾಯದ ಸಾಮಾನ್ಯ ಶಿಕ್ಷಣದ ಗುರಿಯಾಗಬೇಕು. ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣವನ್ನು ಜೊತೆಯಲ್ಲಿಯೇ ಬೋಧಿಸುವಂತಹ ಮಾದರಿಯನ್ನು ಇನ್ನು ಮುಂದೆ ಸಮುದಾಯವೇ ನಿರ್ಧರಿಸಲಿ. ಪೋಷಕರಿಗೆ ಅಗತ್ಯವೆನಿಸಿದರೆ ಅವರವರ ಧಾರ್ಮಿಕ ತತ್ತ್ವಗಳನ್ನು ಅವರಿಗೆ ಯಾವ ಶಿಕ್ಷಕರಲ್ಲಿ ವಿಶ್ವಾಸವಿದೆಯೋ ಅವರು ಬೋಧಿಸುವಂಥ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಸಾಮಾನ್ಯ ಶಿಕ್ಷಕರು ಇಂಥ ಧಾರ್ಮಿಕ ಶಿಕ್ಷಣದಲ್ಲಿ ತಲೆಹಾಕುವುದನ್ನು ನಿಷೇಧಿಸಲಾಗಿದೆ.[೮೫]

ತಮ್ಮ ಸದಸ್ಯರ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದ್ದ ಸಹಕಾರಿ ಸಮುದಾಯಗಳ ಸಾಮಾನ್ಯ ಅನುಭವ ಇದು. ಆದರೆ ಎಡಿನ್‌ಬರ್ಗ್ ಮತ್ತು ಆರ್ಬಿಸ್ಟನ್ ಪಟ್ಟಣಗಳಲ್ಲಿ ಆದಂತೆ ಲಂಡನ್ ನಗರದ ಶಾಲೆಗಳ ಯೋಜನೆಗಳೂ ಹಣದ ಅಭಾವದಿಂದ ಸೊರಗಿದವು. ಇದರಿಂದಾಗಿ ಸಹಕಾರಿ ಸಮುದಾಯಗಳು ಮಹತ್ತಾ÷ೆವಕಾಂಕ್ಷಿ ಯೋಜನೆಗಳನ್ನು ಕೈಬಿಟ್ಟು ಬೇರೆ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಯಿತು. ಅವರು ಸಣ್ಣದಾದ ಉತ್ಪಾದಕರ ಸಹಕಾರಿ ಸಂಘಗಳನ್ನು ಮತ್ತು ವ್ಯಾಪಾರಿ ಸಮುದಾಯಗಳನ್ನು ರಚಿಸಿಕೊಂಡರು. ಅವು ಮುಂದಿನ ವರ್ಷಗಳಲ್ಲಿ ವೇಗವಾಗಿ ಹಬ್ಬಿದವು.

೧೮೨೭ರಲ್ಲಿ ಬ್ರೈಟನ್ ಎಂಬಲ್ಲಿ ಆರಂಭವಾದ ಸಹಕಾರಿ ಸಂಘವು ಪ್ರಮುಖವಾದದ್ದು.[೮೬]

ಹೆಚ್ಚೂ ಕಡಿಮೆ ಸಂಪೂರ್ಣವಾಗಿ ದುಡಿಯುವ ಜನರೇ[೮೭] ಇದ್ದ ಸಂಘವು 'ಕೊ ಆಪರೇಟರ್' ಎಂಬ ಪತ್ರಿಕೆಯನ್ನು ೧೮೨೮-೩೦ರಲ್ಲಿ ಹೊರತರುತ್ತಿದ್ದು ಡಾ. ವಿಲಿಯಮ್ ಕಿಂಗ್ ಎನ್ನುವವರು ಅದರ ಸಂಪಾದಕರಾಗಿದ್ದರು. ಸಹಕಾರಿ ತತ್ತ್ವಗಳನ್ನು ಮೊಟ್ಟಮೊದಲ ಬಾರಿಗೆ ಅನುಷ್ಠಾನಕ್ಕೆ ತಂದಂಥ ಅತ್ಯಂತ ಮುಖ್ಯವಾದ ಕಾಲಾವಧಿಯಲ್ಲಿ ಅದು ಬಹಳ ಗಾಢವಾದ ಪ್ರಭಾವವನ್ನು ಬೀರಿತ್ತು. ಇಷ್ಟೊಂದು ಮುಖ್ಯವಾದ ಪಾತ್ರವಿದ್ದಿದ್ದರಿಂದಲೇ ಕಿಂಗ್ ಅವರನ್ನು ಕೆಲವರು ಸಹಕಾರಿ ಚಳವಳಿಯ ಆರಂಭ ಕಾಲದ ಸಂಸ್ಥಾಪಕರು ಎಂದು ಕರೆದಿದ್ದಾರೆ.

'ಕೊ ಆಪರೇಟರ್' ಪತ್ರಿಕೆಯಲ್ಲಿ ಅಂಥ ಸಂಘಗಳ ಮಾದರಿ ನೀತಿ ನಿಯಮಗಳನ್ನು ಪ್ರಕಟಿಸಲಾಗಿದ್ದು, ಅದನ್ನು ಅವಲೋಕನ ಮಾಡಿದರೆ ಎಳೆಯರ ಹಾಗೂ ಹಿರಿಯರ ಶಿಕ್ಷಣಕ್ಕೆ ಎಂಥ ಮಹತ್ತ್ವವನ್ನು ನೀಡಲಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. "ವಿರಾಮವಿರುವ ಸದಸ್ಯರು ನಿಗದಿತ ಕೋಣೆಯಲ್ಲಿ ಸೇರಿ ಪರಸ್ಪರ ಕಲಿಕೆಗೆ ಅನುವಾಗುವಂತೆ ತರಗತಿಗಳನ್ನು ರಚಿಸಿಕೊಳ್ಳತಕ್ಕದ್ದು. ಎಲ್ಲ ಸಂಪತ್ತಿನ ಮೂಲವೂ ಶ್ರಮವೇ ಎಂಬುದು ಸಹಕಾರಿ ಸಂಘಗಳಿಗೆ ಗೊತ್ತಿರುವುದರಿಂದ ಅವು ತಮ್ಮನ್ನೇ ದುಡಿಯುವವರ ಸಂಘಗಳು ಎಂದು ಕರೆದುಕೊಂಡಿವೆ. ಶ್ರಮಕ್ಕೆ ಜ್ಞಾನದ ಮಾರ್ಗದರ್ಶನ ಅವಶ್ಯಕ ಎಂಬುದೂ ಅವರಿಗೆ ಅರ್ಥವಾಗುತ್ತದೆ. ಆದ್ದರಿಂದ ಅವರು ಎಲ್ಲ ಉಪಯುಕ್ತ ಜ್ಞಾನವನ್ನೂ ಸಂಪಾದಿಸಿಕೊಳ್ಳಬೇಕು."

ಈ ತತ್ತ್ವವು ಮಕ್ಕಳಿಗೂ ಅನ್ವಯಿಸುತ್ತದೆ. ಅಲ್ಲದೆ ಹಿರಿಯ ಸದಸ್ಯರೂ ಸಹ, "ತಮ್ಮ ಮಕ್ಕಳ ಶಿಕ್ಷಣಕ್ಕೆ ವಿಶಿಷ್ಟವಾಗಿ ಗಮನ ಕೊಡಬೇಕು. ಅವರು ನೆರೆಹೊರೆಯಲ್ಲಿರುವ ಅತ್ಯುತ್ತಮ ಶಾಲೆಯನ್ನು ಆಯ್ಕೆಮಾಡಿಕೊಳ್ಳಬೇಕು. ಸಂಘದ ಸದಸ್ಯರು ಶಾಲೆಗೆ ಭೇಟಿ ನೀಡಿ ಮಕ್ಕಳ ಪ್ರಗತಿ ಹೇಗಿದೆ ಎಂಬುದನ್ನು ತಪಾಸಣೆ ಮಾಡುತ್ತಾರೆ ಎಂಬ ನಿಬಂಧನೆಯನ್ನು ಒಪ್ಪಿ ಅವರು ತಮ್ಮ ಮಕ್ಕಳನ್ನು ಆ ಶಾಲೆಗೆ ಸೇರಿಸಬೇಕು. ಆದರೆ ತಮ್ಮದೇ ಆದ ಶಾಲೆಯನ್ನು ಆರಂಭಿಸಿ, ಅದರಲ್ಲಿ ವೇತನ ನೀಡಿ ಶಿಕ್ಷಕರನ್ನು ನೇಮಿಸುವುದು ಇನ್ನೂ ಅಪೇಕ್ಷಣೀಯ."[೮೮]

ಬ್ರೈಟನ್‌ನ ಸಹಕಾರಿ ಸಂಘವು ವಾಸ್ತವದಲ್ಲಿ ತನ್ನದೇ ಆದ ಶಾಲೆಯನ್ನು ಆರಂಭಿಸಿತು. ಸದಸ್ಯರಲ್ಲೊಬ್ಬರನ್ನು ಶಾಲಾ ಮಾಸ್ತರರನ್ನಾಗಿ, ಗ್ರಂಥಪಾಲಕರನ್ನಾಗಿ ನೇಮಿಸಿತು. ತಮ್ಮದೇ ಆದ ಸ್ವಯಂ ಆಡಳಿತವಿರುವ ಉತ್ಪಾದಕ ಸಮುದಾಯಗಳನ್ನು ಸ್ಥಾಪಿಸಿಕೊಂಡ ಸಹಕಾರ ಚಳವಳಿಯ ಸಂಘಟನಾಕಾರರಿಗೆ ಶಿಕ್ಷಣದ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡಲಾಯಿತು. ವ್ಯಾಪಾರದ ಮೂಲಕ ಸಾಕಷ್ಟು ಬಂಡವಾಳವನ್ನು

ಸಂಗ್ರಹಿಸಲಾದರೆ, ಅವರು ಅವಶ್ಯಕ ಜಮೀನನ್ನು ಯಂತ್ರಗಳನ್ನು ಕೊಂಡುಕೊಂಡು ಸಮುದಾಯವನ್ನು ಯಶಸ್ವಿಯಾಗಿ ಕಟ್ಟಿಕೊಳ್ಳುವುದಾದರೆ, ಅವರಿಗೆ ಅನೇಕ ರೀತಿಯ ತಿಳಿವಳಿಕೆಗಳು ಅವಶ್ಯವಾಗುತ್ತವೆ. ಸಮುದಾಯವನ್ನು ಒಮ್ಮೆ ಭದ್ರವಾಗಿ ಸ್ಥಾಪಿಸಿದನಂತರ ಅವರ ಜ್ಞಾನವನ್ನು ಅಗಾಧವಾಗಿ ವೃದ್ಧಿಪಡಿಸುವ ಸಾಧ್ಯತೆ ಇರುತ್ತದೆ ಎಂಬ ಧೋರಣೆಯನ್ನು ಓವೆನ್ ಅವರಂತೆ ಕಿಂಗ್ ಅವರೂ ಹೊಂದಿದ್ದು, ಇದುವರೆಗೂ ಯಾರೂ ಹೊರತರಲಾಗದಿದ್ದ ಕಾರ್ಮಿಕ ಸಮುದಾಯದ ಅಂತರ್ಗತ ಸಾಮರ್ಥ್ಯದ ಬಗ್ಗೆ ಒತ್ತು ನೀಡಿದರು. ತಮ್ಮದೇ ಆದ ಯಂತ್ರಗಳ ಮೇಲೂ, ಶ್ರಮದ ಮೇಲೂ ನಿಯಂತ್ರಣವನ್ನು ಹೊಂದಿದ್ದ ಸಹಕಾರಿ ಸಮುದಾಯದ ಕಾರ್ಮಿಕರು ತಮ್ಮ ಕೆಲಸದ ದಿನದ ಅವಧಿಯನ್ನು ಕಡಿತಗೊಳಿಸಿ ವಿರಾಮವನ್ನು ಜ್ಞಾನಾರ್ಜನೆಗೆ ಮೀಸಲಿಡಬಹುದಾಗಿತ್ತು.

"ಬೇರೆಯವರಂತೆಯೇ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದಾದ ಶಕ್ತಿ ಅವರಿಗೂ ಇದೆ. ವಿಜ್ಞಾನ ಕ್ಷೇತ್ರದ ಎಲ್ಲ ಧೀಮಂತರೂ ಬಹುತೇಕ ದುಡಿಯುವ ಜನತೆಯ ನಡುವಿನಿಂದಲೇ ಬಂದಿದ್ದಾರೆ. ಅವರಿಗೆ ಬೇಕಾದದ್ದು ವಿರಾಮ ಮತ್ತು ಅವಕಾಶಗಳು. ಬಂಡವಾಳವು ಅವರಿಗೆ ಇವೆರಡನ್ನೂ ನೀಡುತ್ತದೆ ಮತ್ತು ಅವರ ಶ್ರಮವೇ ಅವರಿಗೆ ಬಂಡವಾಳವನ್ನು ವೃದ್ಧಿಪಡಿಸುತ್ತದೆ. ಹೀಗಾಗಿ ಶ್ರಮ, ಬಂಡವಾಳ, ಜ್ಞಾನ ಮತ್ತು ತನ್ಮೂಲಕ ಸ್ವಾತಂತ್ರ್ಯ, ಸದ್ಗುಣ, ಸಂತೋಷ ಅವರದ್ದಾಗುತ್ತದೆ."೮೯

ಈ ಚಿಂತನೆಯು ತತ್ತ್ವಶಾಸ್ತ್ರೀಯ ತೀವ್ರವಾದಿಗಳ ಪ್ರತಿಪಾದನೆಗೆ ತದ್ವಿರುದ್ಧವಾಗಿತ್ತು. ಅವರಾದರೋ ಕಾರ್ಮಿಕರು, ಬಂಡವಾಳಗಾರರ ಮೇಲೆ ಅವಲಂಬಿಸಿರುವುದು ಅನಿವಾರ್ಯ ಎಂದು ತೀರ್ಮಾನಿಸಿ, ಆದ್ದರಿಂದ ಅವರು ಪರೋಪಕಾರ, ಸಹನಶಕ್ತಿಗಳನ್ನು ಬೆಳೆಸಿಕೊಳ್ಳಬಹುದೇ ಹೊರತು ಬುದ್ಧಿಶಕ್ತಿ ಮತ್ತು ಸ್ವಾತಂತ್ರ್ಯದ ಶಿಖರವನ್ನು ತಲಪಲಾರರು ಎಂದು ವಾದಿಸಿದ್ದರು.

ಸಹಕಾರಿ ಚಳವಳಿಯು ಅಭಿವೃದ್ಧಿ ಹೊಂದುವುದರೊಂದಿಗೆ ನೂರಾರು ಸಹಕಾರಿ ಸಂಘಗಳನ್ನು ಬೆಸೆಯುವ ಸಾಧ್ಯತೆಯು ಹಲವು ರೀತಿಗಳಲ್ಲಿ ವ್ಯಕ್ತವಾಯಿತು. ೧೮೨೯ರಲ್ಲಿ, 'ಸಹಕಾರಿ ಜ್ಞಾನದ ಅಭಿವೃದ್ಧಿಗಾಗಿ ಬ್ರಿಟಿಷ್ ಸಂಘ' ಎಂಬುದನ್ನು ಸ್ಥಾಪಿಸಲಾಯಿತು ಮತ್ತು ಲವೆಟ್‌ರವರು ಕೆಲವು ಕಾಲ ಅದರ ಕಾರ್ಯದರ್ಶಿಯಾಗಿದ್ದರು. ೧೮೩೧ರ ಹೊತ್ತಿಗೆ ಎರಡನೇ ಸಹಕಾರಿ ಮಹಾಧಿವೇಶನವನ್ನು ಸಂಘಟಿಸುವ ಹೊತ್ತಿಗೆ ಚಳವಳಿಯು ದೃಢವಾದ ಧ್ವನಿಯಲ್ಲಿ ಶಿಕ್ಷಣದ ಬಗ್ಗೆ ಮಾತನಾಡುವಂತಾಯಿತು ಮತ್ತು ಎಲ್ಲ ಸಹಕಾರಿ ಸಂಘಗಳಿಗೂ ಶಾಲೆಗಳನ್ನು ಆರಂಭಿಸಲು ಒತ್ತಾಯಿಸತೊಡಗಿತು. ಆ ಸಮಯದಲ್ಲಿ ಅಂಗೀಕರಿಸಲಾದ ಗೊತ್ತುವಳಿಯು ಮಕ್ಕಳಲ್ಲಿ "ಅತ್ಯುತ್ತಮ ಶಾರೀರಕ, ನೈತಿಕ ಮತ್ತು ಬೌದ್ಧಿಕ ಗುಣಮಟ್ಟವನ್ನು ಬೆಳೆಸಬಲ್ಲ ಕೈಗಾರಿಕಾ ಶಾಲೆಗಳನ್ನು" ಆರಂಭಿಸಬೇಕು ಎಂದೂ, "ಅದು ಪೋಷಕರಿಗೆ ಹೊರೆಯಾಗಬಾರದು" ಎಂದೂ ಒತ್ತಾಯಿಸುತ್ತದೆ. ಸಂಗ್ರಹಿಸಿದ ಚಂದಾ

ಹಣದಲ್ಲಿ ಮತ್ತು ವ್ಯಾಪಾರದ ಲಾಭದಲ್ಲಿ ಒಂದು ಭಾಗವನ್ನು "ಉತ್ತಮ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು" ಉಪಯೋಗಿಸಬೇಕೆಂದು ಹೇಳುತ್ತದೆ. ಅಲ್ಲದೆ ಭಾನುವಾರದಂದು ಮತ್ತು ಇತರ ದಿನಗಳಂದು ಶಾಲಾ ಕೊಠಡಿಗಳು ದೊರೆಯುವಂತೆ ನೋಡಿಕೊಳ್ಳಬೇಕೆಂದೂ ಸೂಚಿಸುತ್ತದೆ. ``ಅಲ್ಲಿ ಸಹಕಾರಿ ತತ್ತ್ವಗಳ ಮತ್ತು ಇತರ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಕೇಳುವುದು, ಅಲ್ಲದೆ ಚರ್ಚೆ, ಸಹಕಾರಿ ತತ್ತ್ವವನ್ನು ಕುರಿತ ಪುಸ್ತಕಗಳನ್ನು ಮತ್ತು ವೃತ್ತಪತ್ರಿಕೆಗಳನ್ನು ಓದುವುದು ಮತ್ತು ಈ ರೀತಿಯಲ್ಲಿ ಪರಸ್ಪರ ಕಲಿಕೆಗೆ ಅನುವು ಮಾಡಿಕೊಡುವ ಕೇಂದ್ರಗಳನ್ನು ಸ್ಥಾಪಿಸಿಕೊಳ್ಳಬೇಕು ಮತ್ತು ತನ್ಮೂಲಕ ಕೇವಲ ಸಭೆ/ಭೇಟಿ ಅಥವಾ ಮನರಂಜನೆಗಾಗಿ ಸಾರ್ವಜನಿಕ ಸಭಾಭವನಗಳಲ್ಲಿ ಸೇರುವ ಪರಿಪಾಠವನ್ನು ನಿಲ್ಲಿಸಬೇಕು ಎಂದೂ ಹೇಳಲಾಯಿತು."[೯೦]

ಅನೇಕ ಸಹಕಾರಿ ಸಂಘಗಳು ಈ ಯೋಜನೆಯನ್ನು ಅನುಸರಿಸಿದವು ಎಂದು ಹೇಳಲು ರುಜುವಾತು ದೊರಕುತ್ತದೆ. ೧೮೩೨ರಲ್ಲಿ ನಡೆದ ಸಹಕಾರಿ ಚಳವಳಿಯ ಮೂರನೆಯ ಮಹಾಧಿವೇಶನದಲ್ಲಿ ಲ್ಯಾಂಕಾಶೈರ್‌ನ ಪ್ರತಿನಿಧಿಯೊಬ್ಬರು ಮಾತನಾಡುತ್ತಾ ಸ್ಥಳೀಯ ಸಮಿತಿಯ ಸದಸ್ಯರು, "ಸಂಪತ್ತನ್ನು ಸೃಷ್ಟಿಸುವ ಶಕ್ತಿ ಮಾತ್ರ ಸಾಕಾಗುವುದಿಲ್ಲ, ಹಾಗೆ ಸೃಷ್ಟಿಯಾದ ಸಂಪತ್ತನ್ನು ಹೇಗೆ ವಿತರಿಸಬೇಕು ಎಂಬ ತಿಳಿವಳಿಕೆಯೂ ಇರಬೇಕೆಂಬ ನಂಬಿಕೆಯನ್ನು ಹೊಂದಿದ್ದಾರೆ" ಎಂದರು. ಆದ್ದರಿಂದಲೇ ಲ್ಯಾಂಕಾಶೈರ್‌ನ ಎಲ್ಲ ಉತ್ಪಾದಕಾ ಘಟಕಗಳೂ ಕೂಡ "ಜ್ಞಾನ ಮತ್ತು ಕೈಗಾರಿಕಾ ಶ್ರಮವನ್ನು ಕುರಿತ ಶಾಲೆಗಳನ್ನು ತಮ್ಮ ಆವರಣದಲ್ಲೇ ಆರಂಭಿಸಿಕೊಂಡಿದ್ದವು. ಅವು ಅವರ ಮತ್ತು ಮಕ್ಕಳ ಕಲಿಕೆಗೆ ಮಾತ್ರವಲ್ಲದೆ ಸಭೆಯ ಜಾಗಗಳೂ ಆಗಿದ್ದವು."[೯೧]

ಸಹಕಾರಿ ಸಂಘಗಳಿಂದ ಸ್ವತಂತ್ರವಾಗಿ ಸಮಾಜವಾದಿ ಶಾಲೆಗಳನ್ನು ಆರಂಭಿಸುವ ಪ್ರಯತ್ನಗಳೂ ಇದ್ದವು. ೧೮೩೦ರ ದಶಕದ ಮಧ್ಯಭಾಗದಲ್ಲಿ ಕೊನೆಯ ಪಕ್ಷ ಅಂತಹ ಮೂರು ಶಾಲೆಗಳು ಲಂಡನ್ ನಗರದಲ್ಲಿದ್ದವು; ಷಾರ್ಲೆಟ್ ಸ್ಟ್ರೀಟ್‌ನಲ್ಲಿದ್ದ ಶಿಶುವಿಹಾರ (ಅಂಗನವಾಡಿ), 'ರಾಬರ್ಟ್ ಓವೆನ್‌ರವರ ಶಿಷ್ಯರ ಮಕ್ಕಳಿಗಾಗಿ' ಗೋಲ್ಡನ್ ಸ್ಕ್ವೇರ್‌ನಲ್ಲಿದ್ದ ಉಚಿತಶಾಲೆ, "ವೆಸ್ಟ ಮಿನ್‌ಸ್ಟರ್ ರಾಷ್ಟ್ರೀಯ ಶಾಲೆ ಮತ್ತು ಸಾಮಾನ್ಯ ವೈಜ್ಞಾನಿಕ ಸಂಸ್ಥೆ.''[೯೨] ಬೋಲ್ಟನ್, ಬ್ರಾಡ್‌ಫೋರ್ಡ್, ರುನ್‌ಕಾರ್ನ್, ಸಾಲ್‌ಫೋರ್ಡ್, ವೊರ್‌ಸ್ಲೇ, ನೆವಾರ್ಕ್ ಮತ್ತಿತರ ಉತ್ತರದ ಕೈಗಾರಿಕಾ ಪ್ರದೇಶಗಳ ಪ್ರಜಾಕೇಂದ್ರಗಳಲ್ಲಿಯೂ ವಿಶಿಷ್ಟವಾಗಿ ಓವೆನ್ ಮಾದರಿಯ ಶಾಲೆಗಳು ನಡೆಯುತ್ತಿದ್ದವು.[೯೩] ಸಾಲ್‌ಫೋರ್ಡ್ನಲ್ಲಿ ೧೮೩೨ರಲ್ಲಿ ಭಾನುವಾರದ ಮತ್ತು ಸಂಜೆಯ ಶಾಲೆಯು ಇನ್ನೂರು ಮಕ್ಕಳಿಗೆ ಸೌಲಭ್ಯವನ್ನು ಕಲ್ಪಿಸಿತ್ತು. ಸ್ಥಳೀಯ ಪಾದ್ರಿಗಳ ವಿರೋಧದ ನಡುವೆಯೂ ಇದು ನಡೆಯುತ್ತಿತ್ತು. ಅವರಲ್ಲಿ ಒಬ್ಬಾತನಂತೂ "ಬೋಧನೆ ಮಾಡುವ ವೇದಿಕೆಯಿಂದಲೇ, ಇಂಥ ಶಾಲೆಗಳಿಗೆ ಮಕ್ಕಳನ್ನು ಕಳಿಸುವವರು ನರಕಕ್ಕೆ ಹೋಗುತ್ತಾರೆ"[೯೪] ಎಂದು ಬೆದರಿಸಿದ್ದ.

೧೮೨೦ರ ದಶಕದ ಅಂತ್ಯದಲ್ಲಿ ಮತ್ತು ೧೮೩೦ರ ದಶಕದ ಆರಂಭದಲ್ಲಿ ಸಹಕಾರ ಸಂಘಗಳು ಶಾಲೆಗಳನ್ನು ಮತ್ತು ಶೈಕ್ಷಣಿಕ ಚರ್ಚೆಗಳನ್ನು ಸ್ಥಾಪಿಸುವುದು ತಮ್ಮ ಕಾರ್ಯಚಟುವಟಿಕೆಗಳ, ಅಸ್ತಿತ್ವದ ಅವಿಭಾಜ್ಯ ಅಂಗ ಎಂದು ಭಾವಿಸಿದವು. ಅನಂತರ ಜನನಿಬಿಡ ಪ್ರದೇಶಗಳಲ್ಲಿ ಶಾಲೆಗಳನ್ನೇ ಸ್ವತಂತ್ರವಾಗಿ ಸ್ಥಾಪಿಸುವ ಕೆಲಸವೂ ನಡೆಯಿತು. ಇದಾದನಂತರ ವಯಸ್ಕ ಕಾರ್ಮಿಕರಿಗಾಗಿ ಮಾತುಕತೆಗೆಂದು ಸಭಾಂಗಣವನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ಯೋಜನೆಗಳೂ ಬಂದವು. ೧೮೩೨ಕ್ಕೆ ಮುಂಚೆಯೇ ಮ್ಯಾಂಚೆಸ್ಟರ್ ಜಿಲ್ಲೆಯಲ್ಲಿ ಇಂಥ ಮಾತುಗಳು ಕೇಳಿಬಂದಿದ್ದವು. ಓವೆನ್ ಅವರ ಜೀವನಚರಿತ್ರೆಯನ್ನು ಬರೆದ ಲಾಯ್ಡ್ ಜೋನ್ಸ್ ಅವರು ಸಕ್ರಿಯ ಪ್ರಚಾರಕರು ಹೇಗೆ ತಮ್ಮ ಕಾರ್ಯವನ್ನು ವಿಸ್ತರಿಸಲು ಪ್ರಯತ್ನಿಸಿದರೆಂಬುದನ್ನು ವಿವರಿಸಿದ್ದಾರೆ. ೧೮೩೧ರಲ್ಲಿ ಸಾಲ್‌ಫೋರ್ಡ್ ಸಹಕಾರಿ ಅಂಗಡಿಯು ಮುಚ್ಚಿಹೋದಾಗ ಹೀಗಾಯಿತು: “ನಾವು ಬೇರೆ ರೀತಿಯಲ್ಲಿ ಕೆಲಸವನ್ನು ಮುಂದುವರಿಸಿದೆವು. ನಮ್ಮಲ್ಲಿ ಒಂದಿಷ್ಟು ಕಪಾಟುಗಳು, ಮೇಜು-ಕುರ್ಚಿಗಳು ಇದ್ದವು. ನಾವು ವಿಶಾಲವಾದ ಕೋಣೆಗಳನ್ನು ಬಾಡಿಗೆಗೆ ತೆಗೆದುಕೊಂಡು, ಹುಡುಗರಿಗೂ ಹುಡುಗಿಯರಿಗೂ ಮತ್ತು ನಾವು ಹೇಳಿಕೊಡುವುದರಲ್ಲಿ ಉಪಯುಕ್ತವಾದದ್ದಿದೆ ಎಂದು ಭಾವಿಸುವ ವಯಸ್ಕರಿಗೂ ಶಿಕ್ಷಣ ನೀಡಲು ಶಾಲೆಯೊಂದನ್ನು ತೆರೆದೆವು.”

ಅವರ ಸದಸ್ಯರಲ್ಲಿ ಇಬ್ಬರು ಬಡಗಿಗಳಿದ್ದರು. ಅವರು ಕಪಾಟುಗಳನ್ನು ಮತ್ತು ಇತರ ಮರದ ಸಾಮಾನುಗಳನ್ನು ಉಪಯೋಗಿಸಿಕೊಂಡು ಹುಡುಗರು ಕುಳಿತುಕೊಳ್ಳಲು ಡೆಸ್ಕ್‌ಗಳನ್ನು ಮಾಡಿದರು. ಅನಂತರ ಮನೆ ಮನೆಗೆ ಹೋಗಿ ಶಾಲೆ ಸೇರಲು ಮಾಡಿದ ಪ್ರಚಾರದ ಫಲವಾಗಿ ೧೨ ರಿಂದ ೪೦ ವರ್ಷ ವಯಸ್ಸಿನವರೆಗೆ ಎಲ್ಲ ವಯೋಮಾನದ ವಿದ್ಯಾರ್ಥಿಗಳೂ ಶಾಲೆಯಲ್ಲಿ ದಾಖಲಾದರು.[೯೫] ಎಲ್ಲ ಸಂಜೆಗಳಲ್ಲೂ, ಭಾನುವಾರ ಮಾತ್ರ ಇಡೀ ದಿನವೂ ನಡೆಯುತ್ತಿದ್ದ ಈ ಶಾಲೆಗಳಲ್ಲಿ ಕೆಲ ಮಟ್ಟಿಗೆ ಹಿರಿಯರಿಗೂ ಕಿರಿಯರಿಗೂ ಒಟ್ಟಿಗೇ ಕಲಿಸಲಾಗುತ್ತಿತ್ತು. ಅಲ್ಲಿ ಕಲಿಸುತ್ತಿದ್ದ ವಿಷಯಗಳೆಂದರೆ ಓದು-ಬರಹ-ಅಂಕಗಣಿತ (ಥ್ರೀ ಆರ್‌ಗಳು- ರೀಡಿಂಗ್, ರೈಟಿಂಗ್, ಅರ್ತ್ಮೆಟಿಕ್), ಚಿತ್ರಕಲೆ, ಸಂಗೀತ ಮತ್ತು ನೃತ್ಯ. ಇದಲ್ಲದೆ ಮೇಲ್ಮಟ್ಟದ ಗಣಿತ, ವಿಜ್ಞಾನ (ಭೂಗರ್ಭಶಾಸ್ತ್ರ, ಖಗೋಳಶಾಸ್ತ್ರ, ರಸಾಯನಶಾಸ್ತ್ರ) ಮತ್ತು ರಾಜಕೀಯ ಅರ್ಥಶಾಸ್ತ್ರವನ್ನೂ ಕಲಿಸಲಾಗುತ್ತಿತ್ತು. ಈ ಶಾಲೆಯು ೧೬೦ ವಿದ್ಯಾರ್ಥಿಗಳನ್ನು ಹೊಂದಿದ್ದು ಆರು ವರ್ಷಗಳ ಕಾಲ ನಡೆಯಿತು ಮತ್ತು ಮ್ಯಾಂಚೆಸ್ಟರ್ ಜಿಲ್ಲೆಯಲ್ಲಿ ಓವೆನ್‌ವಾದಿ ಚಳವಳಿಗೆ ಬೌದ್ಧಿಕ, ಸಾಮಾಜಿಕ ಮತ್ತು ಪ್ರಚಾರದ ಕೇಂದ್ರವಾಗಿತ್ತು. ಅಲ್ಲದೆ ಹುಲ್ಮ್ ಭಾನುವಾರದ ಶಾಲೆ ಮತ್ತು ವೊರ್‌ಸ್ಲೆಯ ಸಹಕಾರಿ ಕೈಗಾರಿಕಾ ಶಾಲೆಗೆ ಮತ್ತಿತರ ಶೈಕ್ಷಣಿಕ ಪ್ರಯತ್ನಗಳಿಗೆ ಸ್ಫೂರ್ತಿಯಾಯಿತು. ೧೮೩೦ರಲ್ಲಿ ಇದನ್ನು ಪ್ರಥಮ ಓವೆನ್‌ವಾದಿ “ಸಹಕಾರಿ ಮತ್ತು ವೈಜ್ಞಾನಿಕ ಸಂಸ್ಥೆ”ಯಾಗಿ, ವಿಜ್ಞಾನದ ಆಶ್ರಯಧಾಮವಾಗಿ

ಪರಿವರ್ತಿಸಿದಾಗ, ಶೈಕ್ಷಣಿಕ ಚಟುವಟಿಕೆಯ ಹೊಸ ಮಜಲು ಆರಂಭವಾಯಿತು.[೯೬]

## (ii) ನ್ಯೂ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್ಸ್ (ಹೊಸ ಯಂತ್ರಜ್ಞರ ಸಂಸ್ಥೆಗಳು)

ಸಹಕಾರಿ ಸಂಘಗಳು ತಮ್ಮದೇ ಸ್ವಯಂ ಪರಿಪೂರ್ಣ ಸಮುದಾಯಗಳನ್ನು ಸಂಘಟಿಸಿಕೊಂಡ ಮೇಲೆ ಅಥವಾ ತಮ್ಮದೇ ಭೂಮಿಯನ್ನು ಗಳಿಸಿಕೊಂಡ ಮೇಲೆ ಹೊರಗಿನವರ ಮಧ್ಯಪ್ರವೇಶವಿಲ್ಲದೇ ತಮ್ಮದೇ ಶಾಲೆಗಳನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾದರೆ, ಮತ್ತೊಂದೆಡೆ ಶೈಕ್ಷಣಿಕ ಸಂಸ್ಥೆಗಳ ಮೇಲೆ ಕಾರ್ಮಿಕರ ನಿಯಂತ್ರಣವನ್ನು ಸ್ಥಾಪಿಸಲು ಇನ್ನೊಂದು ರೀತಿಯ ಕ್ರಿಯಾಯೋಜನೆಯೇ ಬೇಕಾಗುತ್ತದೆ.

ಲಂಡನ್ ನಗರದಲ್ಲಿ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್‌ನ ಮೇಲಿನ ಹತೋಟಿಯನ್ನು ಕಾರ್ಮಿಕರ ಕೈನಿಂದ ತಪ್ಪಿಸಿ, ತಮ್ಮ ಕೈಗೆ ತೆಗೆದುಕೊಳ್ಳಲು ವಿಗ್ ಮತ್ತು ತೀವ್ರಗಾಮಿಗಳು ದೀರ್ಘ ಹೋರಾಟವನ್ನೇ ನಡೆಸಬೇಕಾಯಿತು. ಆರಂಭದಲ್ಲಿ ಥಾಮಸ್ ಹಾಡ್ಜ್‌ಸ್ಕಿನ್ ಮತ್ತು ಅವರ ಗೆಳೆಯ ರಾಬರ್ಟ್ಸನ್ ಅವರು ಸಂಸ್ಥೆಯು "ನಿಜವಾಗಿ ಕಾರ್ಮಿಕರಿಗೆ ಉಪಯುಕ್ತವಾಗಬೇಕೆಂದರೆ" ಅದು ಸಂಪೂರ್ಣವಾಗಿ ಅವರ ನಿಯಂತ್ರಣಕ್ಕೆ ಒಳಪಡಬೇಕು ಎಂದು ಆಗ್ರಹಿಸಿದ್ದರು. ಅವರ ಪ್ರಕಾರ ಶಿಕ್ಷಣವು ಕಾರ್ಮಿಕರಿಗೆ ಉಪಯುಕ್ತವಾಗಬೇಕೆಂದರೆ ಅದು ಕಾರ್ಮಿಕರಿಗೆ ಬಂಡವಾಳದ ವಿರುದ್ಧದ ಹೋರಾಟದಲ್ಲಿ ಅವರನ್ನು ಸಜ್ಜುಗೊಳಿಸುವ ಗುರಿಯನ್ನು ಹೊಂದಿರಬೇಕು. ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಪ್ರತಿಪಾದನೆಯನ್ನು ಮೊದಲು ಮಾಡಿದ ತಮ್ಮ ಲೇಖನದಲ್ಲಿ ಅವರು ಹೀಗೆಂದಿದ್ದರು, "ಆಳುವವರಿಂದ ಶಿಕ್ಷಣವನ್ನು ಪಡೆಯುವುದಕ್ಕಿಂತ ಜನತೆ ಅಶಿಕ್ಷಿತರಾಗಿ ಉಳಿಯುವುದೇ ಲೇಸು. ಏಕೆಂದರೆ ಅಂಥ ಶಿಕ್ಷಣವು ಎತ್ತನ್ನು ಪಳಗಿಸಿ ನೊಗಕ್ಕೆ ಕಟ್ಟುವಂಥದ್ದು. ಬೇಟೆ ನಾಯಿಗೆ ತರಬೇತಿ ನೀಡುವುದಕ್ಕೆ ಸಮನಾದದ್ದು. ಬೇಟೆನಾಯಿಯು ತನ್ನ ಬಲವಾದ ಸಹಜ ಪ್ರವೃತ್ತಿಯನ್ನು ಹತ್ತಿಕ್ಕಿ, ತನ್ನ ಆಹಾರವಾಗಬೇಕಾದ ಪ್ರಾಣಿಯನ್ನು ತಿನ್ನುವುದರ ಬದಲು, ಲಗುಬಗೆಯಿಂದ ಅದನ್ನೊಯ್ದು ಯಜಮಾನನ ಪದತಲದಲ್ಲಿ ಸಮರ್ಪಿಸುತ್ತದಲ್ಲ ಅಂಥ ಶಿಕ್ಷಣ ಅದು."[೯೭]

ಆದ್ದರಿಂದ ಸಮಾಜ ಸುಧಾರಕರಾದ ಫ್ರಾನ್ಸಿಸ್ ಪ್ಲೇಸ್‌ರವರು ಇಂಥ ಪ್ರಯತ್ನಗಳ ಸೃಷ್ಟಿಕರ್ತರನ್ನು ಬಯಲಿಗೆಳೆದು ಯೋಜನೆಯನ್ನು ಹೊಸ ದಿಕ್ಕಿನತ್ತ ಎಂದರೆ ಹಾಡ್ಜ್‌ಸ್ಕಿನ್ ಮತ್ತು ರಾಬರ್ಟ್ಸನ್‌ರವರು ಅಷ್ಟೊಂದು ಚೆನ್ನಾಗಿ ಚಿತ್ರಿಸಿರುವಂಥ ಉದ್ದೇಶದತ್ತ ಕೊಂಡೊಯ್ಯಲು ಎಲ್ಲ ಪ್ರಯತ್ನಗಳನ್ನು ಮಾಡಿದರು ಎನ್ನುವುದು ಅಚ್ಚರಿಯೇನಲ್ಲ. ಮತ್ತೊಂದೆಡೆ, ಉದಾಹರಣೆಗೆ, ಮ್ಯಾಂಚೆಸ್ಟರ್, ಲೀಡ್ಸ್, ಬರ್ಮಿಂಗ್‌ಹ್ಯಾಮ್‌ಗಳಲ್ಲಿ ಮೆಕಾನಿಕ್ಸ್

ಇನ್‌ಸ್ಟಿಟ್ಯೂಟ್‌ಗಳನ್ನು ಸ್ಥಾಪಿಸುವುದಕ್ಕೆ ಮುಂದೊಡಗನ್ನು ತೆಗೆದುಕೊಂಡಿದ್ದ ವರ್ತಕರು ಪ್ರಾರಂಭದಿಂದಲೂ ಅದನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣದಲ್ಲೇ ಉಳಿಸಿಕೊಂಡಿದ್ದರು. ಅವರ ಉದ್ದೇಶವು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು, ಕಾರ್ಖಾನೆ ನಡೆಸುವ ಸ್ವಾತಂತ್ರ್ಯ, ಆಸ್ತಿಯ ಭದ್ರತೆ ಮುಂತಾದ ನೀತಿಗಳನ್ನು ಮಕ್ಕಳ ಮನಸ್ಸಿನಲ್ಲಿ ಬೇರೂರುವಂತೆ ಮಾಡುವುದೇ ಆಗಿತ್ತು. ಈ ಗುರಿಯನ್ನು ಸಾಧಿಸುವುದಕ್ಕಾಗಿ ಅವರು ಎಲ್ಲ ರೀತಿಯ ರಾಜಕೀಯ, ಧಾರ್ಮಿಕವಾದ-ವಿವಾದಗಳನ್ನು ಮುಕ್ತ ಚರ್ಚೆಗಳನ್ನು ನಿಷೇಧಿಸಿದರು. ಕಡೆಗೆ ವೃತ್ತಪತ್ರಿಕೆಗಳನ್ನು ಸಹ ಸಂಸ್ಥೆಯ ಆವರಣದೊಳಗೆ ಬಿಡುತ್ತಿರಲಿಲ್ಲ. ಅದೇ ಸಮಯದಲ್ಲಿ ಅವರು ಕಾರ್ಮಿಕರೊಂದಿಗೆ ವ್ಯವಹರಿಸುವಾಗ ಅದೆಂಥ ಅನುಗ್ರಹದ, ದಯಾಭಿಕ್ಷೆಯ ಧೋರಣೆಯನ್ನು ತಳೆಯುತ್ತಿದ್ದರೆಂದರೆ, ಅವರು ಯಾರನ್ನು ಪ್ರಭಾವಿಸಲು ಯತ್ನಿಸುತ್ತಿದ್ದರೋ, ಅವರೇ ಇವರನ್ನು ನೋಡಿದರೆ ಸಿಡಿದು ದೂರಕ್ಕೆ ಹೋಗಿಬಿಡುತ್ತಿದ್ದರು.

ಎಲ್ಲ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್‌ಗಳಿಗೆ ಪ್ರಾಥಮಿಕ ಮಾದರಿಯಾಗಿದ್ದ ಗ್ಲಾಸ್ಗೋ ಪಟ್ಟಣದ ಆ್ಯಂಡರ್ಸೋನಿಯನ್ ಇನ್‌ಸ್ಟಿಟ್ಯೂಟ್‌ನಲ್ಲಿ ಇಂಥ ಧೋರಣೆಗೆ ಅತ್ಯಂತ ನಿರ್ಣಾಯಕವಾದ ಪ್ರತಿಕ್ರಿಯೆ ಕಂಡುಬಂದಿತು. ಅಲ್ಲಿಯವರೆಗೂ ಕಾರ್ಮಿಕರ ನಿಯಂತ್ರಣದಲ್ಲಿದ್ದ ಗ್ರಂಥಾಲಯ ಮತ್ತಿತರ ಉಪಕರಣಗಳ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡಲೆತ್ನಿಸಿದಾಗ ಪ್ರತಿಭಟನೆಯ ಕಿಡಿ ಹೊತ್ತಿಕೊಂಡಿತು. ಇದರ ಅಂತಿಮ ಫಲಿತಾಂಶವೆಂದರೆ ಕಾರ್ಮಿಕರ ಅತಿ ದೊಡ್ಡ ಭಾಗವು ಸಂಸ್ಥೆಯಿಂದ ಹೊರಬಂದು ೧೮೨೩ರಲ್ಲಿ "ಗ್ಲಾಸ್ಗೋ ಮೆಕಾನಿಕ್ಸ್ ಇನ್‌ಸ್ಟಿಟ್ಯೂಶನ್"ನನ್ನು ಆರಂಭಿಸಿದ್ದು. ಹೀಗೆ ಹೊರಬಂದವರು ೩೭೪ ಸದಸ್ಯರನ್ನು ನೋಂದಾಯಿಸಿದರು. ಅದರ ಹಣಕಾಸಿನ ಹಾಗೂ ಶೈಕ್ಷಣಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವ ಪ್ರಶ್ನೆಯು ಆರಂಭದಿಂದಲೇ ಮುನ್ನೆಲೆಗೆ ಬಂದಿತ್ತು. ಹೀಗಾಗಿ ಸಂಘಟನೆಯು ಆರಂಭದಲ್ಲೇ ಸ್ಪಷ್ಟಪಡಿಸಿದ ಸಂಗತಿ ಇದು.

"ಗ್ಲಾಸ್ಗೋ ಪಟ್ಟಣದ ಶ್ರೀಮಂತರು ಮತ್ತು ಪ್ರಭಾವಶಾಲಿ ನಾಗರಿಕರ ನೆರವಿಲ್ಲದೆ ಸಂಸ್ಥೆಯು ಆರಂಭವಾಗಿರುವುದರಿಂದ, ಅದು ಮುಂದೆಯೂ ಅವರ ಸಹಾಯವನ್ನು ತೆಗೆದುಕೊಳ್ಳದೆ ಮುನ್ನಡೆಯಬೇಕು ಮತ್ತು ಅದು ಯಾವುದೇ ರೀತಿಯ ಆಸ್ತಿಯನ್ನು ಗಳಿಸಿದರೂ ಅದು ಗ್ಲಾಸ್ಗೋ ಪಟ್ಟಣದ ಮೆಕಾನಿಕ್‌ಗಳಿಗೇ ಎಲ್ಲ ಕಾಲಕ್ಕೂ ಸೇರತಕ್ಕದ್ದು."[೯೮]

ಬ್ರೌಘಾಮ್ ಅವರು ತಮ್ಮ "ಪ್ರಾಕ್ಟಿಕಲ್ ಅಬ್ಸರ್ವೇಶನ್ಸ್" ಪುಸ್ತಕದಲ್ಲಿ ಕಾರ್ಮಿಕರನ್ನು ತುಂಬ ಬಿಗಿಯಾದ ಹಿಡಿತದಲ್ಲಿ ಇಟ್ಟುಕೊಳ್ಳಬಾರದು ಎಂದು ಎಚ್ಚರಿಸಿದ್ದರು. ಅವರಿಗೆ ಗಣನೀಯ ಪ್ರಮಾಣದಲ್ಲಿ ಸ್ವಾತಂತ್ರ್ಯವನ್ನು ನೀಡಬೇಕು, ರಾಜಕೀಯ ಚರ್ಚೆಯನ್ನು ನಡೆಸಲು ಅವಕಾಶ ನೀಡುವುದು ಸಹ ಅನುಕೂಲಕರವೇ ಆಗಬಹುದು ಎಂದು ಅವರು ವಾದಿಸಿದ್ದರು. ಕೌಶಲವಿರುವ

ಕಾರ್ಮಿಕರನ್ನು ಬಂಡವಾಳದ ಬೆಂಬಲಕ್ಕೆ ಆಕರ್ಷಿಸಬೇಕೆಂದರೆ, ಆತ್ಮಗೌರವವಿರುವ ಕಾರ್ಮಿಕರನ್ನು ದೂರ ತಳ್ಳುವಂತಾಗಬಾರದು ಎಂಬುದು ಸ್ಪಷ್ಟ. ಆದರೆ ಈ ಪಾಠವನ್ನು ಸ್ವೀಕರಿಸಲಿಲ್ಲ. ವಿಶೇಷವಾಗಿ ಮ್ಯಾಂಚೆಸ್ಟರ್‌ನಲ್ಲಿ ಹೇವುಡ್ ಮತ್ತು ಆತನ ಜೊತೆಯಲ್ಲಿದ್ದ ಕಾರ್ಖಾನೆ ಮಾಲೀಕರು ಪ್ರತಿಭಟನೆಗಳಿಗೆ ಮನ್ನಣೆ ನೀಡಿ ಯಾವ ರಿಯಾಯಿತಿ ನೀಡಲೂ ಸಿದ್ಧರಿರಲಿಲ್ಲ. ಸಂಸ್ಥೆ ನಡೆಸಿಕೊಂಡು ಹೋಗುವಲ್ಲಿ ಕಾರ್ಮಿಕರಿಗೆ ಭಾಗವಹಿಸಲು ಯಾವ ಅವಕಾಶವನ್ನೂ ನೀಡಲಿಲ್ಲ.

ಇಲ್ಲಿ ಹುಟ್ಟಿದ ಪ್ರತಿಭಟನೆಯು ಸಣ್ಣಪುಟ್ಟ ಕಿರುಕುಳಗಳಿಗೆ ಬಂದ ಪ್ರತಿಕ್ರಿಯೆ ಅಲ್ಲ. ಬದಲಿಗೆ ಅಂದಿನ ಮಧ್ಯಮ ವರ್ಗವು (ಬೂರ್ಶ್ವಾ ವರ್ಗ-ಬಂಡವಾಳಶಾಹಿಗಳು) ತನ್ನದೇ ಹಿತಾಸಕ್ತಿಯಲ್ಲಿ ಕಾರ್ಮಿಕರ ಶಿಕ್ಷಣವನ್ನು ನಿಯಂತ್ರಿಸಲೆತ್ನಿಸುತ್ತಿದೆ, ಅದರ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಲೆತ್ನಿಸುತ್ತದೆ ಎಂಬ ಆತಂಕದ ವಿರುದ್ಧ ಎದ್ದು ಬಂದಂಥ ಸವಾಲು. ಲ್ಯಾಂಕಾಶೈರಿನಲ್ಲಿ ಸ್ಥಾಪಿತವಾದ, ಎಂದರೆ ಮೊದಲು ಹುಲ್ಮ್ ಮತ್ತು ಸಾಲ್‌ಫೋರ್ಡ್ ಪಟ್ಟಣಗಳಲ್ಲಿ ಮತ್ತು ಅನಂತರ ಮ್ಯಾಂಚೆಸ್ಟರ್ ನಗರದಲ್ಲೇ ಸ್ಥಾಪಿತವಾದ, ಸ್ವತಂತ್ರ ಮೆಕಾನಿಕ್ಸ್ ಸಂಸ್ಥೆಗಳ ಹಿಂದೆ ಇದ್ದಂಥ ಪ್ರೇರಕಶಕ್ತಿ ಎಂದರೆ ರೌಲಂಡ್ ಡೆಟ್ರ್ಯಾಸಿಯರ್‌ರವರು. "ಜನತೆಗೆ ಜ್ಞಾನವನ್ನು ನೀಡಿದರೆ ಅದೇ ಅವರ ರಾಜಕೀಯ ಶಕ್ತಿಯ ಮೂಲಾಧಾರವಾಗಿರುತ್ತದೆ" ಎಂದು ಅವರು ನಂಬಿದ್ದರು ಮತ್ತು ಅವಶ್ಯಕವಾದ ಜ್ಞಾನವನ್ನು ಪಡೆಯಲು ಕಾರ್ಮಿಕರು ತಮ್ಮ ಶೈಕ್ಷಣಿಕ ಕೇಂದ್ರಗಳನ್ನು ತಾವೇ ಸ್ಥಾಪಿಸಿ ನಡೆಸಿಕೊಂಡು ಹೋಗಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದರು.[೯೯]

ಈಗ ಸಿದ್ಧಾಂತಿಗಳು, ಚಿಂತಕರು ಮುಂದಿಟ್ಟಿದ್ದ ಪರಿಕಲ್ಪನೆಗಳನ್ನು ಆಚರಣೆಗೆ ಇಳಿಸಿದವರು ಲ್ಯಾಂಕಾಶೈರ್‌ನ ಹತ್ತಿ ಗಿರಣಿಗಳಲ್ಲಿ ಹುಟ್ಟಿ ಬೆಳೆದ, ಸ್ವಾಧ್ಯಯನದಿಂದ ಶಿಕ್ಷಿತರಾದ ಒಬ್ಬ ಕಾರ್ಮಿಕರಾದ ಡೆಟ್ರ್ಯಾಸಿಯರ್, ಅವರು ವಿಭಜಿತ ಮ್ಯಾಂಚೆಸ್ಟರ್ ಇನ್‌ಸ್ಟಿಟ್ಯೂಟ್‌ನ ಪ್ರಥಮ ಅಧ್ಯಕ್ಷರಾದರು. ಎರಡು ವರ್ಷಗಳ ಅನಂತರ ಅವರು ಇನ್ನಷ್ಟು ಅಭಿವೃದ್ಧಿಗಾಗಿ ಆಗ್ರಹಿಸಲಾರಂಭಿಸಿದರು.

ಡೆಟ್ರ್ಯಾಸಿಯರ್ ಅವರು ೧೮೩೧ರಲ್ಲಿ ತಾವು ಮಾಡಿದಂತಹ "ಪ್ರಸ್ತಾವಿತ ಮೆಕಾನಿಕ್ಸ್ ವಿಜ್ಞಾನ ಸಂಸ್ಥೆಯ ಧನಾತ್ಮಕ ಅಂಶಗಳು" ಎಂಬ ಉಪನ್ಯಾಸದಲ್ಲಿ ಮನುಷ್ಯನು ತನ್ನ ಶಿಕ್ಷಣ ಮತ್ತು ಪರಿಸ್ಥಿತಿಯ ಫಲವಾಗಿರುತ್ತಾನೆ, ಉತ್ಪನ್ನವಾಗಿರುತ್ತಾನೆ ಎಂಬ ವಿಷಯದ ಮೇಲೆ ಬೆಳಕು ಚೆಲ್ಲುತ್ತಾ, ಕಾರ್ಮಿಕರ ಅಧಃಪತನಕ್ಕೆ ಅವರು ಸ್ವತಃ ಕಾರಣರಲ್ಲ ಎಂಬ ವಾದವನ್ನು ಬಲವಾಗಿ ಮಂಡಿಸುತ್ತಾರೆ. ಅವರು ಕಾರ್ಮಿಕ ವರ್ಗವನ್ನು ಕುರಿತಾಗಿದ್ದ ಅನುಭವದಿಂದ ಹೇಳುವ ನೇರವಾದ ಮಾತುಗಳು, ಬೆಳೆಯುತ್ತಿದ್ದ ಬಂಡವಾಳಶಾಹಿ ಪದ್ಧತಿಯ ಎಲ್ಲ ಕೆಡಕುಗಳಿಗೆ ಕಾರಣ ಸ್ವತಃ ಕಾರ್ಮಿಕರೇ ಎಂದು ಆಪಾದಿಸುತ್ತಿದ್ದ ಹಾಗೂ ಜನರಿಂದ ದೂರನಿಂತು ವಿಶ್ಲೇಷಿಸುತ್ತಿದ್ದ ತತ್ತ್ವಶಾಸ್ತ್ರೀಯ ತೀವ್ರಗಾಮಿಗಳ

ನಿಲುವಿಗೆ ವಿರುದ್ಧವಾಗಿತ್ತು ಮತ್ತು ಅದೇ ರೀತಿಯಲ್ಲಿ ಅವರು ಜೇಮ್ಸ್ ಕೇ ಅವರು ಕಾರ್ಮಿಕರ ಸಂಕಟವನ್ನು ಕಂಡು ಅದರ ಬಗ್ಗೆ ಸಹಾನುಭೂತಿಯ ಬದಲು ಭಯಪಟ್ಟುಕೊಂಡ ಧೋರಣೆಗೂ ವಿರುದ್ಧವಾಗಿದ್ದರು. ಡೆಟ್ರಾಸಿಯರ್ ಕೇಳುತ್ತಾರೆ: "ಈ ಜ್ಞಾನಿಗಳ, ಬುದ್ಧಿವಂತರ ದೇಶದಲ್ಲಿ ಬೆಳಗ್ಗೆ ಎದ್ದಾಗಿನಿಂದ ದುಡಿಯುತ್ತಾ, ರಾತ್ರಿ ನೇರವಾಗಿ ನಿದ್ದೆಗೆ ಜಾರುವವರು ಸಹಸ್ರಾರು ಸಂಖ್ಯೆಯಲ್ಲಿಲ್ಲವೇ? ಅವರ ಪರಿಸ್ಥಿತಿಯಲ್ಲಿ ಇನ್ನೇನು ತಾನೆ ಸಾಧ್ಯವಿದೆ! ಈ ಮಾನವೀಯ ರಾಷ್ಟ್ರದಲ್ಲಿ ಸಹಸ್ರಾರು ಜನ ಶೈಶವಾವಸ್ಥೆಯನ್ನು ದಾಟುವಷ್ಟರಲ್ಲಿಯೇ ದುಡಿಮೆಗೆ ತಳ್ಳಲ್ಪಡುತ್ತಿಲ್ಲವೇ? ಸಹಸ್ರಾರು ಜನರಿಗೆ ಸಿಗುವ ಶಿಕ್ಷಣವು ಅಜ್ಞಾನ ಮತ್ತು ಪಾಶವೀ ನಡವಳಿಕೆಯ ಕಲಿಕೆಯಷ್ಟೇ ಅಲ್ಲವೇ?"

ಕಾರ್ಮಿಕರು ಇಂದು ಜೀತದಾಳುಗಳಾಗಿಲ್ಲ ನಿಜ. ಆದರೆ ಏನಾಗಿದ್ದಾರೆ; "ಅವರು ವಾಣಿಜ್ಯದ ಗುಲಾಮರಾಗಿದ್ದಾರೆ, ಕೆಟ್ಟ ಸರ್ಕಾರಗಳ ಬಲಿಪಶುಗಳಾಗಿದ್ದಾರೆ, ನಿತ್ಯವೂ ಹುಟ್ಟುವ ಅವಶ್ಯಕತೆಗಳಿಗಾಗಿ ಅವರು ಪ್ರಯಾಸಕರ ದುಡಿಮೆಗೆ ತಳ್ಳಲ್ಪಟ್ಟಿದ್ದಾರೆ. ಬದುಕಿನ ಬೇಡಿಕೆಗಳು ಅವರ ಮೇಲೆ ಸವಾರಿ ಮಾಡುತ್ತವೆ. ಶರೀರವನ್ನು ಕಾಪಾಡಿಕೊಳ್ಳಬೇಕಾದ ಒಂದು ಅಗತ್ಯದತ್ತ ಅವರು ಮನಸ್ಸನ್ನು ಸಂಪೂರ್ಣವಾಗಿ ಕೇಂದ್ರೀಕರಿಸಬೇಕಾಗುತ್ತದೆ. ತಮ್ಮ ಎಲ್ಲ ಶಕ್ತಿಯನ್ನೂ ವಿನಿಯೋಗಿಸಬೇಕಾಗುತ್ತದೆ. ಈ ಅಗತ್ಯದ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಅವರ ದುಡಿಯುವ ಶಕ್ತಿಯನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ."[೧೦೦]

ಈ ಶೋಷಣೆಯಿಂದ ಬಿಡುಗಡೆ ಹೊಂದಬೇಕೆಂದರೆ ಕಾರ್ಮಿಕರು ರಾಜಕೀಯ ಶಕ್ತಿಯನ್ನು ಪಡೆದುಕೊಳ್ಳಬೇಕು. ಅದಕ್ಕಾಗಿ ಅವರು ರಾಜಕೀಯ ಮತ್ತು ನೈತಿಕ ಜ್ಞಾನವನ್ನು ಪಡೆದುಕೊಳ್ಳಬೇಕು. ಇದನ್ನು ಅವರ ಒಡೆಯರು ಅವರಿಗೆ ನೀಡುವುದಿಲ್ಲ. ಅವರು ಇದನ್ನು ತಮ್ಮದೇ ನಿಯಂತ್ರಣದಲ್ಲಿರುವ ಹೊರ ಶೈಕ್ಷಣಿಕ ಕೇಂದ್ರಗಳಲ್ಲಿ ಪಡೆದುಕೊಳ್ಳಬೇಕು.

"ಈ ದೇಶದ ಜನತೆ ತಿಳಿವಳಿಕಸ್ಥರಾಗುವುದು ಹೇಗೆ; ಅವರಾದರೋ ಮಾನವ ವಿವೇಕಕ್ಕೆ ಅಪಮಾನ ಮಾಡುವಂಥ ಶಿಕ್ಷಣದ ಘೋರವಾದ ವಿಡಂಬನೆಗೆ ತುತ್ತಾಗಿದ್ದಾರೆ. ವಾರಾಂತ್ಯದಿಂದ ವಾರಾಂತ್ಯದ ನಡುವೆ ಹೇಗೋ ಬಾಯಿಗೆ ಆಹಾರವನ್ನು ತುರುಕಿಕೊಳ್ಳುವುದಕ್ಕೆ ಮಾತ್ರ ಸಮಯವಿರುವ ಈ ಜನ, ಅಧ್ಯಯನಕ್ಕೆ ಹೇಗೆ ಸಮಯವನ್ನು ವಿನಿಯೋಗಿಸಬಲ್ಲರು? ಮೊದಲನೆಯ ಪ್ರಶ್ನೆಗೆ ನನ್ನ ಉತ್ತರವೆಂದರೆ, ನಿಮ್ಮ ಶಿಕ್ಷಣಸಂಸ್ಥೆಗಳನ್ನು ನೀವೇ ಆರಂಭಿಸಿರಿ. ಅಲ್ಲಿ ಪ್ರತಿಯೊಬ್ಬರಿಗೂ ಸಾಧ್ಯವಾದಷ್ಟು ಉನ್ನತ ಜ್ಞಾನವನ್ನು ನೀಡುವುದೇ ಗುರಿಯಾಗಲಿ, ಮೂಲಾಧಾರ ತತ್ತ್ವವಾಗಲಿ. ಎಲ್ಲರಿಗೂ ಅತಿ ಹೆಚ್ಚು ಮಟ್ಟದಲ್ಲಿ ಆನಂದ ದೊರಕುವಂತಾಗಲಿ. ಅಲ್ಲಿ ತರುಣರಿಗೆ ದೊರಕುವ ಶಿಕ್ಷಣವು ಭವಿಷ್ಯದ ನಿಜವಾದ ಮಾನವರನ್ನು ಸೃಷ್ಟಿಸುವಂತಿರಲಿ; ಅಲ್ಲಿ ಯಾರು ನಾಗರಿಕ ಮತ್ತು ರಾಜಕೀಯ

ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸಜ್ಜಾಗಿರುತ್ತಾರೋ ಅವರಿಗೆ ಅತ್ಯುನ್ನತ ಗೌರವಗಳು ಮೀಸಲಾಗಿರಲಿ. ಸಂಕ್ಷೇಪವಾಗಿ ಹೇಳಬೇಕೆಂದರೆ ಅಲ್ಲಿ ಶಿಕ್ಷಣವು ವಿಚಾರಶೀಲವಾಗಿರಲಿ. ಅಲ್ಲಿ ನಿಮ್ಮ ಹೆಣ್ಣು ಮಕ್ಕಳಿಗೆ ಒಳ್ಳೆಯ ತಾಯಂದಿರಾಗುವುದನ್ನು, ಮಡದಿಯಾಗುವುದನ್ನು, ನಿಮ್ಮ ಗಂಡುಹುಡುಗರು ಅತ್ಯುತ್ತಮ ನಾಗರಿಕರಾಗುವುದನ್ನು, ಪತಿಯರಾಗುವುದನ್ನು, ತಂದೆಯರಾಗುವುದನ್ನು ಕಲಿಯಲಿ."[೧೦೧]

ಇಲ್ಲಿ ಡೆಟ್ರಾಸಿಯರ್ ಅವರು ತರುಣರನ್ನು ಯೋಗ್ಯರೀತಿಯಲ್ಲಿ ಬೆಳೆಸುವುದರ ಬಗ್ಗೆ ಮಾತ್ರ ಗಮನವಿರಿಸಿಲ್ಲ, ಕಾರ್ಮಿಕರ ರಾಜಕೀಯ ಮತ್ತು ಶೈಕ್ಷಣಿಕ ಸಂಘಟನೆಯ ಬಗ್ಗೆಯೂ ಅವರು ಯೋಚಿಸುತ್ತಿದ್ದಾರೆ. ಕಾರ್ಮಿಕರು ಒಂದಾಗಿ ಚರ್ಚಿಸಬೇಕಾದಂತಹ ಅನೇಕ ರಾಜಕೀಯ, ಆರ್ಥಿಕ ವಿಷಯಗಳಿವೆ ಮತ್ತು ಅನಂತರ ಅವರು ತಮ್ಮನ್ನು ಕಾಡುವ ಕೆಡಕುಗಳನ್ನು ನಿವಾರಿಸಿಕೊಳ್ಳಲು ಮಾರ್ಗೋಪಾಯಗಳನ್ನು ನಿರ್ಧರಿಸಬೇಕು. ಆದರೆ ತಮ್ಮ "ಶ್ರಮದ ಮೌಲ್ಯವನ್ನು ರಕ್ಷಿಸಿಕೊಳ್ಳಬೇಕು" ಎಂದು ನಿರ್ಧರಿಸುವುದಾದರೆ, ಅದನ್ನು ಅವರು ಎಲ್ಲಿ ಚರ್ಚಿಸಬೇಕು. ಸಾರ್ವಜನಿಕ ಸ್ಥಳಗಳಲ್ಲೇ? "ನಿಮ್ಮ ಶತ್ರುಗಳ ಶಿಬಿರದಲ್ಲೇ ಕುಳಿತು ಚರ್ಚೆ ನಡೆಸಲಾಗುತ್ತದೆಯೇ? ನೀವು ಗಳಿಸಿದ್ದಲ್ಲಿ ಒಂದು ಭಾಗವನ್ನು ನೀವು ನಿಷ್ಫಲವಾದ, ಪಾಪ ಕೃತ್ಯಕ್ಕೆ ಖರ್ಚು ಮಾಡಬೇಕೇ? ನಿಮ್ಮ ಶತ್ರುಗಳಿಗೆ ನಿಮ್ಮ ಬಗ್ಗೆ ಇನ್ನಷ್ಟು ಚೆನ್ನಾಗಿ ತಿಳಿಯುವಂತಾಗಬೇಕೇ?'' ಇದಕ್ಕೆಲ್ಲ ಒಂದು ಸುಲಭ ಪರಿಹಾರವಿದೆ. "ನಿಮಗೆ ನಿಮ್ಮದು ಎಂದು ಹೇಳಿಕೊಳ್ಳಬಹುದಾದಂತಹ ಒಂದು ಕೋಣೆಯೂ ಇಲ್ಲ. ಅದನ್ನು ನೀವೇ ಏಕೆ ಕಟ್ಟಿಕೊಳ್ಳಬಾರದು. ನೀವೇಕೆ ನಿಮ್ಮದೇ ಸಭಾಂಗಣವನ್ನು ನಿರ್ಮಿಸಿಕೊಳ್ಳಬಾರದು? ಅದು ನಿಮ್ಮದೇ ಆಗಿದ್ದು ನೀವಲ್ಲಿ ಸಭೆ ಸೇರಬಹುದು, ನಿಮ್ಮ ಶ್ರಮದ ಮೌಲ್ಯವನ್ನು ರಕ್ಷಿಸಿಕೊಳ್ಳುವುದರ ಬಗ್ಗೆ ಚರ್ಚಿಸುವುದಕ್ಕೆ ಮಾತ್ರ ಅಲ್ಲ, ನಿಮ್ಮ ರಾಜಕೀಯ ಉದ್ದೇಶಗಳಿಗಾಗಿ ಮತ್ತು ಮಾನವಕುಲಕ್ಕೆ ಹೆಚ್ಚಿನ ಮಟ್ಟದ ಸ್ವಾತಂತ್ರ್ಯವನ್ನು, ಸಂಪತ್ತನ್ನು ಖಚಿತಪಡಿಸಿದ ಮಹಾನ್ ರಾಜಕೀಯ ಘಟನೆಗಳ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕಾಗಿ ಸಹ."[೧೦೨]

ಆದ್ದರಿಂದ ಡೆಟ್ರಾಸಿಯರ್ ಅವರು ಕಾರ್ಮಿಕರಿಗೆ ಒಂದು ವಾಚನಾಲಯ, ಒಂದು ಕಾಫಿ ಕ್ಲಬ್, ಒಂದು ಸಭಾಂಗಣ ಇವೆಲ್ಲವನ್ನೂ ನಿರ್ಮಿಸಲು ಆಗ್ರಹಿಸುತ್ತಾರೆ. ಸಭಾಂಗಣದಲ್ಲಿ ಅವರು ಎಲ್ಲ ಮಹತ್ತ್ವದ ವಿಷಯಗಳನ್ನು, ಎಂದರೆ, "ಬಂಡವಾಳ, ಜನಸಂಖ್ಯೆ, ಬೇಡಿಕೆ ಮತ್ತು ಪೂರೈಕೆ ಮತ್ತು ಮುಖ್ಯವಾಗಿ ಇಂದಿನ ದಿನಗಳಲ್ಲಿ ಕಾರ್ಮಿಕರ ಮನಸ್ಸನ್ನು ಸದಾ ಕಾಡುವ ಶ್ರಮಕ್ಕೆ ಸಿಗಬೇಕಾದ ಕೂಲಿ, ಸಹಕಾರಿ ಯೂನಿಯನ್‌ಗಳು" ಇವೆಲ್ಲವನ್ನೂ ಚರ್ಚಿಸಬಹುದು ಮತ್ತು ಅವರು ಇದೇ ಸ್ಥಳದಲ್ಲಿ ಅಗ್ಗವಾದ ಮತ್ತು "ಇಂದು ಜನತೆಯ ಕೈಗೆಟುಕುವಂತಿರುವ ಯಾವುದೇ ಸಂಸ್ಥೆ ನೀಡಬಹುದಾದ ಶಿಕ್ಷಣಕ್ಕಿಂತ ಗುಣಮಟ್ಟದಲ್ಲಿ ಉತ್ತಮವಾದ" ಶಿಕ್ಷಣವನ್ನು ಪಡೆಯಬಹುದು

ಮತ್ತು ಅದು ಹೊಸ ಸಮಾಜವನ್ನು ನಿರ್ಮಿಸಲಿಕ್ಕಾಗಿ ಸಜ್ಜುಗೊಳಿಸುವಂಥದ್ದಾಗಿರುತ್ತದೆ.

"ನೀವು ಸುಧಾರಣೆಗಾಗಿ ನಿಟ್ಟುಸಿರು ಬಿಡುತ್ತೀರಿ, ದುಬಾರಿಯಲ್ಲದ ಸಮರ್ಥ ಸರ್ಕಾರಕ್ಕಾಗಿ ಏದುಸಿರುಬಿಡುತ್ತೀರಿ, ಬಹುಸಂಖ್ಯಾತರ ಹಿತಾಸಕ್ತಿಗಳ ಬಗ್ಗೆ ಗಮನಹರಿಸಬೇಕೆಂದು ಆಗ್ರಹಿಸುತ್ತೀರಿ. ಸುಮಾರು ಇಪ್ಪತ್ತು ವರ್ಷಗಳ ಕಾಲ ನಾವು ಅಂತಹ ಸಾಮಾನ್ಯ ನೈತಿಕ ಶಿಕ್ಷಣವನ್ನು, ರಾಜಕೀಯ ಶಿಕ್ಷಣವನ್ನು ನೀಡವುದಾದರೆ, ನಾವು ಈ ದೇಶದಲ್ಲಿ ಎಂಥ ತರುಣ ಸಮುದಾಯವನ್ನು ತಯಾರು ಮಾಡುತ್ತೇವೆಂದರೆ, ಅವರು ಬಹಳ ಚೆನ್ನಾಗಿ ನೈತಿಕ ತತ್ತ್ವಗಳಲ್ಲಿ ದೃಢವಾಗಿರುತ್ತಾರೆ, ರಾಜಕೀಯ ನ್ಯಾಯವನ್ನು ಕುರಿತು ಪಾರಂಗತರಾಗಿರುತ್ತಾರೆ, ಅದನ್ನು ಸ್ಥಾಪಿಸಲು ಬೆಂಬಲಿಸಲು ತಯಾರಿರುತ್ತಾರೆ. ಹೀಗಾಗಿ ಅವರ ಸಂಕಲ್ಪಶಕ್ತಿಯ ಅಭಿವ್ಯಕ್ತಿಯಿಂದಾಗಿ ಮನುಕುಲವು ಬಯಸುವ, ಆಶಿಸುವ ಎಲ್ಲವನ್ನೂ ಸಾಧಿಸಬಲ್ಲ ಸರ್ವಶಕ್ತರಾಗಿರುತ್ತಾರೆ."[೧೦೩]

ಹೀಗೆ ಅಂದಿನ ಕೈಗಾರಿಕಾ ಉತ್ಪಾದನೆಯ, ಉತ್ತರ ದಿಕ್ಕಿನ ಭಾಗದ ಮುಖ್ಯ ಕೇಂದ್ರದಲ್ಲಿ, ಶಿಕ್ಷಣ ಹಾಗೂ ಜ್ಞಾನೋದಯಕ್ಕಾಗಿ ಕಾರ್ಮಿಕ ವರ್ಗವು ಅತ್ಯಂತ ಸ್ಪಷ್ಟ ರೀತಿಯಲ್ಲಿ ಅಭಿವ್ಯಕ್ತಿಸಿದ ಬೇಡಿಕೆ ನಮಗೆ ಕಾಣಸಿಗುತ್ತದೆ. ಆದರೆ ಈ ಬೇಡಿಕೆ ಅಮೂರ್ತ ರೀತಿಯದ್ದಲ್ಲ. ಅದು ವಿಚಾರ ಮತ್ತು ನ್ಯಾಯದ ಆಧಾರದ ಮೇಲೆ ರಚಿತವಾದ ಉತ್ತಮ ಸಮಾಜವನ್ನು ಕುರಿತು ಓವೆನ್‌ವಾದಿ ಮುನ್ನೋಟದಿಂದ ಪ್ರೇರಣೆ ಪಡೆದಂಥ, ರಾಜಕೀಯ ಮತ್ತು ಕೈಗಾರಿಕಾ ಕಾರ್ಯಾಚರಣೆಯ ಜೀವಂತ ಚಳವಳಿಯಿಂದ ಹೊರಹೊಮ್ಮಿರುವಂಥದ್ದು.

ಡೆಟ್ರಾಸಿಯರ್ ಅವರ ಈ ಮುಂದೊಡಗಿಗೆ, ಲ್ಯಾಂಕಾಶೈರ್‌ನ ಹತ್ತಿ ಕೆಲಸಗಾರರ ಸಂಘಟನಾಕಾರರು ಮತ್ತು ನಾಯಕರಾದ, ಆ ಕಾಲದ ಅತ್ಯಂತ ಪ್ರಭಾವಶಾಲಿ ಟ್ರೇಡ್ ಯೂನಿಯನ್ (ಕಾರ್ಮಿಕ ಸಂಘ) ಸಂಘಟನಾಕಾರ ಜಾನ್ ಡೊಹರ್ಟಿರವರಿಂದ ಬೆಂಬಲವು ಕೂಡಲೇ ಒದಗಿ ಬಂತು. ಡೊಹರ್ಟಿಯವರು ತಮ್ಮ ಪತ್ರಿಕೆಯಲ್ಲಿ 'ದ ಪೂರ್ ಮ್ಯಾನ್ಸ್ ಅಡ್ವೋಕೇಟ್ ಅಂಡ್ ಪೀಪಲ್ಸ್ ಲೈಬ್ರರಿ' (ಬಡವರ ವಕೀಲ ಮತ್ತು ಜನತೆಯ ಗ್ರಂಥಾಲಯ) ಎಂಬ ಮುಖ್ಯ ಲೇಖನವನ್ನು ಪ್ರಕಟಿಸಿದರು. ಅದರಲ್ಲಿ ಅವರು ತಮ್ಮದೇ ಆದ ಕಟ್ಟಡವೊಂದನ್ನು ಕಟ್ಟುವ ಕಾರ್ಮಿಕರ ಯತ್ನವನ್ನು ಹೀಗೆ ಹೊಗಳುತ್ತಾರೆ: "ಮ್ಯಾಂಚೆಸ್ಟರ್‌ನ ಮೆಕಾನಿಕ್‌ಗಳು ಹಾಗೂ ಕುಶಲಕರ್ಮಿಗಳ ಆಸ್ತಿಯಾಗಿದ್ದು, ಶಾಲಾ ಭವನವೂ ಆಗಲಿರುವ ಈ ಕಟ್ಟಡದಲ್ಲಿ, ಎಲ್ಲ ಮಾನವ ಜ್ಞಾನದ ಶಾಖೆಗಳನ್ನು, ಇದುವರೆಗೂ ಬೇರೆಯವರಿಂದ ಸುಲಭವಾಗಿ ಮೋಸಕ್ಕೊಳಗಾಗುವಂತೆ ಅಜ್ಞಾನದಲ್ಲಿ ಇರಿಸಲಾದಂಥ ಜನಕ್ಕೆ, ಅತ್ಯಂತ ಅಗ್ಗವಾದ ದರದಲ್ಲಿ ತಲಪಿಸಲಾಗುತ್ತಿರುವುದು" ಒಂದು ಸ್ಫೂರ್ತಿದಾಯಕ ಬೆಳವಣಿಗೆ.

ಅನೇಕ ಸಂಸ್ಥೆಗಳನ್ನು ಇತ್ತೀಚೆಗೆ ಆರಂಭಿಸಲಾಗಿದೆ ಎಂಬುದನ್ನು ಗುರುತಿಸುತ್ತಾ ಅವರು ಹೇಳುತ್ತಾರೆ, ಅವೆಲ್ಲ "ಕಾರ್ಮಿಕ ವರ್ಗಕ್ಕಾಗಿಯೇ ರೂಪುಗೊಂಡ ಮೆಕಾನಿಕ್‌ಗಳ ಇನ್‌ಸ್ಟಿಟ್ಯೂಶನ್‌ಗಳು ಎಂಬುದೇನೋ ಸರಿ. ಆದರೆ ಅವುಗಳಲ್ಲಿ ಯಾವುದೇ ಒಂದು ಸಹ ಕಾರ್ಮಿಕರ ಸಾಮಾಜಿಕ ಸಂತೋಷ, ನೈತಿಕ ಪುನರುಜ್ಜೀವನ, ರಾಜಕೀಯ ಜ್ಞಾನ, ತಮ್ಮ ಸಮುದಾಯದ ವ್ಯವಹಾರಗಳನ್ನು ನಿರ್ವಹಿಸುವ ರೀತಿಯನ್ನು ಕುರಿತ ತಿಳಿವಳಿಕೆ ಇವುಗಳಿಗೆ ಸಂಬಂಧಿಸಿದ, ಅವಶ್ಯವಾದ ಜ್ಞಾನದ ಶಾಖೆಯನ್ನು ಕಲಿಸಲು ಪ್ರಯತ್ನಿಸಿಲ್ಲ" - ಆ ಸಂಸ್ಥೆಗಳ ಶಿಕ್ಷಕರ ಬಗ್ಗೆ ಡೊಹರ್ಟಿ ವಿಡಂಬನಾತ್ಮಕವಾಗಿ ಹೀಗೆನ್ನುತ್ತಾರೆ: "ಈ ಶಿಕ್ಷಕರು ಕಾರ್ಮಿಕನಿಗೆ, ಅವನು ಯಾವತ್ತೂ ನಿಯಂತ್ರಿಸಲಾಗದ ಗಾಳಿಯ ಚಲನೆಯ ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳುವುದು ಹೆಚ್ಚು ಮುಖ್ಯ ಎಂದು ಭಾವಿಸುತ್ತಾರೆಯೇ ಹೊರತು, ಅವನಿಗೆ ಸಂಕಟವನ್ನೋ ಅಥವಾ ಅದರ ಬದಲಿಗೆ ಸಂತಸವನ್ನೋ ತರಬಹುದಾದ ಸರ್ಕಾರಗಳ ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಲ್ಲ ಎಂದು ಭಾವಿಸುತ್ತಾರೆ; ಇದು ನೊಂದವರಿಗೆ ಅಪಮಾನ ಮಾಡಿದ ಹಾಗೆ." ಮೊದಲನೆಯದಾಗಿ "ನಮ್ಮ ಶ್ರಮದ ಉತ್ಪನ್ನಗಳಿಂದ ನಮ್ಮನ್ನು ವಂಚಿಸಲಾಗುತ್ತದೆ" ಅನಂತರ "ಆ ಉತ್ಪನ್ನವನ್ನು ಅನುಭೋಗಿಸುತ್ತಿರುವವರು, ತಮ್ಮ ಲೂಟಿ ಯಾವ ಅಡೆತಡೆಯೂ ಇಲ್ಲದೆ ಮುಂದುವರಿಯಲಿ ಎಂದು ನಮ್ಮನ್ನು ಭಿಕ್ಷುಕರನ್ನಾಗಿಸಿರುವ ಪರಿಸ್ಥಿತಿಗಳಿಂದ ನಮ್ಮ ಗಮನವನ್ನು ಬೇರೆ ಕಡೆ ತಿರುಗಿಸಲು ಯತ್ನಿಸುತ್ತಾರೆ."

ಇದಕ್ಕೆ ಸರಿಯಾದ ಉತ್ತರವೆಂದರೆ ಒಂದು ಸ್ವತಂತ್ರವಾದ 'ಮೆಕಾನಿಕ್ಸ್ ಹಾಲ್ ಆಫ್ ಸೈನ್ಸ್' (ಯಂತ್ರಜ್ಞರ ವಿಜ್ಞಾನ ಕೇಂದ್ರ) ಅನ್ನು ಸ್ಥಾಪಿಸುವುದು. "ಶ್ರೀಮಂತರ ಒಣ ಹೆಮ್ಮೆಯು ನಮಗೆ ನೀಡುವ ಹರಕು ಮುರುಕು ಪಾಠಗಳನ್ನು ನಾವು ಸ್ವಾಭಿಮಾನಿಗಳಾಗಿ ತಿರಸ್ಕರಿಸೋಣ. ಬದಲಿಗೆ ನಾವು ಜ್ಞಾನದ ಹಸಿವಿಗೆ ತಕ್ಕುದಾದ ಯಾವ ಬಂಧನವೂ ಇಲ್ಲದ ಜ್ಞಾನದ ಅರಿವಿನ ಹಬ್ಬದೂಟವನ್ನು ಏರ್ಪಾಡು ಮಾಡಿಕೊಳ್ಳೋಣ." ತೀವ್ರಗಾಮಿಗಳ ಅಭಿಪ್ರಾಯಗಳು ಡೊಹಾರ್ಟಿಯವರ ಮೇಲೆ ಪ್ರಭಾವ ಬೀರದೆ ಇರಲಿಲ್ಲ. ಆದ್ದರಿಂದ ಅವರು ಹೇಳುತ್ತಾರೆ: "ಮೆಕಾನಿಕ್ಸ್ ಇನ್‌ಸ್ಟಿಟ್ಯೂಶನ್ಸ್ ಎಂದು ತಪ್ಪಾಗಿ ನಾಮಕರಣ ಮಾಡಿರುವ ಸಂಸ್ಥೆಗಳ ಚೌಕಾಸಿ ಮಾಲೀಕರು, ಯಂತ್ರಜ್ಞರ ಮನಸ್ಸನ್ನು ಭವಿಷ್ಯದಲ್ಲಿ ಆಳಬೇಕೆಂದುಕೊಂಡಿರುವ ಪ್ರಭುಗಳು ಅರ್ಥಮಾಡಿಕೊಳ್ಳ-ಬೇಕಾಗಿರುವುದೇನೆಂದರೆ, ಅವರು ಕುಲೀನ ದುರಹಂಕಾರದಿಂದಲೂ, ಕೊಬ್ಬಿದ ಧೂರ್ತತನದಿಂದಲೂ ಎಸೆಯುವ ಜ್ಞಾನದ ತುಣುಕಿನಿಂದಲೇ ಮಿಲಿಯಾಂತರ ಜನ ತೃಪ್ತಿಪಟ್ಟುಕೊಳ್ಳುತ್ತಿದ್ದ ಕಾಲ ಆಗಿ ಹೋಯಿತು. 'ಶಾಲೆಯ ಶಿಕ್ಷಕರು ಹಾದಿತಪ್ಪಿದ್ದಾರೆ' ಎಂಬ ವಾಸ್ತವ ಅವರಿಗೆ ಅರ್ಥವಾಗಬೇಕು.'' ಎಂದು.

"ಒಮ್ಮೆ ಮ್ಯಾಂಚೆಸ್ಟರ್ ನಗರದ ಹಾಲ್ ಆಫ್ ಸೈನ್ಸ್ ಆರಂಭವಾದರೆ, ಅದರ ನಿದರ್ಶನ ಸೊಗಸಾಗಿರುತ್ತದೆ, ತುಂಬ ಭವ್ಯವಾಗಿರುತ್ತದೆ, ಅದರ ಪ್ರಭಾವ ಸೋಂಕಿನಂತೆ ವೇಗವಾಗಿ ಹರಡುತ್ತದೆ."[೧೦೪] ಸುಮಾರು ಎಂಟು ನೂರು

ಸದಸ್ಯರು ಒಂದು ಪೌಂಡ್ ಸ್ಟರ್ಲಿಂಗ್ ಮೌಲ್ಯದ ಷೇರುಗಳನ್ನು ಕೊಳ್ಳುವುದರೊಂದಿಗೆ ಯೋಜನೆಯು ಅತ್ಯಂತ ಉತ್ಸಾಹದಿಂದ ಆರಂಭವಾಗಿತ್ತು. ಕಡೆಗೆ ಡೆಟ್ರಾಸಿಯರ್ ಅವರ ಮನವಿಯನ್ನು ಕುರಿತು ಡೊಹರ್ಟಿ ಎಲ್ಲರ ಗಮನ ಸೆಳೆದರು.

"ಮ್ಯಾಂಚೆಸ್ಟರ್‌ನ ದುಡಿಯುವ ಜನರೇ, ನಮ್ಮ ಈ ಮಾನವೀಯ ಯೋಜನೆ ಜಾರಿಯಾಗುವುದಕ್ಕೆ ನೆರವು ನೀಡಿ: ನಿಮ್ಮ ಮಕ್ಕಳ ವಿಮೋಚನೆಗೆ ಶಿಲಾನ್ಯಾಸ ಮಾಡಿ, ನಾವು ಅನುಷ್ಠಾನ ಮಾಡಲೆತ್ನಿಸುತ್ತಿರುವ ಮಾನವತೆಯ ಭವ್ಯ ಕಾರ್ಯದಲ್ಲಿ ಭಾಗಿಗಳಾಗಿ: ಮಾನವ ಸಂತೋಷದ ಪರವಾಗಿ ನಿಮ್ಮ ವಿಶ್ವಾಸಪೂರ್ಣ ಸ್ಮಾರಕವನ್ನು ನಿಮ್ಮ ವಾರಸುದಾರರಿಗೆ ಬಿಟ್ಟು ಹೋಗಿ. ಇದನ್ನು ನೀವು ನಿಮಗಾಗಿ, ನಿಮ್ಮ ಮಕ್ಕಳಿಗಾಗಿ, ನಿಮ್ಮ ದೇಶಕ್ಕಾಗಿ, ಮುಂದಿನ ತಲೆಮಾರುಗಳಿಗಾಗಿ ಮಾಡಬೇಕಿದೆ.

ನಿಮ್ಮನ್ನು ಬಂಧಿಸಿರುವ ಬಡತನದ ಸಂಕೋಲೆಗಳನ್ನು ಬಲಪಡಿಸುವ, ರಾಜಕೀಯ ಅಧಃಪತನಕ್ಕೆ ಕೊಂಡೊಯ್ಯುವ ಪಡಖಾನೆಗಳಿಂದ ದೂರವಿರಿ, ನಿಮ್ಮ ಸ್ವಾತಂತ್ರ್ಯವನ್ನು ನೀವೇ ಕಡೆಯುವಂಥ ಶಿಲ್ಪಿಗಳಾಗಿ."[೧೦೫]

ಬರ್ಮಿಂಗ್‌ಹ್ಯಾಂನಲ್ಲೂ ಇಂಥ ಒಂದು ಯೋಜನೆ ಆರಂಭವಾಯಿತು ಮತ್ತು ೧೮೩೩ರಲ್ಲಿ ಅಲ್ಲಿನ ಕಟ್ಟಡ ಕೆಲಸಗಾರರ ಸಂಘವು ಒಂದು ಗಿಲ್ಡ್ ಹಾಲ್ ಅನ್ನು (ವೃತ್ತಿ ಸಂಘದ ಸಭಾಂಗಣ) ಕಟ್ಟಲು ತೀರ್ಮಾನಿಸಿತು. 'ದಾಖಲೆ'ಯ ಮೂಲಕ ಕಾರ್ಮಿಕ ಸಂಘವನ್ನು ಧ್ವಂಸಮಾಡಲು ಹೊರಟಿದ್ದ ಮಾಲೀಕರ ಜೊತೆ ಸಂಘರ್ಷ ನಡೆಯುತ್ತಿದ್ದ ಸುಡುಸುಡು ಸಂದರ್ಭದಲ್ಲಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ, ಮ್ಯಾಂಚೆಸ್ಟರ್‌ನಲ್ಲಿ ನಡೆದ ವಾರ್ಷಿಕ ಪ್ರತಿನಿಧಿ ಸಭೆಯಲ್ಲಿ ರಾಬರ್ಟ್ ಓವೆನ್ ಭಾಷಣ ಮಾಡಿದರು. ಅವರು 'ಶ್ರಮವೇ ಎಲ್ಲ ಸಂಪತ್ತಿನ ಮೂಲ' ಎಂಬ ವಿಷಯದ ಮೇಲೆ ಮಾತನಾಡಿದರು. ನಿಸ್ಸಂಶಯವಾಗಿಯೂ ಪ್ರತಿನಿಧಿಗಳನ್ನು ಅವರ ಮಾತು ಪ್ರಭಾವಿಸಿತು. ಗಿಲ್ಡ್ ಹಾಲ್‌ನಲ್ಲಿ ಕಛೇರಿಯ ಸ್ಥಳ, ಸಭಾಂಗಣ, ಅಲ್ಲದೆ ಹಿರಿಯರಿಗೂ ಮತ್ತು ಕಿರಿಯರಿಗೂ ಶಾಲೆ ನಡೆಯುತ್ತಿತ್ತು. 'ಪಯೊನೀರ್' ಪತ್ರಿಕೆಯು ಈ ಯೋಜನೆಯ ಬಗ್ಗೆ ಹೀಗೆಂದು ವರದಿ ಮಾಡಿತು: "ದುಡಿಯುವ ಜನತೆಯ ಇಂದಿನ ಮಹಾನ್ ಆಂದೋಲನಕ್ಕೆ ಸಂಬಂಧಿಸಿದ ಒಂದು ಘನವಾದ, ಅತ್ಯಂತ ಅಪೇಕ್ಷಿತವಾದ ಉದ್ದೇಶವು ಬರ್ಮಿಂಗ್ ಹ್ಯಾಂನ ಸಂಯುಕ್ತ ಕಟ್ಟಡ ಕೆಲಸಗಾರರಿಂದ ಸಾಧಿಸಲ್ಪಡುತ್ತಿದೆ. ಅದೆಂದರೆ ಕ್ರಿಯಾನಿರತ ಕಟ್ಟಡ ಕೆಲಸಗಾರರ ಸಂಸ್ಥೆ ಅಥವಾ ಕಾರ್ಮಿಕ ಸಂಘದ ಭವನ ನಿರ್ಮಾಣ." ಇದರಲ್ಲಿ ಸುಮಾರು ಸಾವಿರ ಜನ ಕುಳಿತುಕೊಳ್ಳಬಹುದು ಅಥವಾ ನಿಲ್ಲುವುದಾದರೆ ಅದರ ಮೂರರಷ್ಟು ಜನರನ್ನು ಸಹ ಹಿಡಿಸಬಹುದು, ಮತ್ತು ಸಮಿತಿಗಳಿಗೆ ಪ್ರತ್ಯೇಕ ಕೋಣೆಗಳ ಸಮುಚ್ಚಯವೂ ಇದೆ. "ನಮಗೆ ತಿಳಿದಂತೆ ಇಂಗ್ಲೆಂಡಿನಲ್ಲಿ ದುಡಿಯುವ ಜನ ತಮ್ಮದೇ ಸಭಾಭವನವನ್ನು ಕಟ್ಟಿಕೊಂಡ ಮೊದಲ ಯಶಸ್ವಿ ಯೋಜನೆ. ನಾವು 'ತಮ್ಮದೇ' ಎಂಬ ಪದವನ್ನು ಏಕೆ

ಒತ್ತುಕೊಟ್ಟು ಉಪಯೋಗಿಸುತ್ತಿದ್ದೇವೆ ಎಂದರೆ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್‌ಗಳು ನಿಜವಾಗಿಯೂ ಮೆಕಾನಿಕ್‌ಗಳಿಗೆ, ಕಾರ್ಮಿಕರಿಗೆ ಸೇರಿದ ಸಂಸ್ಥೆಗಳಾಗಿ ಉಳಿದಿಲ್ಲ; ಅವು ಒಂದಿಷ್ಟು ಒಳ್ಳೆಯ ಕೆಲಸಗಳನ್ನು ಮಾಡಿವೆ ಎಂದು ನಾವು ಒಪ್ಪುತ್ತೇವಾದರೂ ಈ ಮಾತನ್ನು ಹೇಳಲೇಬೇಕಾಗಿದೆ."[೧೦೬]

ಈ ರೀತಿಯಲ್ಲಿ ೧೮೩೦ರ ದಶಕದ ಆರಂಭದ ಹೊತ್ತಿಗೆ ಕಾರ್ಮಿಕ ವರ್ಗದ ನಾಯಕರುಗಳಿಗೆ ಸಾಮಾಜಿಕ ಬದಲಾವಣೆಗಾಗಿ ನಡೆಸಬೇಕಾದ ರಾಜಕೀಯ ಆಂದೋಲನಕ್ಕೆ ಕಾರ್ಮಿಕರು ಜ್ಞಾನವನ್ನು ಗಳಿಸಬೇಕಾದದ್ದು ಅನಿವಾರ್ಯ ಎಂಬುದು ಮನದಟ್ಟಾಗಿತ್ತು. ಮೊದಲಿಗೆ ಕರೆಸ್‌ಪಾಂಡಿಂಗ್ ಸೊಸೈಟಿಗಳಲ್ಲಿ (ತೀವ್ರಗಾಮಿ ಕುಶಲಕರ್ಮಿ ಸಂಘಗಳು) ಮತ್ತು ಅನಂತರ ೧೮೧೫-೧೯ರ ಅವಧಿಯ ಸಮೂಹ ಆಂದೋಲನಗಳಲ್ಲಿ ಅವರು, ಆರ್ಥಿಕ-ಸಾಮಾಜಿಕ ಬದಲಾವಣೆಯ ಉದ್ದೇಶವಿದ್ದ ರಾಜಕೀಯ ಹೋರಾಟವನ್ನು ವ್ಯವಸ್ಥಿತ ಶಿಕ್ಷಣದ ಅಗತ್ಯದೊಂದಿಗೆ ಬೆಸೆಯಲಾರಂಭಿಸಿದ್ದರು. ಅನಂತರದ ದಿನಗಳಲ್ಲಿ ಮಕ್ಕಳ ವಿದ್ಯಾಭ್ಯಾಸವು ಚಳವಳಿಯ ಅಗತ್ಯವಾದ ಭಾಗ ಎನ್ನುವಂತಾಯಿತು ಮತ್ತು ಆ ಶಿಕ್ಷಣವು ಧಾರ್ಮಿಕ ಪಂಥೀಯ ತಿಳಿವಳಿಕೆ, ಕರ್ಮಠಸಿದ್ಧಾಂತಗಳಿಗೆ ವಿರುದ್ಧವಾಗಿ ವಿಜ್ಞಾನ ಮತ್ತು ವಿಚಾರದ ಶಿಕ್ಷಣವಾಗಿತ್ತು.

ಇದೇ ಸಮಯದಲ್ಲಿ ಕಾರ್ಮಿಕ ವರ್ಗದ ದೃಷ್ಟಿಕೋನದಿಂದ ಅರ್ಥಶಾಸ್ತ್ರಜ್ಞ ಡೇವಿಡ್ ರಿಕಾರ್ಡೋನ ಸಿದ್ಧಾಂತಗಳನ್ನು ಅಭಿವೃದ್ಧಿಗೊಳಿಸಿದ ರಾಜಕೀಯ ಅರ್ಥಶಾಸ್ತ್ರದ ವಿದ್ವಾಂಸರು ಕಾರ್ಮಿಕವರ್ಗದ ಚಟುವಟಿಕೆಗಳಿಗೆ ಸೈದ್ಧಾಂತಿಕ ಬುನಾದಿಯನ್ನು ಒದಗಿಸಲಾರಂಭಿಸಿದರು. ಪ್ಲೇಸ್ ಮತ್ತು ಮಿಲ್‌ರವರು ಪ್ರಚುರಪಡಿಸಿದ ಆರ್ಥಿಕ ನಿಯಮಗಳಿಂದ ಹೇಗೆ ಬಂಡವಾಳಶಾಹಿ ವ್ಯವಸ್ಥೆಯು ಅಭಿವೃದ್ಧಿ ಹೊಂದಿತೋ ಅದೇ ರೀತಿಯಲ್ಲಿ, ಕಾರ್ಮಿಕವರ್ಗದ ಬೆಂಬಲಿಗರಾಗಿದ್ದ ರಾಜಕೀಯ ಅರ್ಥಶಾಸ್ತ್ರಜ್ಞರು ತಮ್ಮದೇ ಆದ ಯೋಜನೆಗಳನ್ನು, ವಿಶ್ಲೇಷಣೆಗಳನ್ನು ಮುಂದಿಟ್ಟರು. ಇವುಗಳಿಗೆ ಮತ್ತು ಜೊತೆಯಲ್ಲಿ ಪೇಯ್ನ್‌ನಿಂದ ಬಳುವಳಿಯಾಗಿ ಬಂದ ವಿಚಾರಶೀಲ ದೃಷ್ಟಿಕೋನಕ್ಕೆ ವಿಶಾಲವಾದ ಪ್ರತಿಕ್ರಿಯೆ ದೊರಕಿತು. ೧೮೨೦ ಮತ್ತು ೩೦ರ ದಶಕದ ಪ್ರಾರಂಭದಲ್ಲಿ ಇಂಥ ವಿಭಿನ್ನ ಅಭಿಪ್ರಾಯಗಳ ಮಧ್ಯದ ಸಂಘರ್ಷವು, ಕಾರ್ಮಿಕರ ವಾಸ್ತವಿಕ ಹೋರಾಟದ ಅನುಭವದಲ್ಲಿ ಮೂರ್ತರೂಪವನ್ನು ಪಡೆದುಕೊಂಡಿತು. ಇದರ ಫಲವಾಗಿ ಒಂದು ಹೊಸ ರೀತಿಯ ಶಿಕ್ಷಣ ಅಗತ್ಯವಾಗಿದೆ ಎಂಬ ತಿಳಿವಳಿಕೆ ಬೆಳೆಯಿತು ಹಾಗೂ ಮಾಲೀಕರು ಮತ್ತಿತರರು ನೀಡುತ್ತಿದ್ದ ಶಿಕ್ಷಣದ ಮಾದರಿಗಳ ವಿರುದ್ಧ ಪ್ರಜ್ಞಾಪೂರ್ವಕ ವಿರೋಧ ಮೊಳೆಯಿತು. ಇದರಿಂದಾಗಿ ಕಾರ್ಮಿಕರ ಜ್ಞಾನೋದಯಕ್ಕಾಗಿ ಸ್ವತಂತ್ರವಾದ ಸಂಸ್ಥೆಗಳನ್ನು ಮತ್ತು ಶಾಲೆಗಳನ್ನು ಸ್ಥಾಪಿಸಬೇಕೆಂಬ ಪ್ರಯತ್ನಗಳು ಸಹ ಆರಂಭವಾದವು.

೧೮೩೨ರ ಹೊತ್ತಿಗೆ ಸಂಘರ್ಷದಲ್ಲಿರುವ ತತ್ತ್ವಗಳು ಯಾವುವು ಎಂಬುದು ಸ್ಪಷ್ಟವಾಗತೊಡಗಿತು. ಹೊಸ ಸಂಸ್ಥೆಗಳನ್ನು ನಿರ್ಮಿಸಲಾಗುತ್ತಿತ್ತು. ಸ್ವತಂತ್ರ

ಕಾರ್ಮಿಕ ಚಟುವಟಿಕೆಗಳ ಮಾದರಿ ಸ್ಥಾಪಿತವಾಗುತ್ತಿತ್ತು. ಆ ವರ್ಷದಲ್ಲಿ ದಿ ರಿಫಾರ್ಮ್ ಆ್ಯಕ್ಟ್ (ಸುಧಾರಣಾ ಕಾಯಿದೆ) ಅನ್ನು ಅಂಗೀಕರಿಸಲಾಯಿತು. ಬ್ರೌಘಾಮ್ ಅವರು ಲಾರ್ಡ್ ಚಾನ್ಸೆಲರ್ ಆಗಿ ವಿಗ್ ಪಕ್ಷವು ಅಧಿಕಾರದಲ್ಲಿ ಮುಂದುವರಿಯಿತು. ಮಧ್ಯಮ ವರ್ಗದೊಂದಿಗೆ (ಬೂರ್ಶ್ವಾ ವರ್ಗದೊಂದಿಗೆ) ಸೇರಿಕೊಂಡು ತಮ್ಮ ಮತದಾನದ ಹಕ್ಕನ್ನು ವಿಸ್ತರಿಸಿಕೊಳ್ಳಲು ಹಾಗೂ ಸಂಸತ್ತಿನಲ್ಲಿ ಸುಧಾರಣೆಯನ್ನು ತರಲು ಕಾರ್ಮಿಕರು ನಡೆಸಿದ್ದ ಹೋರಾಟದಿಂದ ಅವರಿಗೆ ಏನೂ ಲಾಭವಾಗಿರಲಿಲ್ಲ. ಇಲ್ಲಿಂದಾಚೆಗೆ ಎರಡೂ ವರ್ಗಗಳ ಸಂಬಂಧದ ನಡುವೆ ಹೊಸ ಘಟ್ಟ ಆರಂಭವಾಗುತ್ತದೆ. ಇಲ್ಲಿಂದ ಮುಂದೆ ಕಾರ್ಮಿಕ ವರ್ಗವು ಮೊದಲ ಬಾರಿಗೆ ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲಾರಂಭಿಸಿತು.

## ಟಿಪ್ಪಣಿಗಳು:

1. ಇಂಗ್ಲೆಂಡಿನ ಸಂಸತ್ತಿನ ಚರಿತ್ರೆ, ಸಂಪುಟ ೩೧, ಕಾಲಂ ೭೦೭; ರಾಜದ್ರೋಹದ ಕಾರ್ಯಗಳನ್ನು ಕುರಿತ ಹೌಸ್ ಆಫ್ ಕಾಮನ್ಸ್‌ನ ಗೋಪ್ಯ ಸಮಿತಿಯ ಎರಡನೇ ವರದಿ.
2. ಪಿ.ಎ. ಬ್ರೌನ್‌ರವರಿಂದ ಉಲ್ಲೇಖಿತವಾದ "ಇಂಗ್ಲೆಂಡಿನ ಇತಿಹಾಸದಲ್ಲಿ ಫ್ರೆಂಚ್ ಕ್ರಾಂತಿ" (೧೯೧೮) ಪುಟ ೬೨-೬೩.
3. ಎನ್. ಹ್ಯಾನ್ಸ್ ವಿರಚಿತ "೧೮ನೇ ಶತಮಾನದಲ್ಲಿನ ಶಿಕ್ಷಣದ ಹೊಸ ಪ್ರವೃತ್ತಿಗಳು" ಎಂಬ ಪುಸ್ತಕದಲ್ಲಿ (೧೯೫೧), ಪುಟ ೧೭೮. ಅಲ್ಲಿ ಉಲ್ಲೇಖಿತವಾದ, ಚರ್ಚ್‌ನಲ್ಲಿ ಮತ್ತು ಪ್ರಭುತ್ವದಲ್ಲಿ ಇದ್ದ ಭ್ರಷ್ಟತೆಯ ವಿರುದ್ಧ ಎದ್ದಂಥ ``ಸತ್ಯದ ಧ್ವನಿಗಳು"ವಿನ ವಿಭಾಗ ೨೨.
4. ಆರ್.ಕೆ. ವೆಬ್‌ರವರ 'ಬ್ರಿಟಿಷ್ ವರ್ಕಿಂಗ್ ಕ್ಲಾಸ್ ರೀಡರ್' ಪುಸ್ತಕದಲ್ಲಿ (೧೯೫೫) ೩೬-೭ ಉಲ್ಲೇಖಿತ.
5. (ಹೆನ್ರಿ ಡಂಕ್ಲೆ ಅವರಿಂದ ೧೮೯೩ರಲ್ಲಿ ಸಂಪಾದಿತ)- "ಅರ್ಲಿ ಡೇಸ್"-ಸ್ಯಾಮ್ಯುಯೆಲ್ ಬ್ಯಾಮ್‌ಫೋರ್ಡ್ ೫೩-೪.
6. "ಪಾರ್ಲಿಮೆಂಟರಿ ಹಿಸ್ಟರಿ ಆಫ್ ಇಂಗ್ಲೆಂಡ್", ಸಂಪುಟ ೩೧, ಪುಟ ೭೦೭-೧೯, ೮೪೦-೨.
7. ಥಾಮಸ್ ವಾಕರ್ ವಿರುದ್ಧ ದೋಷಾರೋಪಣೆಯ ವಿಚಾರಣೆಯ ಸಮಗ್ರ ವಿವರಗಳು (೧೭೯೪), ೩.
8. "ಇತ್ತೀಚೆಗೆ ಅನೇಕ ಸ್ಥಳಗಳಲ್ಲಿ ಭಾಷಣ, ವಾಗ್ವಾದ, ಚರ್ಚೆಗಳನ್ನು ನಡೆಸಲಾಗುತ್ತಿದೆ. ಇವು ಅನೇಕ ಬಾರಿ ರಾಜದ್ರೋಹದ, ಅನೈತಿಕ ಗುಣವಿರುವಂಥವು ಹಾಗಾಗಿ ಈ ಕಾನೂನಿನ ಪ್ರಕಾರ ಮನೆಯಲ್ಲಾಗಲೀ, ಬಯಲಿನಲ್ಲಾಗಲೀ ಇಂಥ ಸಭೆಗಳನ್ನು, ಸಾರ್ವಜನಿಕ ಚರ್ಚೆಗಳನ್ನು ನಡೆಸಿದರೆ, ಅದು ಯಾವುದೇ ವಿಷಯದ ಬಗ್ಗೆಯೇ ಇರಲಿ, ಅಂಥ ಜಾಗಕ್ಕೆ ಪ್ರವೇಶ ಶುಲ್ಕ ನಿಗದಿಯಾಗಿರಲಿ ಅವುಗಳನ್ನು ಈ ಕಾನೂನಿನ ಪ್ರಕಾರ ನಿಯಮಬಾಹಿರ ಎಂದು ಪರಿಗಣಿಸಲಾಗುತ್ತದೆ. ಇವು ನಡೆಯುವುದೇ ಆದರೆ ನಿಗದಿತ ರೀತಿಯಲ್ಲಿ ಪೂರ್ವಾನುಮತಿಯನ್ನು ಪಡೆದಿರಬೇಕು. (ಎಫ್. ಪಾಡ್‌ಮೋರ್‌ರವರ 'ರಾಬರ್ಟ್ ಓವೆನ್' ಪುಸ್ತಕ, ೧೯೦೬), ೫೨-೩.
9. 'ತೀವ್ರಗಾಮಿಯೊಬ್ಬನ ಬದುಕು' ಲೇ. ಸ್ಯಾಮ್ಯುಯೆಲ್ ಬ್ಯಾಮ್‌ಫೋರ್ಡ್ (ಸಂ. ಹೆನ್ರಿ ಡಂಕ್ಲೆ ೧೮೯೩), ೧೨.
10. 'ಮ್ಯಾಂಚೆಸ್ಟರ್' ಕುರಿತು ವೈಯಕ್ತಿಕ ನೆನಪು, ಚಾರಿತ್ರಿಕ ಚಿತ್ರಣ-ಎ. ಪ್ರೆಂಟಿಸ್ (೧೮೫೧), ೧೧೬.
11. ವಿಲಿಯಂ ಲವೆಟ್‌ರವರ "ಲೈಫ್ ಅಂಡ್ ಸ್ಟ್ರಗಲ್ ಆಫ್ ವಿಲಿಯಂ ಲವೆಟ್" (೧೮೭೬), ೩-೫.
12. ಥಾಮಸ್ ಕೂಪರ್- "ಲೈಫ್ ಆಫ್ ಥಾಮಸ್ ಕೂಪರ್" ೨ನೇ ಮುದ್ರಣ (೧೮೭೨), ೭, ೧೩, ೩೨-೩೩.
13. ಟಿ. ಸಿ. ಕ್ಯಾಂಪ್‌ಬೆಲ್- "ದ ಬ್ಯಾಟಲ್ ಆಫ್ ದಿ ಪ್ರೆಸ್, ಆ್ಯಸ್ ಟೋಲ್ಡ್ ಇನ್ ದ ಲೈಫ್ ಆಫ್ ರಿಚರ್ಡ್ ಕಾರ್ಲೈಲ್" (೧೮೯೯), ೧೦-೧೧.
14. ಎ. ಆರ್. ಸ್ಕೋಯೆನ್ "ದ ಚಾರ್ಟಿಸ್ಟ ಚಾಲೆಂಜ್"- (೧೯೫೮), ೨.

15. ಜೆ.ಎಲ್. ಮತ್ತು ಬಿ. ಹ್ಯಾಮಂಡ್ ಅವರ 'ದ ಟೌನ್ ಲೇಬರರ್' (೧೯೧೭) ೨೪೯.
16. ಡಬ್ಲ್ಯು.ಜೆ. ಲಿಂಟನ್ ಅವರ 'ಜೇಮ್ಸ್ ವ್ಯಾಟ್ಸನ್, ಎ. ಮೆಮೊಯಿರ್' (೧೮೮೦), ೧೫-೧೬.
17. ಜಿ.ಎ. ಆಲ್‌ಡ್ರೆಡ್ ಅವರ 'ರಿಚರ್ಡ್ ಕಾರ್ಲೈಲ್ -ಹಿಸ್ ಲೈಫ್ ಅಂಡ್ ಟೈಮ್ಸ್', (೩ನೇ ಮುದ್ರಣ ೧೯೪೧), ೬೦; ಹೋಲಿಸಿ: ಕ್ಯಾಂಪ್‌ಬೆಲ್, ಪೂರ್ವೋಕ್ತ, ೧೨.
18. ಲಿಂಟನ್, ಪೂರ್ವೋಕ್ತ, ೧೭-೧೮.
19. ಲವೆಟ್, ಪೂರ್ವೋಕ್ತ, ೩೪-೩೫.
20. ಕೂಪರ್, ಪೂರ್ವೋಕ್ತ, ೫೩-೫೬.
21. ಕ್ಯಾಂಪ್‌ಬೆಲ್, ಪೂರ್ವೋಕ್ತ, ೫೭-೫೮.
22. ಲಿಂಟನ್, ಪೂರ್ವೋಕ್ತ, ೧೯.
23. ವಾಲಾಸ್‌ರ ``ದ ಲೈಫ್ ಆಫ್ ಫ್ರಾನ್ಸಿಸ್ ಪ್ಲೇಸ್" (೪ನೇ ಮುದ್ರಣ ೧೯೫೧), ೧೭-೧೯; ಜಿ.ಡಿ.ಎಚ್ ಕೋಲ್ ಅವರ "ಲೈಫ್ ಆಫ್ ವಿಲಿಯಂ ಕಾಬೆಟ್", (೩ನೇ ಮುದ್ರಣ ೧೯೪೭), ೨೯-೩.
24. ಸ್ಯಾಮ್ಯುಯೆಲ್ ಬ್ಯಾಮ್‌ಫೋರ್ಡ್, ಪೂರ್ವೋಕ್ತ, ೧೨.
25. ಇದು ಮತ್ತು ಮುಂದಿನ ವರದಿಗಳನ್ನು ಲ್ಯಾಂಕಾಶೈರ್ ಮ್ಯಾಜಿಸ್ಟ್ರೇಟ್‌ರ ಗುಪ್ತಚಾರ ಹಸ್ತಪ್ರತಿ ವರದಿಯಿಂದ ತೆಗೆದುಕೊಳ್ಳಲಾಗಿದೆ. ಮ್ಯಾಂಚೆಸ್ಟರ್ ಪರಾಮರ್ಶನ ಗ್ರಂಥಾಲಯದ ಈ ಹಸ್ತಪ್ರತಿಯ (ಎಂಎಸ್ ಎಫ್ ೩೬೩, ಡಿ೧). ಬಗ್ಗೆ ತಿಳಿಯಪಡಿಸಿದ್ದಕ್ಕಾಗಿ ಡೊನಾಲ್ಡ್ ರೀಡ್‌ರ "ಹ್ಯಾಂಪ್‌ಡೆನ್ ಕ್ಲಬ್ಸ್" ಲೇಖನಕ್ಕೆ ಋಣಿ. ಮ್ಯಾಂಚೆಸ್ಟರ್ ಗಾರ್ಡಿಯನ್, ಅಕ್ಟೋಬರ್ ೨, ೧೯೫೬.
26. ಬ್ಲಾಕ್ ಡ್ವಾರ್ಫ್, ೨೧ ಏಪ್ರಿಲ್ ೧೮೧೯.
27. ಹತ್ತೊಂಬತ್ತನೇ ಶತಮಾನದ ಕೆಲವು ಕಾರ್ಮಿಕ ಚಳವಳಿಗಳು (೧೯೪೮), ೩೫, ಆರ್.ಎಫ್. ವೇರ್‌ಮಾತ್.
28. ಅದೇ ಗ್ರಂಥ, ೪೩.
29. ವೇರ್‌ಮೌತ್, ಪೂರ್ವೋಕ್ತ, ೪೯.
30. ಅದೇ ಗ್ರಂಥ, ೪೯.
31. ಮ್ಯಾಂಚೆಸ್ಟರ್ ಅಬ್ಸರ್ವರ್ ಮೇ ೮, ೧೮೧೯; ಡೋನಾಲ್ಡ್ ರೀಡ್ ಅವರ ಪೀಟರ್‌ಲೂ ಗ್ರಂಥದಲ್ಲಿ ಉದ್ಧೃತ (೧೯೫೮), ೪೮.
32. 'ಬ್ಲಾಕ್ ಡ್ವಾರ್ಫ್', ಏಪ್ರಿಲ್ ೬, ೧೮೧೯.
33. "ಎಳೆಯರಿಗೆ ಓದು, ಬರೆಹ, ಗಣಿತಗಳಲ್ಲಿ ತರಬೇತಿ ನೀಡಲು ಓಲ್ಡ್ ಹ್ಯಾಮ್‌ನಲ್ಲಿ ಬೆಂಚು ಇತ್ಯಾದಿ ಸೌಕರ್ಯಗಳಿರುವ ಕೋಣೆಯೊಂದನ್ನು ಮೀಸಲಾಗಿಡಲಾಗಿದೆ ಎಂಬುದು ನಿಮಗೂ ನಿಮ್ಮ ಓದುಗರಿಗೂ ಹರ್ಷದ ಸುದ್ದಿಯಾಗುತ್ತದೆ. ಕೆಲವೇ ವಾರಗಳಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳು, ಬೇಕಾದಷ್ಟು ಶಿಕ್ಷಕರು ಬಂದು ಸೇರಿದ್ದಾರೆ.'' ಬ್ಲಾಕ್ ಡ್ವಾರ್ಫ್, ೨ ಜೂನ್ ೧೮೧೯.
34. ಮ್ಯಾಂಚೆಸ್ಟರ್ ಅಬ್ಸರ್ವರ್, ೨೬ ಜೂನ್ ೧೮೧೯; ರೀಡ್‌ನಲ್ಲಿ ಉದ್ಧೃತ, ಪೂರ್ವೋಕ್ತ, ೫೩.
35. ವೇರ್‌ಮೌತ್, ಪೂರ್ವೋಕ್ತ, ೪೯.
36. ಡಬ್ಲು÷ಯ.ಎಚ್. ವಿಕ್‌ವಾರ್ ಅವರ "ದ ಸ್ಟ್ರಗಲ್ ಫಾರ್ ದ ಫ್ರೀಡಮ್ ಆಫ್ ದ ಪ್ರೆಸ್" - ೧೯೨೮, ಪುಟ ೫೪.
37. ಎ. ಅಸ್ಪಿನಾಲ್ ಅವರ "ಪಾಲಿಟಿಕ್ಸ್ ಅಂಡ್ ದ ಪ್ರೆಸ್" (೧೯೪೯), ಪುಟ ೫೪.
38. ಸಿ.ಡಿ. ಕೊಲೆಟ್ ಅವರ "ಹಿಸ್ಟರಿ ಆಫ್ ದ ಟ್ಯಾಕ್ಸಸ್ ಆನ್ ನಾಲೆಡ್ಜ್" ೧೮೯೯, ಸಂಪುಟ ೧, ೧೭; ವಿಕ್‌ವಾರ್, ಪೂರ್ವೋಕ್ತ, ೧೩೮.
39. ವಿಕ್‌ವಾರ್, ಪೂರ್ವೋಕ್ತ, ಪುಟ ೫೬, ೫೭-೫೯.
40. ಕ್ಯಾಂಪ್‌ಬೆಲ್, ಪೂರ್ವೋಕ್ತ, ಎಪಿಪಿ. iv, ೩೨೦.
41. 'ದ ಮ್ಯಾನ್ ಇನ್ ದ ಮೂನ್' (೧೮೨೦) ಪುಟ ೧೭೭ರ ಎದುರಿನ ಚಿತ್ರವನ್ನು ನೋಡಿ.
42. ಎ ನ್ಯೂ ವ್ಯೂ ಆಫ್ ಸೊಸೈಟಿ (೧೮೧೩)- ಮುಖಪುಟ.
43. ಮೇಲೆ ಹೇಳಿದ ಪುಸ್ತಕದ ಮೂರನೇ ಪ್ರಬಂಧದಲ್ಲೇ ಓವೆನ್‌ರವರ ಶಿಕ್ಷಣವನ್ನು ಕುರಿತ ಸಿದ್ಧಾಂತ ಸಂಪೂರ್ಣವಾಗಿ ಸಿಗುತ್ತದೆ.
44. ಪಾಡ್‌ಮೋರ್, ಪೂರ್ವೋಕ್ತ, ೯೨-೭.

45. ಪಾಡ್‌ಮೋರ್, ಪೂರ್ವೋಕ್ತ, ಪುಟ ೧೪೨-೧೫೦. ಶಾಲೆ ಮತ್ತು ಅಲ್ಲಿನ ಶೈಕ್ಷಣಿಕ ಸಾರ, ಬೋಧನಾ ವಿಧಾನಗಳ ಬಗ್ಗೆ ಓವೆನ್‌ರ ದೊಡ್ಡಮಗ ಡೇಲ್‌ಓವೆನ್ "ಔಟ್‌ಲೈನ್ ಆಫ್ ದ ಸಿಸ್ಟಮ್ ಆಫ್ ಎಜುಕೇಶನ್ ಅಟ್ ನ್ಯೂ ಲ್ಯಾನಾರ್ಕ್" ಎಂಬ ಪುಸ್ತಕವನ್ನೂ ಬರೆದಿದ್ದಾರೆ.
46. ಇ. ಗಾರ್ನೆಟ್- "ದ ಲೈಫ್ ಆಫ್ ಡಬ್ಲ್ಯು.ಕೆ.ಯಜೆ. ಫಾಕ್ಸ್" ೧೯೧೦ (೪೮-೪೯).
47. (ಪಾಡ್‌ಮೋರ್, ಪೂರ್ವೋಕ್ತ, ಪುಟ ೨೯೯-೩೦೦) ನ್ಯೂ ಹಾರ್ಮೊನಿಯಲ್ಲಿನ ಓವೆನ್‌ರ ಸಮುದಾಯದ ಬಗ್ಗೆ, ಅಲ್ಲಿ ಶಿಕ್ಷಣಕ್ಕೆ ನೀಡಿದ ವಿಶೇಷ ಗಮನದ ಬಗ್ಗೆ ಓದಿ. ಎ. ಇ. ಬೆಸ್ಟರ್ ಅವರ "ಬ್ಲಾಕ್‌ವುಡ್ಸ್ ಯುಟೋಪಿಯಾಸ್" (೧೯೫೦). ಇದರಲ್ಲಿ ಓವೆನ್‌ರ 'ಬೋಟ್ ಲೋಡ್ ಆಫ್ ನಾಲೆಡ್ಜ್' ಅನ್ನು ಇತಿಹಾಸದ ಒಂದು ಗಮನಾರ್ಹ ಬೌದ್ಧಿಕ ವಲಸೆ ಎನ್ನಲಾಗಿದೆ. (ಪುಟ ೧೩೩). ಓದಿ: ಮಾರ್ಕ್ ಹಾಲೋವೇ ಅವರ "ಹೆವೆನ್ಸ್ ಆನ್ ಅರ್ತ್" (೧೯೫೧), ಅಧ್ಯಾಯ ೪.
48. "ನ್ಯೂ ಲ್ಯಾನಾರ್ಕ್ ಕೌಂಟಿಯ ವರದಿ (೧೮೨೦) "ಎ ನ್ಯೂ ವ್ಯೂ ಆಫ್ ಸೊಸೈಟಿ" ಪುಸ್ತಕದಲ್ಲಿ ಪುನರ್ ಮುದ್ರಣ (ಸಂ-ಜಿ.ಡಿ.ಎಚ್. ಕೋಲ್. ೧೯೨೭) ಪುಟ-೨೮೫.
49. ಅದೇ ಪುಸ್ತಕ, ೨೮೩.
50. ರಿಪೋರ್ಟ್ ಟು ದ ಕೌಂಟಿ ಆಫ್ ಲ್ಯಾನಾರ್ಕ್ (೧೮೨೦) ಜಿ.ಡಿ.ಎಚ್. ಕೋಲ್ ಅವರಿಂದ ಸಂಪಾದಿತ "ಏ ನ್ಯೂ ವ್ಯೂ ಆಫ್ ಸೊಸೈಟಿ" (೧೯೨೭)ರಲ್ಲಿ ಪುನರ್ ಮುದ್ರಿತ, ೨೮೪.
51. ಪಾಡ್‌ಮೋರ್, ಪೂರ್ವೋಕ್ತ, ಪುಟ ೩೫೦-೩೫೧.
52. ಅದೇ ಪುಸ್ತಕ, ೩೫೭.
53. ಈ ಪುಸ್ತಕದ ಪೂರ್ತಿ ಶೀರ್ಷಿಕೆ ಹೀಗಿದೆ: "ವಿಜ್ಞಾನ ಕ್ಷೇತ್ರದ ಮಹನೀಯರಿಗೊಂದು ಉಪನ್ಯಾಸ: ಮೂಢನಂಬಿಕೆಯ ಅಸಹ್ಯ ಹಿಡಿತದಿಂದ, ಕಿರುಕುಳದಿಂದ ಬಿಡಿಸಿ ಸತ್ಯವನ್ನು ಸ್ಥಾಪಿಸಲು ಮತ್ತು ಸತ್ಯದ ಕೇಂದ್ರ ಎಂಬ ಬಿರುದನ್ನು ಗ್ರೇಟ್ ಬ್ರಿಟನ್ ದೇಶಕ್ಕೆ ದೊರಕಿಸಿ ಕೊಡಲು ಕರೆ; ಜಗತ್ತಿನಿಂದ ಮೂಢನಂಬಿಕೆ ಮತ್ತು ಕಿರುಕುಳದ ಕರಾಳ ಕ್ಷೋಭೆಯುಂಟುಮಾಡುವ ಮೋಡಗಳನ್ನು ಹೊರದೂಡಿ ಮಾನವಕುಲಕ್ಕೆ ಬೆಳಕು ಸಿಗುವಂತಾಗಲಿ ಮತ್ತು ಇದು ಮಾತ್ರವೇ ಮಾನವಕುಲದಲ್ಲಿ ಶಾಂತಿಯನ್ನು ಸೌಹಾರ್ದತೆಯನ್ನು ಸ್ಥಾಪಿಸುತ್ತದೆ; ಇಲ್ಲಿ ತರುಣರಿಗೆ ಸೂಕ್ತವಾದ ಶೈಕ್ಷಣಿಕ ವ್ಯವಸ್ಥೆ ಯಾವುದು ಎಂಬುದರ ಬಗ್ಗೆ ಸೂಕ್ತ ಯೋಜನೆಯನ್ನು ತಯಾರಿಸಿ ಅವರ ತೀರ್ಮಾನಕ್ಕೇ ಬಿಡಲಾಗಿದೆ.''
54. ದ ರಿಪಬ್ಲಿಕನ್, ಸಂ. ೧೩, ಸಂಖ್ಯೆ ೫, ಫೆಬ್ರುವರಿ ೧೮೨೬.
55. 'ದಿ ಏಜ್ ಆಫ್ ರೀಸನ್' ಥಾಮಸ್ ಪೇಯ್ನ್, ಮರುಮುದ್ರಿತ ಗ್ರಂಥದಿಂದ. (ಸಂ. ಶ್ರೀಮತಿ ಬಾನರ್ ೧೯೦೮), ೧೯.
56. ಅದೇ ಪುಸ್ತಕ, ೨೦.
57. ಕಾರ್ಲೈಲ್‌ರ ಪುಸ್ತಕ. ಪೂರ್ವೋಕ್ತ, (ಎರಡನೇ ಮುದ್ರಣ ೧೮೨೨), ಪುಟ ೧೮-೨೦.
58. ಅದೇ ಗ್ರಂಥ, ೧೫.
59. ಕಾರ್ಲೈಲ್, ಪೂರ್ವೋಕ್ತ (೨ನೇ ಮುದ್ರಣ ೧೮೨೨), ೨೭.
60. ಅದೇ ಪುಸ್ತಕ, ೨೮-೯, ೩೩.
61. ಅದೇ ಪುಸ್ತಕ, ೩-೪.
62. ಕಾರ್ಲೈಲ್ , ಪೂರ್ವೋಕ್ತ (೨ನೇ ಮುದ್ರಣ ೧೮೨೨), ೩೦.
63. ಅದೇ ಪುಸ್ತಕ, ೩೪.
64. ಅದೇ ಪುಸ್ತಕ, ೩೧, ೩೬-೭.
65. ಅದೇ ಪುಸ್ತಕ, ೪೧.
66. ಕಾರ್ಲೈಲ್, ಪೂರ್ವೋಕ್ತ (೨ನೇ ಮುದ್ರಣ ೧೮೨೨), ೪. ಇದು ಬೌಘಮ್ ಅವರ ಎಜುಕೇಷನ್ ಬಿಲ್-೧೮೨೦ಕ್ಕೆ ಉಲ್ಲೇಖ.
67. ಅದೇ ಪುಸ್ತಕ, ೩೯.
68. ಆರ್.ಕೆ.ಪಿ. ಪ್ಯಾಂಕ್‌ಹರ್ಸ್ಟ್, ವಿಲಿಯಂ ಥಾಂಪ್ಸನ್(೧೯೫೪), ಪ್ಯಾಸಿಮ್.
69. "ಲೇಬರ್ ರಿವಾರ್ಡೆಡ್" (೧೮೨೭), ೭೩.
70. ಡಬ್ಲ್ಯು. ಥಾಂಪ್ಸನ್,- "ಎನ್ ಎನ್‌ಕ್ವಯರಿ ಇನ್ ಟು ದ ಪ್ರಿನ್ಸಿಪಲ್ಸ್ ಆಫ್ ದ ಡಿಸ್ಟ್ರಿಬ್ಯೂಶನ್ ಆಫ್ ವೆಲ್ತ್"(ಸಂ. ಡಬ್ಲ್ಯು. ಪಾರೆ ೧೮೫೦), ೧೯೯-೨೦೦.
71. ಅದೇ ಪುಸ್ತಕ, ೨೩೪.
72. ಥಾಂಪ್ಸನ್, ಪೂರ್ವೋಕ್ತ, ೨೨೩.

73. ಅದೇ ಪುಸ್ತಕ, ೨೨೮.
74. ಅದೇ ಪುಸ್ತಕ, ೨೩೧-೨.
75. ಥಾಂಪ್ಸನ್, ಪೂರ್ವೋಕ್ತ, ೨೩೫.
76. ಅದೇ ಪುಸ್ತಕ, ೨೩೫-೬.
77. ಥಾಂಪ್ಸನ್, ಪೂರ್ವೋಕ್ತ, ೨೩೨-೩.
78. ಅದೇ ಪುಸ್ತಕ, ೨೩೯.
79. ಅದೇ ಪುಸ್ತಕ, ೨೪೦.
80. ಅದೇ ಪುಸ್ತಕ, ೨೪೫.
81. ಥಾಂಪ್ಸನ್, ಪೂರ್ವೋಕ್ತ, ೨೪೭.
82. ಜೇಮ್ಸ್ ಮಿಲ್‌ರ ವರದಿ ಇಷ್ಟು ನಿಖರವಲ್ಲದಿದ್ದರೂ ಇನ್ನೂ ಆಶ್ಚರ್ಯಕರವಾಗಿದೆ. "ಶ್ರಮಿಕನ ಬಳಿ ಕಚ್ಚಾ ವಸ್ತುವೂ ಇಲ್ಲ. ಉಪಕರಣಗಳೂ ಇಲ್ಲ. ಇದನ್ನು ಕೊಡುವವನು ಬಂಡವಾಳಗಾರ. ಇದರಿಂದ ಬಂಡವಾಳಗಾರನಿಗೆ ನಿರೀಕ್ಷೆ ಇರುತ್ತದೆ." ಲೇಬರ್ ಡಿಫೆಂಡೆಡ್ ಅಗೇನ್‌ಸ್ಟ ದ ಕ್ಲೈಮ್ಸ್ ಆಫ್ ಕ್ಯಾಪಿಟಲ್ (೧೯೨೨ರ ಮುದ್ರಣ), ೩೪.
83. ಟಿ. ಹಾಡ್ಜ್ ಸ್ಕಿನ್- "ಲೇಬರ್ ಡಿಫೆಂಡೆಡ್ ಅಗೇನ್‌ಸ್ಟ ದ ಕ್ಲೆöÊಮ್ಸ್ ಆಫ್ ಕ್ಯಾಪಿಟಲ್" (೧೯೨೨) ೮೯-೯೦.
84. ಅದೇ ಪುಸ್ತಕ, ೧೦೦.
85. "ಮಾನವ ಸಂತೋಷವನ್ನು ಕುರಿತು ಉಪನ್ಯಾಸ"-ಜಾನ್ ಗ್ರೇ, (೧೯೩೧ರ ಆವೃತ್ತಿ), ಅನುಬಂಧ, ೭-೮.
86. ಪಾಡ್‌ಮೋರ್, ಪೂರ್ವೋಕ್ತ, ೩೮೫.
87. ಕೃಷಿಕಾರ್ಮಿಕರು, ಬಡಗಿಗಳು, ಗಾರೆ ಕೆಲಸದವರು, ಮುದ್ರಣಕಾರರು, ಕ್ಯಾಬಿನೆಟ್ ಮಾಡುವವರು, ಟರ್ನರ್ಸ್, ತೋಟಗಾರರು, ಬಣ್ಣ ಹಚ್ಚುವವರು, ಉಡುಪು ತಯಾರಿಸುವವರು, ದರ್ಜಿಗಳು, ಬ್ರೆಡ್ ಮಾಡುವವರು, ಅಕ್ಕಸಾಲಿಗರು, ಕಲಾಯಿಗಾರರು, ಕಂಚುಗಾರರು, ಮೋಚಿಗಳು, ಕಿರಾಣಿ ಅಂಗಡಿಯವರು, ಮನೆಕೆಲಸದವರು, ಪುಸ್ತಕಕ್ಕೆ ರಟ್ಟು ಕಟ್ಟುವವರು, ಇತ್ಯಾದಿ.'' ಅದೇ ಪುಸ್ತಕ, ೩೮೫.
88. ದ ಕೋ-ಆಪರೇಟರ್ ಸಂ. ೬, ಅಕ್ಟೋಬರ್ ೧, ೧೮೨೮, ೨೧. ಮೂಲ ಪತ್ರಿಕೆಯನ್ನು ಡಾ. ವಿಲಿಯಂ ಕಿಂಗ್ ಅಂಡ್ ದ ಕೊ-ಆಪರೇಟರ್, ೧೮೨೮-೩೦ (೧೯೨೨)ರಲ್ಲಿ ಮರುಮುದ್ರಣ ಮಾಡಲಾಗಿದೆ.
89. ದ ಕೋ-ಆಪರೇಟರ್, ಸಂ.೮, ೧೮೨೮ ಡಿಸೆಂಬರ್ ೧ರ ಸಂಚಿಕೆ.
90. ಸಹಕಾರ ಚಳವಳಿಯ ಎರಡನೇ ಮಹಾಧಿವೇಶನದ ನಡಾವಳಿಗಳ ವರದಿ ಅಕ್ಟೋಬರ್, ೧೮೩೧, ೨೪.
91. ಓವೆನ್‌ರವರಿಂದ ಸಂಪಾದಿತ 'ದ ಕ್ರೈಸಿಸ್' ಏಪ್ರಿಲ್ ೨೮, ೧೮೩೨, ೧೫, ಸಂಪುಟ ೧ ಸಂಚಿಕೆ ೪.
92. ಅದೇ ಪತ್ರಿಕೆ, ಸಂ. II, ಸಂಚಿಕೆ ೩೪, ಆಗಸ್ಟ್ ೨೪, ೧೮೩೩; ಸಂ. II, ಸಂಚಿಕೆ ೧೯, ಜನವರಿ ೪, ೧೮೩೪; ಸಂ. III, ಸಂಚಿಕೆ ೨೦, ಜನವರಿ ೧೧, ೧೮೩೪.

ಶಾರ್ಲೆಟ್ ಶಾಲೆಯ ಸಂವಿಧಾನದ ಅಂಶಗಳು: ೧. ಎಲ್ಲ ಮಕ್ಕಳಿಗೂ ತಮ್ಮ ಅಭಿಪ್ರಾಯ ಹೇಳಲು ಉತ್ತೇಜಿಸಬೇಕು. ೨. ಯಾವುದೇ ಪಂಥ ನಂಬಿಕೆಯನ್ನು ಹೇರಲಾಗದು. ೩. ವಾಸ್ತವಾಂಶಗಳನ್ನು ಮಾತ್ರ ಕಲಿಸಿ ಅದರ ಬಗ್ಗೆ ತೀರ್ಮಾನಿಸಲು ಸ್ವಾತಂತ್ರ್ಯ ನೀಡಬೇಕು. ೪. ಭೇದ-ಭಾವ ಮಾಡಲಾಗದು. ೫. ದಯೆ ಮತ್ತು ಪ್ರೀತಿಯಿಂದ ಮಕ್ಕಳನ್ನು ಬದಲಾಯಿಸಬೇಕೇ ಹೊರತು ಶಿಕ್ಷೆ, ಬಹುಮಾನ, ಹೊಗಳಿಕೆ, ತೆಗಳಿಕೆಗಳು ಸಲ್ಲದು. ೬. ಉಪಯುಕ್ತ ಜ್ಞಾನವನ್ನು ಕಲಿಸುವಲ್ಲಿ ಲಿಂಗಭೇದ ಇಲ್ಲ.

93. ದ ಥರ್ಡ್ ಕೋ-ಆಪರೇಟಿವ್ ಕಾಂಗ್ರೆಸ್ (ಏಪ್ರಿಲ್ ೨೩, ೧೮೩೨)ರ ನಡಾವಳಿಗಳು. ಸಂ. ಡಬ್ಲ್ಯು. ಕಾರ್ಪೆಂಟರ್ (೧೮೩೨). ದ ಫೋರ್ತ್ ಕೋ-ಆಪರೇಟಿವ್ ಕಾಂಗ್ರೆಸ್ (ಅಕ್ಟೋಬರ್ ೧, ೧೮೩೨)ರ ನಡಾವಳಿಗಳು. ಸಂ. ಡಬ್ಲ್ಯು. ಪಾರೆ (೧೮೩೨). ಅಂಕಿಅಂಶಗಳ ಕೋಷ್ಟಕಗಳು.
94. 'ದ ಕ್ರೈಸಿಸ್' ಸಂಪುಟ I, ಸಂಚಿಕೆ ೨೯, ಸೆಪ್ಟೆಂಬರ್ ೨೨, ೧೮೩೨, ೧೧೬.
95. "ರಾಬರ್ಟ್ ಓವೆನ್‌ರ ಬದುಕು, ಕಾಲ, ಪರಿಶ್ರಮ", (ಸಂ.-ಡಬ್ಲ್ಯೂ.ಸಿ. ಜೋನ್ಸ್-೧೮೯೦) ಸಂಪುಟ ೨, ಪುಟ ೪೭.

96. ಮೂರನೇ ಮತ್ತು ನಾಲ್ಕನೇ ಸಹಕಾರಿ ಚಳವಳಿಯ ಮಹಾಧಿವೇಶನಗಳ ನಡಾವಳಿಗಳು; ದ ಕ್ರೈಸಿಸ್ ಸಂಪುಟ III, ಸಂಚಿಕೆಗಳು ೭ ಮತ್ತು ೮, ಅಕ್ಟೋಬರ್ ೧೯, ೧೮೩೩, ೫೮-೯.
97. ಮೆಕಾನಿಕ್ಸ್ ಮ್ಯಾಗಜೈನ್ ಸಂಚಿಕೆ ೭, ಅಕ್ಟೋಬರ್ ೧೧, ೧೮೨೩, ೧೦೦.
98. ಜೆ. ಡಬ್ಲ್ಯು. ಹಡ್ಸನ್ ಅವರ "ವಯಸ್ಕರ ಶಿಕ್ಷಣದ ಇತಿಹಾಸ" ೧೮೫೧, ೪೩; ಎಮ್. ಟೈಲೆಕೋಟ್ ಅವರ "೧೮೫೧ಕ್ಕೆ ಮುಂಚಿನ ಯಾರ್ಕ್ ಶೈರ್ ಮತ್ತು ಲ್ಯಾಂಕಾಶೈರ್‌ನ ಮೆಕಾನಿಕಲ್ ಇನ್‌ಸ್ಟಿಟ್ಯೂಟ್‌ಗಳು" (೧೯೫೭), ೧೭; ಮೆಕಾನಿಕ್ಸ್ ಮ್ಯಾಗಜೈನ್ ಸಂಚಿಕೆ ೭, ಅಕ್ಟೋಬರ್ ೧೧, ೧೮೨೩, ೧೦೦-೧.
99. ಟೈಲೆಕೋಟ್, ಪೂರ್ವೋಕ್ತ, ೧೩೭ನೇ ಉಲ್ಲೇಖ; ಜಿ.ಜೆ. ಹಾಲಿಯೋಕೆ ಅವರ "ಸಹಕಾರಿ ಚಳವಳಿಯ ಚರಿತ್ರೆ (೧೮೭೫), ಸಂಪುಟ I, ೩೬೧.

ಹುಲ್ಮೆ ಸಾಲ್‌ಫೋರ್ಡ್ನ ಡೆಟ್ರಾಸಿಯರ್ಸ್, ಫೌಂಡೇಷನ್ ಆಫ್ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್‌ಗಳನ್ನು ಸ್ಥಾಪಿಸಿದ್ದನ್ನು ಅವರ ಮಿತ್ರರಾದ ಆಲ್ಡರ್‌ಮನ್ ಜಾನ್ ಶಟಲ್‌ವರ್ತ್ ``ಮೆಮೊಯಿರ್ಸ್ ಆಫ್ ಲೇಟ್ ರೌಲಂಡ್ ಡೆಟ್ರಾಸಿಯರ್‌ನಲ್ಲಿ ಉಲ್ಲೇಖಿಸಿದ್ದಾರೆ. ಅದು ೧೮೩೪ರ ಡಿಸೆಂಬರ್‌ನಲ್ಲಿ ಮ್ಯಾಂಚೆಸ್ಟರ್ ಟೈಮ್ಸ್ ನಲ್ಲಿ ಪ್ರಕಟಿತ.

100. ರೌಲಂಡ್ ಡೆಟ್ರಾಸಿಯರ್, "ಕಾರ್ಮಿಕ ವರ್ಗದ ನಡುವೆ ನೈತಿಕ ಮತ್ತು ರಾಜಕೀಯ ಶಿಕ್ಷಣವನ್ನು ಪ್ರಸರಿಸಬೇಕಾದ ಆವಶ್ಯಕತೆಯನ್ನು ಕುರಿತು ಉಪನ್ಯಾಸ" (೧೮೩೧), ೧೩.
101. ರೌಲಂಡ್ ಡೆಟ್ರಾಸಿಯರ್. 'ಮೆಕಾನಿಕ್ಸ್ ಹಾಲ್ ಆಫ್ ಸೈನ್ಸಸ್‌ನ ಧನಾತ್ಮಕ ಪರಿಣಾಮಗಳನ್ನು ಕುರಿತು' ಉಪನ್ಯಾಸ. ನ್ಯೂ ಮೆಕಾನಿಕ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಮಾಡಿದ್ದು. ಡಿಸೆಂಬರ್ ೩೧, ೧೮೩೧.
102. ಡೆಟ್ರಾಸಿಯರ್ ಅವರ ಅದೇ ಪುಸ್ತಕ, ೪.
103. ಡೆಟ್ರಾಸಿಯರ್ ಅವರ ಅದೇ ಪುಸ್ತಕ, ೫,೬.
104. 'ದ ಪೂರ್ ಮ್ಯಾನ್ಸ್ ಅಡ್ವೋಕೇಟ್ ಅಂಡ್ ಪೀಪಲ್ಸ್ ಲೈಬ್ರರಿ' ಸಂಚಿಕೆ ೬, ಫೆಬ್ರವರಿ ೨೫, ೧೮೩೨, ಪುಟ ೪೩-೪೪.
105. ಡೆಟ್ರಾಸಿಯರ್: ಅಡ್ರೆಸ್ ಆನ್ ದಿ ಅಡ್ವಾಂಟೇಜಸ್ ಆಫ್ ಇಂಟೆಂಡೆಡ್ ಮೆಕಾನಿಕ್ಸ್ ಹಾಲ್ ಆಫ್ ಸೈನ್ಸ್, ೮.
106. ದಿ ಪಯನೀರ್, ನವೆಂಬರ್ ೨, ೧೮೩೩; ಮತ್ತು ಆರ್.ಡಬ್ಲ್ಯು. ಪೋಸ್ಟ್‌ಗೇಟ್ ಅವರ 'ಬಿಲ್ಡರ್ಸ್ ಹಿಸ್ಟರಿ' (ದಿನಾಂಕವಿಲ್ಲ), ೧೦೦-೧೦ ಇದನ್ನೂ ನೋಡಿ.

- - -